ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 34

ಆಗಸ್ಟ್ 24. 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org



ಆಗಸ್ಟ್ 20 : ದುಡಿಯುವ ಜನರ ಸಂಘರ್ಷ



ದೇಶದ ಸಾರ್ವಭೌಮತೆ ಮೇಲೆ ಬಂದೆರಗಿದೆ ದಾಳಿ

ನಂದವಾಡಗಿ :



ನೀರಾವರಿಗಾಗಿ ನಡೆದಿದೆ ಇಲ್ಲಿ ಹೋರಾಟ




ಪ್ರಚಂಡ: ಈಗ ನೇಪಾಳ ಪ್ರಧಾನಿ



ಕಾಮ್ರೆಡ್ ಸೂರಿ ಒಂದು ನೆನಪು

ಜನಶಕ್ತಿ ಕನ್ನಡ ವಾರಪತ್ರಿಕೆ

'ಕಾಮ್ರೇಡ್ ಸೂರಿ' ಒಂದು ನೆನಪು...



ಅರಲಗೊಡಿನ ಕಾರ್ಷಿಕ ಪಾಳೆಯಗಾರಿ ಪರಿಸರದಲ್ಲಿ ಜನಿಸಿದ ಕುಡಿಯೊಂದು ಬೆಂಗಳೂರಿನ ಕೈಗಾರಿಕಾ ಕೇಂದ್ರದಲ್ಲಿ ಬಂದು ನೆಲೆಸಿ ಕರ್ನಾಟಕ ಕಾರ್ಮಿಕ ಚಳುವಳಿಯಲ್ಲಿ ಅಗ್ರಗಣ್ಯ ಸ್ಥಾನಪಡೆದ ಪ್ರಕ್ರಿಯೆಯನ್ನು ಇಲ್ಲಿ ದಾಖಲಿಸಲಾಗಿದೆ. ವ್ಯಕ್ತಿಗತವಾಗಿ ಹಾಗೂ ಕಾರ್ಮಿಕ ಚಳುವಳಿಯಲ್ಲಿ, ಕಮ್ಯುನಿಸ್ಟ್ ಚಳುವಳಿಯಲ್ಲಿ ಸೂರಿಯವರ ವಿಕಾಸದ ಹಾದಿಯನ್ನು ದಾಖಲಿಸಿದವರು, ಮೂರು ದಶಕಗಳಿಗೂ ಹೆಚ್ಚಿಗೆ ಅವರನ್ನು ಹತ್ತಿರದಿಂದ ಬಲ್ಲ ಹಿರಿಯ ನಾಯಕ

ಕಾಂ. ವಿ.ಜೆ.ಕೆ.ನಾಯರ್

ಸೂರಿಯವರ ಜನ್ಮ ದಿನ ಸಮೀಪಿಸುತ್ತಿರುವಾಗ ಅವರ ನೆನಪಿಗಾಗಿ ಲೇಖನ.

ಹಾಸನ ಜಿಲ್ಲೆಯ ಅರಕಲಗೂಡು ಗ್ರಾಮದಲ್ಲಿ 1924ರ ಅಗಸ್ಟ್ 24 ರಂದು ಸೂರಿಯವರು ಜನಿಸಿದರು. ಅವರ ಕುಟುಂಬ ಭೂಮಿಯ ಮೇಲೆ ಅವಲಂಬಿತವಾದ ಕುಟುಂಬವಾಗಿತ್ತು. 2002 ರ ಜುಲೈ 1 ರಂದು ನಮ್ಮನ್ನು ಅಗಲಿದ ಕಾಮ್ರೆಡ್ ಸ್ವಾಮಿರಾವ್ ಸೂರ್ಯನಾರಾಯಣ ರಾವ್ ಕಳೆದ ಶತಮಾನದ ಮೂರನೇ ದಶಕದಲ್ಲೇ ಬೆಂಗಳೂರಿಗೆ ಬಂದು ನೆಲೆಸಿ, ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದು ಇಂದು ಇತಿಹಾಸದ ಭಾಗವಾಗಿದೆ.

ಕಾಮ್ರೆಡ್ ಸೂರಿಯವರ ತಂದೆ ಸ್ವಾಮಿ ರಾವ್ ಬೆಂಗಳೂರಿಗೆ ಬಂದು ನೆಲೆಸುವಾಗ ಸೂರಿ ಮತ್ತು ಅವರ ಕಿರಿಯ ಸಹೋದರ ಇನ್ನೂ ಚಿಕ್ಕ ಹುಡುಗರು. ಆಗಿನ್ನೂ ಬೆಂಗಳೂರು ಪಿಂಚಣಿದಾರರ ಸ್ವರ್ಗವಾಗಿತ್ತು. ಸ್ವಾತಂತ್ರ್ಯ ಪೂರ್ವದ ಆ ಅವಧಿಯಲ್ಲಿಯೇ ಬೆಂಗಳೂರು ಕೈಗಾರಿಕಾ ಬೆಳವಣಿಗೆಯ ಲಕ್ಷಣಗಳನ್ನು ತೋರಿಸಲಾರಂಭಿಸಿತ್ತು. ಬೆಂಗಳೂರು ಅತ್ತ ಚೆನ್ನೈಯಿಂದ ಕೆ.ಟಿ.ಭಾಷ್ಯಂ ಮುಂತಾದ ಅಯ್ಯಂಗಾರ್‌ರನ್ನು ಆಕರ್ಷಿಸಿದ್ದರೆ, ಇತ್ತ ಅಂದಿನ ಅರಸೊತ್ತಿಗೆಯ ನೈಜ ರಾಜಧಾನಿ ಮೈಸೂರ್ ಪುಷ್ಕಳವಾಗಿ ವಿದ್ವಾನರನ್ನು, ಬುದ್ದಿಜೀವಿಗಳನ್ನು, ಆಡಳಿತಗಾರರನ್ನು ಒದಗಿಸಿತ್ತು. ಬೆಂಗಳೂರಿನ ವಾತಾವರಣದಲ್ಲಿ ಸೂರಿಯವರ ತಂದೆಯವರಿಗೆ ತಮ್ಮ ಪರಿಸ್ಥಿತಿಯನ್ನು ಉತ್ತಮಪಡಿಸಲಿಕ್ಕೇನೂ ಸಾಧ್ಯವಾಗದೇ ಯಾವದೋ ಒಳಸಂಚಿನಿಂದ ಅವರು ಇದ್ದುದೆಲ್ಲಾ ಕಳಕೊಂಡು ದಾರಿದ್ರ್ಯದಲ್ಲಿ ಆಸುನೀಗಿದರು. ಸೂರಿ ಮತ್ತು ಅವರ ತಮ್ಮನನ್ನು ಅವರ ತಾಯಿ ಬಹಳ ಕಷ್ಟದಲ್ಲಿ ಬೆಳೆಸಿದರು. ಹೀಗೆ ಸೂರಿ ಒಂದು ಕಾರ್ಷಿಕ ಪಾಳೆಯಗಾರಿ ಪರಿಸರದಿಂದ ಕೈಗಾರಿಕಾ ಕೇಂದ್ರವಾಗಿ ಬೆಳೆಯಲಾರಂಭಿಸಿದ್ದ ಒಂದು ವಸಾಹತುಶಾಹಿ ಪಟ್ಟಣಕ್ಕೆ ಸ್ಥಳಾಂತರಗೊಂಡರು.

ಸೂರ್ಯನಾರಾಯಣರಾವ್ ಅವರ ಶಿಕ್ಷಣ ಇಂಟರ್‌ಮಿಡಿಯಟ್ ಮಟ್ಟದಲ್ಲಿ ನಿಂತಿತು. ಅವರು ವಿದ್ಯಾರ್ಥಿ ಚಳುವಳಿಯ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.

ಸ್ವಾತಂತ್ರ್ಯ ಆಂದೋಲನಕ್ಕೆ

ತನ್ನ ಜೊತೆಯಲ್ಲಿ ಬೆಳೆದ ಹುಡುಗರಲ್ಲಿ ವ್ಯಕ್ತಗೊಂಡ ವಿದೇಶಿ ಆಳ್ವಿಕೆಯ ವಿರುದ್ಧದ ಭಾವನೆಗಳು ಮತ್ತು ವಸಾಹತುಶಾಹಿ ಆಳರಸರ ವಿರುದ್ಧ ಬುದ್ದಿಜೀವಿಗಳು ವ್ಯಕ್ತಪಡಿಸುತ್ತಿದ್ದ ಪ್ರತಿಭಟನೆಗಳು ಸೂರಿಯವರನ್ನು ಹೆಚ್ಚು ಆಕರ್ಷಿಸಿದವು. ಹೀಗೆ ಸೂರಿಯವರು ಕೆಲಸ ಬಿಟ್ಟು ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿದರು.

ಕೇವಲ ಘೋಷಣೆ ಕೂಗುತ್ತಾ ಜೈಲಿಗೆ ಹೋದವರಲ್ಲಿ ಸೂರಿ ಒಬ್ಬರಾಗಿರಲಿಲ್ಲ. ಅವರು ವಿದ್ಯಾರ್ಥಿ ಚಳುವಳಿಗಾರನಾಗುತ್ತಿದ್ದಂತೆಯೇ, ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಜೀವನದಲ್ಲಿ ನೆರವಾಗುವಂತಹ ಹಾಗೂ ಅದೇ ವೇಳೆಯಲ್ಲಿ ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯಗೊಳಿಸುವ ಚಟುವಟಿಕೆಗಳನ್ನು ನಡೆಸುತ್ತಿದ್ದರು. 'ವಿದ್ಯಾರ್ಥಿ ನೆರವು ಸಂಘ' ಎಂಬ ಸಂಘಟನೆ ಯನ್ನು ಸ್ಥಾಪಿಸಿ, ಸಾರ್ವಜನಿಕ ರಿಂದ ಹಣವನ್ನು ಸಂಗ್ರಹಿಸಿ ಬಡವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವನ್ನು ಹುಟ್ಟುಹಾಕಿದ್ದರು.

ಒಮ್ಮೆ ಸೂರಿಯವರು ಸೆಂಟ್ರಲ್ ಕಾಲೇಜ್ ಆವರಣದಲ್ಲಿ ವಿದ್ಯಾರ್ಥಿಗಳ ಸಭೆ ಕರೆದಿದ್ದರು. ಆದರೆ ವಿದ್ಯಾರ್ಥಿಗಳು ಸಭೆ ಸೇರಲು ಆಸಕ್ತಿ ತೋರಲಿಲ್ಲ. ಆದರೆ ಸೂರಿ ಇದರಿಂದಾಗಿ ಧೃತಿಗೆಡಲಿಲ್ಲ. ಅವರ ಛಲ ಮತ್ತು ವಿದ್ಯಾರ್ಥಿಗಳ ನಡುವೆ ಅವರು ನಡೆಸಿದ ಪ್ರಚಾರದ ಫಲವಾಗಿ ವಿದ್ಯಾರ್ಥಿಗಳು ಅವರು ಕರೆದ ಸಭೆಗಳಿಗೆ ಬರಲಾರಂಭಿಸಿದರು. ಕ್ರಮೇಣ ಅವರ ಸಂಖ್ಯೆ ಹೆಚ್ಚಲಾರಂಭಿಸಿತು. ಒಂದು ಯಶಸ್ವಿ ಮತಪ್ರದರ್ಶನ ಸಾಧ್ಯವಾಯಿತು. ಬಹುಶಃ ಇದು ಅವರು ಸಂಘಟಿಸಿದ ಮೊದಲ ಪ್ರದರ್ಶನ. ಇದಕ್ಕಾಗಿ ಅವರು ಜೈಲು ಕಾಣಬೇಕಾಯಿತು. ಅವರು 'ಸ್ವಾತಂತ್ರ್ಯ ಹೋರಾಟಗಾರ'. ಅವರು ನಿಜವಾಗಿಯೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಆದರೆ ಇತರ ಹಲವರಂತೆ ಅವರು ತಾಮ್ರ ಪತ್ರಕ್ಕಾಗಲಿ, ಸ್ವಾತಂತ್ರ್ಯಯೋಧರ ಪಿಂಚಣಿಗಾಗಲಿ, ಉಚಿತ ಪ್ರಯಾಣದ ಸೌಕರ್ಯಕ್ಕಾಗಲಿ ಆಸೆ ಪಡಲಿಲ್ಲ. ಅಷ್ಟರಲ್ಲಿ ಸೂರ್ಯನಾರಾಯಣ ರಾವ್ ನೇತೃತ್ವದಲ್ಲಿ ಮೈಸೂರ ಸ್ಟೂಡೆಂಟ್ ಯೂನಿಯನ್ ರೂಪುಗೊಂಡು, ಅನಂತರ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್‌ಎಫ್)ನ ಭಾಗವಾಯಿತು.



ಕೆಜಿಎಫ್ ಹೋರಾಟದಲ್ಲಿ ಸಂಗಾತಿಗಳೊಂದಿಗೆ ಸೂರಿ

ಕ್ರಾಂತಿಕಾರಿ ಆಂದೋಲನಗಳ ನಡುವೆ

ಆಗ ವಾಲ್ಚಂದ್ ಹೀರಾಚಂದ್ ಒಡೆತನದಲ್ಲಿದ್ದ ವಿಮಾನ ದುರಸ್ತಿ ಘಟಕ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಬೆಂಗಳೂರಿನ ಅತ್ಯಾಧುನಿಕ ಕಾರ್ಖಾನೆ ಯಾಗಿತ್ತು. ಸಿಗರೇಟ್ ಕಾರ್ಖಾನೆ, ಚರ್ಮ ಹದ ಮಾಡುವ ಘಟಕಗಳು ಮತ್ತು ಇಂದು ಬೆಂಗಳೂರಿನವರಿಗೆ ಚಿರಪರಿಚಿತ ವಾಗಿರುವ ಮತ್ತು ಅಲ್ಲಿನ ದೊಡ್ಡ ದೊಡ್ಡ ಜವಳಿ ಗಿರಣಿಗಳಿಂದ ಆ ಹೆಸರು ಪಡೆದ ಕಾಟನ್‌ಪೇಟೆ ಹಾಗೂ ಮಿಲ್ ಕಾರ್ನರ್ ಮೊದಲಾದವುಗಳು ಒಟ್ಟಿಗೆ ಸೇರಿ ಬೆಂಗಳೂರಿಗೆ ಒಂದು ಕೈಗಾರಿಕಾ ಬುನಾದಿಯನ್ನು ಒದಗಿಸಿದ್ದವು. ಜೊತೆಗೆ ಕೇಂದ್ರೀಯ ಕೈಗಾರಿಕಾ ವರ್ಕ್‌ಶಾಪ್, ಮೈಸೂರು ಕ್ರೋಮ್ ಟ್ಯಾನಿಂಗ್, ಸರಕಾರಿ ವಿದ್ಯುತ್ ಕಾರ್ಖಾನೆ, ಸಾಬೂನು ಕಾರ್ಖಾನೆ ಮುಂತಾದ ಘಟಕಗಳಿದ್ದವು. ಇವುಗಳಲ್ಲಿ ಬೆಂಗಳೂರಿನ ಕಾರ್ಮಿಕ ವರ್ಗ ರೂಪುಗೊಂಡಿತ್ತು. ಸೂರಿ ಸ್ವಲ್ಪ ಸಮಯ ಅಂದರೆ ಎರಡು ವರ್ಷ ಅವರ ನಡುವೆ ಇದ್ದರು.

ಸೂರಿ ಜೈಲಿನಿಂದ ಹಿಂತಿರುಗಿದ್ದು ನೇರವಾಗಿ ಕ್ರಾಂತಿಕಾರ ಆಂದೋಲನಗಳ ನಡುವಿಗೆ. ಸಿಪಿಐನ ಮುಂಬೈ ಕೇಂದ್ರದಿಂದ ಕಳುಹಿಸಲ್ಪಟ್ಟ ಎನ್.ಎಲ್.ಉಪಾಧ್ಯಾಯರು ಆಗಲೇ ಬೆಂಗಳೂರಿನಲ್ಲಿ ಕೆ.ವಿ.ಟೆಂಪಲ್ ರಸ್ತೆಯ ಒಂದು ಶಿಥಿಲವಾದ ಮನೆಯಿಂದ ತಮ್ಮ ಕೆಲಸವನ್ನು ಆರಂಭಿಸಿದ್ದರು. ವಕೀಲರ ಮಗಳೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಆ ಮನೆಗೆ ಯಾರೂ ಬಾಡಿಗೆಗೆ ಬರಲು ತಯಾರಿರಲಿಲ್ಲ. ಎನ್.ಡಿ.ಶಂಕರ್ ಮತ್ತಿತರ ಕಮ್ಯುನಿಸ್ಟರು ಕಮ್ಯುನಿಸ್ಟ್ ಪಕ್ಷದ ಹೊರಗೆ ಕಾರ್ಮಿಕ ವರ್ಗದ ಆಂದೋಲನದ ಕೆ.ಟಿ.ಭಾಷ್ಯಂರಂಥ ಕಾರ್ಮಿಕ ಮುಖಂಡರು, ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದವರು ಸೇರಿಕೊಂಡರು. ಇವರ ನಡುವಿಗೆ, ಮದ್ರಾಸಿನಲ್ಲಿ ಬಿ.ಎಸ್ಸಿ.ಬಿ.ಇ. ಡಿಗ್ರಿಗಳನ್ನು ಪಡೆದು ಕ್ರಾಂತಿಕಾರಿ ಪ್ರಭಾವಕ್ಕೊಳಗಾಗಿದ್ದ ಎಂ.ಎಸ್.ಕೃಷ್ಣನ್ ಆಗಮಿಸಿದರು. ಎಂ.ಎಸ್.ಕೃಷ್ಣನ್, ಕೆ.ಟಿ.ಭಾಷ್ಯಂ ಅವರನ್ನು ಹತ್ತಿರದಿಂದ ಅನುಸರಿಸತೊಡಗಿದರು. ಅಲ್ಲದೆ ಭಾರತದ ಅನೇಕ ಕ್ರಾಂತಿಕಾರಿಗಳ ತೊಟ್ಟಿಲಾಗಿದ್ದ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ತಯಾರಾಗಿದ್ದ ಬೆಂಗಳೂರಿನ ವಿದ್ಯಾರ್ಥಿ ಎಂ.ಎಸ್. ರಾಮರಾವ್ ಅವರೊಡನೆ ಬೆರೆತುಕೊಂಡರು. ವಿದ್ಯಾರ್ಥಿಗಳ, ಬುದ್ದಿಜೀವಿಗಳ ಹಾಗೂ ಕಾರ್ಮಿಕರ ನಡುವೆ ಎಂ.ಎಸ್.ಕೃಷ್ಣನ್ ಅವರ ಚಟುವಟಿಕೆಗಳನ್ನು ಅವರ ನಿಕಟ ಸ್ನೇಹಿತರಾಗಿದ್ದ ಸೂರಿಯವರು ಹತ್ತಿರದಿಂದ ಗಮನಿಸುತ್ತಿದ್ದರು. ಅಂದಿನ ಕಮ್ಯುನಿಸ್ಟರಾದ ಮೋಹನ್ ಕುಮಾರಮಂಗಳಂ, ಪಿ.ರಾಮಚಂದ್ರನ್ ಮೊದಲಾದವರ ಜೊತೆಯಲ್ಲಿ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದರೂ ಸೂರಿಯವರು ಸ್ವಾತಂತ್ರ್ಯಪೂರ್ವದ ಆ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿರಲಿಲ್ಲ. ಕೊನೆಗೆ ಎನ್.ಎಲ್.ಉಪಾಧ್ಯಾಯರು ಸೂರಿಯವರನ್ನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು.

ಸ್ವಾತಂತ್ರ್ಯ ಬಂದಾಗ

ಆ ವೇಳೆಗೆ ಭಾರತವು ಸ್ವತಂತ್ರ ವಾಗಿತ್ತು. ಆದರೆ ಬ್ರಿಟೀಷರು ನಿಜವಾಗಿ ಭಾರತವನ್ನು ಬಿಟ್ಟು ಹೋಗಿದ್ದಾರೆ ಎಂಬುದನ್ನು ಕಮ್ಯುನಿಸ್ಟರು ಒಪ್ಪಿರಲಿಲ್ಲ. ಸೂರಿ ಕಂಡದ್ದು ಅರಸೊತ್ತಿಗೆಯ ಮೈಸೂರನ್ನು, ಜವಾಬ್ದಾರ ಸರ್ಕಾರವನ್ನಲ್ಲ. 'ಕಲ್ಕತ್ತಾ ಪ್ರಬಂಧ'ದಿಂದ ಸ್ಫೂರ್ತಿ ಪಡೆದ ಸೂರಿ ಅತ್ಯುತ್ಸಾಹದಿಂದ ಮುನ್ನುಗ್ಗಿದರು. ದೇಶಾದ್ಯಂತ ಅನೇಕ ಕಮ್ಯುನಿಸ್ಟರಂತೆ ಸೂರಿಯವರೂ ಇದೇ ನಿಜವಾದ ಸ್ವಾತಂತ್ರ್ಯ ಹೋರಾಟವೆಂದು ನಂಬಿದ್ದರು. ಆಗ ಪಕ್ಷವು ನಿಷೇಧಿಸಲ್ಪಟ್ಟಿತು. 1949 ರಲ್ಲಿ ಅಖಿಲ ಭಾರತ ರೈಲ್ವೆ ಮುಷ್ಕರಕ್ಕೆ ಬಿ.ಟಿ.ರಣದಿವೆ ನೀಡಿದ ಕರೆಯು ಸೂರಿಯವರಲ್ಲಿ ವಿದ್ಯುತ್ ಸಂಚಾರವನ್ನು ಉಂಟುಮಾಡಿತು. ಸೂರಿ ರೈಲುಗಳನ್ನು ತಡೆದು ನಿಲ್ಲಿಸಲು ಹೊರಟರು. ಸಿಐಡಿ ಪೋಲೀಸರು ಅವರನ್ನು ಹಿಂಬಾಲಿಸುತ್ತಿದ್ದರು. ಸೂರಿ ತಲೆಮರೆಸಿಕೊಂಡರು. ಕೊನೆಗೂ ಸಿಕ್ಕಿಬಿದ್ದಾಗ ಅವರನ್ನು ಮಂಡ್ಯ ಸಬ್ ಜೈಲಿಗೆ ಕಳುಹಿಸಲಾಯಿತು. ಈ ನಡುವೆ ಅವರನ್ನು ಗಿಡಗಂಟೆಗಳ ನಡುವಿನಲ್ಲೂ ಹಿಂಬಾಲಿಸಿದ್ದ ಸಿಐಡಿ ಅಧಿಕಾರಿಗೆ ಸೂರಿಯವರ ಮುಷ್ಟಿಯ ರುಚಿಯೂ ಸಿಕ್ಕಿತ್ತಂತೆ. ಆ ಘಟನೆಯಲ್ಲಿ ಮುಷ್ಟಿಯ ಎಲುಬನ್ನು ಮುರಿದುಕೊಂಡ ಸೂರಿಯವರಿಗೆ ನಂತರ ಜೀವನವಿಡೀ ಬರೆಯಲು ತಮ್ಮ ಕೈಬೆರಳುಗಳನ್ನು ಉಪಯೋಗಿಸಲಿಕ್ಕಾಗಲಿಲ್ಲ.

ಜವಳಿ ಕಾರ್ಮಿಕರ ನಡುವೆ

ಕಮ್ಯುನಿಸ್ಟ್ ಪಕ್ಷವು ಸಂಕುಚಿತ ಮಾರ್ಗವನ್ನು ತೊರೆದು 1951 ರ ಹೊತ್ತಿಗೆ ಕಾನೂನು ಬದ್ಧವಾಗುತ್ತಿದ್ದಂತೆ ಸೂರಿಯವರು ಬಹಿರಂಗಕ್ಕೆ ಮರಳಿ ಬಂದರು. ಆಗ ಅವರ ನಿಲುಮೆಗಳು ಅತ್ಯಂತ ಕ್ರಾಂತಿಕಾರಿಯಾಗಿದ್ದವು. ಅವರು ಅಂದಿನ ಕಾರ್ಮಿಕ ವರ್ಗದಲ್ಲೇ ಅತ್ಯಂತ ಹೆಚ್ಚು ಶೋಷಣೆಗೆ ಒಳಪಟ್ಟ ಮತ್ತು ಅತ್ಯಂತ ಹೆಚ್ಚು ಕ್ರಾಂತಿಕಾರಿ ಮನೋಭಾವವನ್ನು ಮೈಗೂಡಿಸಿ ಕೊಂಡಿದ್ದ ಜವಳಿ ಕಾರ್ಮಿಕರ ನಡುವೆ ಕೆಲಸ ಮಾಡಲಾರಂಭಿಸಿದರು, ಅತ್ಯಂತ ದಮನಕ್ಕೊಳಗಾಗಿದ್ದ ರೇಷ್ಮೆ ಕಾರ್ಮಿಕರನ್ನು ಸಂಘಟಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರಾಜಾಮಿಲ್‌ನಲ್ಲಿ ಮೊದಲು ಶ್ರೀರಾಮುಲು ರವರೊಂದಿಗೆ, ನಂತರ ಅವರ ನಿಲುವುಗಳ ವಿರುದ್ಧವಾಗಿ ನಡೆದ ಚಟುವಟಿಕೆಗಳು ಒಂದು ಪ್ರಮುಖ ಘಟ್ಟ.

ಸೂರಿಯವರು ಬೆಂಗಳೂರು ಜಿಲ್ಲಾ ಜವಳಿ ಕಾರ್ಮಿಕರ ಸಂಘವನ್ನು ಸ್ಥಾಪಿಸಿ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯಲ್ಲಿ ತಮ್ಮ ಕಛೇರಿಯನ್ನು ತೆರೆದರು. ಮುಂದೆ ಅದು ಕೆ.ಪಿ.ಟಿ.ಯು.ಸಿ.ಯ ಕಛೇರಿಯಾಯಿತು ಹಾಗೂ ಅನಂತರ ಸಿ.ಐ.ಟಿ.ಯು.ನ ಪ್ರಥಮ ಕಾರ್ಯಾಲಯವಾಯಿತು. ಎಂ.ಎಸ್. ರಾಮರಾವ್ ಅಲ್ಲಿಂದ ಸ್ವಲ್ಪ ಮುಂದೆ ಎ.ಎಸ್.ಆಚಾರ್ ರಸ್ತೆಯಲ್ಲಿ ತನ್ನ ಕಛೇರಿಯನ್ನು ತೆರೆದು ಕಾರ್ಮಿಕರನ್ನು ತಮ್ಮ ತೆಕ್ಕೆಗೆ ತೆಗೆದು ಕೊಳ್ಳಲಾರಂಭಿಸಿದ್ದರು. ಎಂ.ಎಸ್.ಕೃಷ್ಣನ್ ಅವರು ಕೆ.ವಿ.ಟೆಂಪಲ್ ರಸ್ತೆಯಲ್ಲಿದ್ದ ಪಕ್ಷದ ಕಚೇರಿಯಿಂದ ಕೆಲಸ ಮಾಡುತ್ತಿದ್ದರು.

ಸೂರಿಯವರು ಅಂದು ಕಮ್ಯುನಿಸ್ಟರ ಕೋಟೆಯಾಗಿದ್ದ ಕೆ.ಜಿ.ಎಫ್. ಪ್ರವೇಶಿಸಿ ದರಲ್ಲದೆ

ಪುಟ 13ಕ್ಕೆ

ಸಂಪಾದಕೀಯ

ಸಾರ್ವತ್ರಿಕ ಮುಷ್ಕರ : ಮಹಾ ಸಂಘರ್ಷದ ಐಕ್ಯ ಕಾರ್ಯಾಚರಣೆ

ದೇಶದ ದುಡಿಯುವ ಜನತೆ ಮತ್ತೊಂದು ಮಹಾ ಸಂಗ್ರಾಮಕ್ಕೆ ಸನ್ನದ್ದರಾಗುತ್ತಿದ್ದಾರೆ. ವಿವಿಧ ಕಾರ್ಮಿಕ ಸಂಘಟನೆಗಳ ನೇತೃತ್ವದ, ರೈತ ಕೂಲಿಕಾರರ ಸಂಘಟನೆಗಳ ಹಾಗೂ ಇತರೆ ಜನ ವಿಭಾಗಗಳ ಸಕ್ರಿಯ ಬೆಂಬಲದ ಆಗಸ್ಟ್ 20 ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಐತಿಹಾಸಿಕ ಮೈಲುಗಲ್ಲಾಗಲಿದೆ.

2004 ರಲ್ಲಿ ಎಡಪಕ್ಷಗಳ ಬಾಹ್ಯ ಬೆಂಬಲದಿಂದ ಅಧಿಕಾರಕ್ಕೆ ಬಂದ ಮನಮೋಹನ್ ಸಿಂಗ್‌ರವರ ಯುಪಿಎ ಸರ್ಕಾರ ತಾನೂ ಭಾಗವಾಗಿದ್ದ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ಬದ್ಧವಾಗಲಿಲ್ಲ, ದೇಶಕ್ಕೆ ಕೊಟ್ಟ ವಚನ ಪಾಲಿಸಲಿಲ್ಲ. ಎಡಪಕ್ಷಗಳ ತೀವ್ರ ವಿರೋಧದ ನಡುವೆಯೂ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಗಳನ್ನು ಜಾರಿಗೊಳಿಸಲು ಪ್ರಯತ್ನಿಸಲಾಯಿತು. ಅಂತಹ ನೀತಿಗಳನ್ನು ಜಾರಿಗೆ ತಂದವರಲ್ಲಿ ಅಗ್ರಗಣ್ಯರು ಮನಮೋಹನ್‌ಸಿಂಗರು. ವಾಜಪೇಯಿಯವರ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವೂ ಇದೇ ನೀತಿಗಳನ್ನು ಅತ್ಯುತ್ಸಾಹದಿಂದ ಜಾರಿ ಮಾಡಿತು. ಜನರ ಅತೃಪ್ತಿ ಬೇರೆಡೆಗೆ ತಿರುಗಿಸಲು ಕೋಮುವಾದಿ ಫ್ಯಾಸಿಸ್ಟ್ ನೀತಿಗಳನ್ನು ಅನುಸರಿಸಿ ವಿಭಜನೆಗೆ ಯತ್ನಿಸಿತು. ಹೀಗಾಗಿ ಕಳೆದ ಚುನಾವಣೆಯಲ್ಲಿ ಉದಾರೀಕರಣ, ಕೋಮುವಾದೀ ನೀತಿಗಳನ್ನು ಅನುಸರಿಸಿದ ವಾಜಪೇಯಿ ಸರ್ಕಾರವನ್ನು ಜನತೆ ಸೋಲಿಸಿದರು. ನಂತರದಲ್ಲಿ ಬಂದ ಯುಪಿಎ ಸರ್ಕಾರ ಈ ಜನಾದೇಶವನ್ನು ಮನ್ನಿಸಿ, ಸುಧಾರಣೆಗಾದರೂ ಯತ್ನಿಸಲಿಲ್ಲ. ಈ ಹಿನ್ನೆಲೆಯಲ್ಲಿ ಸತತವಾಗಿ ಸಂಕಷ್ಟಗಳ ಸರಮಾಲೆಯನ್ನು ಅನುಭವಿಸುತ್ತಾ ಬಂದ ಕಾರ್ಮಿಕ ವರ್ಗ ಈ ನೀತಿಗಳಿಗೆದುರಾಗಿ ಹೋರಾಡದೇ ಬೇರೆ ಮಾರ್ಗವೇ ಇರಲಿಲ್ಲ. ಆದ್ದರಿಂದ ಮನಮೋಹನ್‌ಸಿಂಗ್ ಸರ್ಕಾರಕ್ಕೆ ಎಚ್ಚರಿಸಲು ಕಾರ್ಮಿಕ ವರ್ಗ ವರುಷ ಕಳೆದ ನಂತರ 2005 ರ ಸೆಪ್ಟೆಂಬರ್ 29 ರಂದು 16 ಬೇಡಿಕೆಗಳಿಗಾಗಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆಸಿತು. ನಂತರದಲ್ಲಿಯೂ 2006 ಡಿಸೆಂಬರ್ 14 ರಂದು ಮತ್ತೊಂದು ಸಾರ್ವತ್ರಿಕ ಮುಷ್ಕರ 17 ಬೇಡಿಕೆಗಳಿಗಾಗಿ ನಡೆಯಿತು. ಈ ಮುಷ್ಕರಗಳಲ್ಲಿ ರೈತ, ಕೂಲಿಕಾರ, ಯುವಜನ, ಮಹಿಳೆ ವಿದ್ಯಾರ್ಥಿಗಳು ಮಾತ್ರವಲ್ಲ ಸಣ್ಣ ಕೈಗಾರಿಕೆಗಳು ಹಾಗೂ ವ್ಯಾಪಾರಸ್ಥರು ತಮ್ಮ ಸಕ್ರಿಯ ಬೆಂಬಲ ಘೋಷಿಸಿ ಕೋಟ್ಯಾಂತರ ಜನ ಅಭೂತಪೂರ್ವವಾಗಿ ಯಶಸ್ವಿಗೊಳಿಸಿದರು. ಇಷ್ಟಾದರೂ ಸರ್ಕಾರ ಗಮನ ನೀಡಲಿಲ್ಲ. ಹೀಗಾಗಿ 6 ಪ್ರಮುಖ ಬೇಡಿಕೆಗಳಿಗಾಗಿ 2008ರ ಆಗಸ್ಟ್ 20 ರ ಮುಷ್ಕರಕ್ಕೆ ಜನತೆ ಸಜ್ಜಾಗುತ್ತಿದ್ದಾರೆ. ಇದು ಸಹ ಅತ್ಯಧಿಕ ಬೆಂಬಲದೊಂದಿಗೆ ಯಶಸ್ವಿಯಾಗುವುದರಲ್ಲಿ ಅನುಮಾನವೇ ಇಲ್ಲ.


ಈಗ ಎತ್ತಲಾಗಿರುವ ಪ್ರಶ್ನೆಗಳು ಮಹತ್ವದ ಬೇಡಿಕೆಗಳು. ಬೆಲೆ ಏರಿಕೆ ನಿಯಂತ್ರಣ, ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಗೊಳಿಸುವುದು, ಪಡಿತರ ಅಂಗಡಿಗಳ ಮೂಲಕ ವಸ್ತುಗಳ ವಿತರಣೆ, ಜೀವನಾವಶ್ಯಕ ವಸ್ತುಗಳ ಮುಂಗಡ ವ್ಯಾಪಾರಕ್ಕೆ ನಿಷೇಧ, ಕಪ್ಪು ಮಾರುಕಟ್ಟೆ ವ್ಯವಸ್ಥೆ ವಿರುದ್ಧ ಕ್ರಮ, ತೈಲ ಬೆಲೆ ಇಳಿಕೆ, ಕಾರ್ಮಿಕ ಕಾನೂನುಗಳ ಜಾರಿ, ಕಾನೂನು ಅಸಂಘಟಿತ ವಲಯದ ಕಾರ್ಮಿಕರಿಗೆ ಕಾನೂನು, ರೈತರ ಸಾಲ ಮನ್ನಾ ಯೋಜನೆ ಜಾರಿ ಹಾಗೂ ಖಾಸಗೀ ಲೇವಾದೇವಿಗಾರರಿಗೆ ವಿಸ್ತರಣೆ, ಸರ್ಕಾರಿ ನೇಮಕಾತಿ ನಿರ್ಬಂಧ ಹಿಂತೆಗೆಯುವುದು, ಗುತ್ತಿಗೆ ಕಾರ್ಮಿಕರ ಪ್ರಶ್ನೆ ಇವು ಪ್ರಮುಖ ಪ್ರಶ್ನೆಗಳು. ಇಂತಹ ಕನಿಷ್ಠ ಸಮಸ್ಯೆಗಳ ಇತ್ಯರ್ಥಕ್ಕೂ ಯುಪಿಎ ಕಿವಿಗೊಡುತ್ತಿಲ್ಲ. ಆದರೆ ಮನಮೋಹನ್‌ಸಿಂಗ್ ಸರ್ಕಾರ ದೇಶದ ಜನತೆಯ ಹಿತಾಸಕ್ತಿಗಳ ರಕ್ಷಣೆಗಿಂತ ಅಮೇರಿಕಾದ ಹಿತಾಸಕ್ತಿಗಳ ಪಕ್ಷಗಳಿಗೆ ಕಟಿಬದ್ಧವಾಗಿರುವುದನ್ನು ಭಾರತ ಅಮೇರಿಕಾ ಅಣು ಒಪ್ಪಂದದಲ್ಲಿನ ಉತ್ಸುಕತೆಯಲ್ಲಿ ಕಂಡಿದ್ದೇವೆ. ಎಲ್ಲಾ ಅನೈತಿಕ ಮಾರ್ಗಗಳಿಂದ ಸರ್ಕಾರ ಅಧಿಕಾರದಲ್ಲಿ ಉಳಿದರೂ ಜನರ ನಡುವೆ ಅದು ವಿಶ್ವಾಸ ಕಳೆದುಕೊಂಡಿದೆ. ವಿದೇಶಿ, ಸ್ವದೇಶಿ ಬಹುದೊಡ್ಡ ಬಂಡವಾಳಗಾರ ಹಿತಕ್ಕೆ ಟೊಂಕ ಕಟ್ಟಿ ಸಾಮಾನ್ಯ ಪ್ರಶ್ನೆಗಳನ್ನು ಇತ್ಯರ್ಥಪಡಿಸದೇ ಹೋಗುತ್ತಿರುವ ಸರ್ಕಾರಕ್ಕೆ ದೇಶದ ಜನತೆಯ ಈ ಮುಷ್ಕರ ಖಂಡಿತಕ್ಕೂ ಒಂದು ಗಂಭೀರ ಪ್ರಹಾರ. ಆಗಲೂ ಎಚ್ಚೆತ್ತುಕೊಳ್ಳದಿದ್ದಲ್ಲಿ ಹಿಂದಿನ ಸರ್ಕಾರಗಳಿಗೆ ಆದ ಗತಿ ಶತಸಿದ್ಧ. ಈ ಮುಷ್ಕರದ ಪರಿಣಾಮವನ್ನು ಸರ್ಕಾರ ಕಡಿಮೆ ಅಂದಾಜು ಮಾಡಿದರೆ ಅದು ಅವರಿಗೇ ಮುಳುವಾಗಲಿದೆ. ಹಿಂದೆ ಪಿ.ವಿ.ನರಸಿಂಹರಾವ್ ಸರ್ಕಾರದ ವಿರುದ್ಧ 4 ಸಾರ್ವತ್ರಿಕ ಮುಷ್ಕರಗಳು ನಡೆದವು. ಆ ಸರ್ಕಾರ ಸೋತುಹೋಯಿತು. ಹಾಗೆಯೇ ವಾಜಪೇಯಿ ಸರ್ಕಾರದ ವಿರುದ್ಧದ ಮುಷ್ಕರವೂ ಅದೇ ಫಲಿತಾಂಶ ನೀಡಿತು. ಈಗ ಮನಮೋಹನ್ ಸಿಂಗರ ಸರದಿ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು.

ಇದೇ ಹೊತ್ತಿನಲ್ಲಿ ಈ ಸಂದರ್ಭದ ದುರ್ಲಾಭವನ್ನು ಕೋಮುವಾದಿ ಬಿಜೆಪಿ ಹೊಡೆಯಲು ಯತ್ನಿಸಿರುವುದನ್ನು ಗಮನಿಸಬೇಕು. ಎನ್‌ಡಿಎ, ಯುಪಿಎ ಎರಡೂ ಉದಾರೀಕರಣ ನೀತಿ ಜಾರಿಯಲ್ಲಿ ಸ್ಪರ್ಧಾಳುಗಳು. ಬಿಜೆಪಿಯಂತೂ ಅಧಿಕಾರಕ್ಕೇರಲು ಅಮರನಾಥ ಗುಹೆಯ ಸುತ್ತ ವಿವಾದ ಎಬ್ಬಿಸಿ ವಿಭಜಕವಾದ ಹುಟ್ಟಿಸಿ ಕೋಮುವಾದೀಕರಣಕ್ಕೆ ಇಳಿದಿದೆ. ರಾಜ್ಯದಲ್ಲಿಯೂ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದೇ ಜನವಿರೋಧಿ ಆರ್ಥಿಕ ನೀತಿಗಳು, ನಿಲ್ಲದ ರೈತರ ಆತ್ಮಹತ್ಯೆ, ಪಡಿತರ ವ್ಯವಸ್ಥೆಯ ನಾಶ , ಕೋಮುವಾದದ ವಿಭಜಕ ನೀತಿ ಅನುಸರಿಸುವ ಜನದ್ರೋಹಿ. ಗೋಲಿಬಾರ್ ಸರ್ಕಾರವಾಗಿದೆ. ಇವುಗಳ ವಿರುದ್ಧ ಜನತೆ ಎಲ್ಲೆಡೆ ಸಂಘರ್ಷಕ್ಕೆ ಇಳಿದಿದ್ದಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಬಿಜೆಪಿಗಳಿಗೆ ಪರ್ಯಾಯವಾದ ಮೂರನೇ ಪರ್ಯಾಯ ಕಟ್ಟುವುದು ಅತೀ ಅವಶ್ಯಕ. ಇದಕ್ಕೆ ದುಡಿಯುವ ವರ್ಗದ ಇಂತಹ ಕಾರ್ಯಾಚರಣೆಗಳು ಪ್ರಕ್ರಿಯೆಯನ್ನು ತೀವ್ರಗೊಳಿಸಿ ಬಲಗೊಳಿಸುತ್ತವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ದಲ್ಲಿಯೂ ಎಡಪಕ್ಷಗಳು ಮತ್ತು ಜೆಡಿ(ಎಸ್) ಮತ್ತಿತರ ಪಕ್ಷಗಳು ದುಡಿಯುವ ಈ ವರ್ಗದ ಮಹಾ ಮುಷ್ಕರಕ್ಕೆ ಬೆಂಬಲಿಸಿ ಒಂದೆಡೆ ಬಂದಿರುವುದು ಸ್ವಾಗತಾರ್ಹ ಬೆಳವಣಿಗೆ. ಹಾಗೆಯೇ ಹಲವಾರು ಸಂಘಟನೆಗಳು ಒಂದುಗೂಡಿ ಐಕ್ಯತೆಯಿಂದ ಕಾರ್ಯಾಚರಣೆಗೆ ಇಳಿದಿರುವುದು.

ಆದ್ದರಿಂದ ಜನತೆಯ ಮಹಾ ಸಂಘರ್ಷಕ್ಕೆ ಎಲ್ಲರೂ ಜೊತೆಗೂಡಬೇಕು. ಜನತೆಯ ಇಂತಹ ಹೋರಾಟಗಳು ರಾಜಕೀಯ ಬದಲಾವಣೆಯನ್ನೂ ತರುತ್ತವೆ. ಇದನ್ನು ಬಲಪಡಿಸಬೇಕು. ಸಂಘರ್ಷ ಮುಂದುವರೆಸಲು ಮಹತ್ವದ್ದು.

ಅಡ್ಡಗೋಡೆಗಳನ್ನೊಡೆದು ಬೆಳಗಿದ ಹಣತೆಗಳು



ಹೆಜ್ಜೆ ಹೆಜ್ಜೆಗೂ ರಕ್ತ ಕಾಣಿಕೆ ಅರ್ಪಿಸುತ್ತಿದೆ ಬದುಕು. ಆದರೂ ಕತ್ತಲೆಯೊಡನೆ ಹೋರಾಡುವ ಪುಟ್ಟ ಹಣತೆಗಳಿವೆ.


-ಸಾಹಿರ್ ಲೂಧಿಯಾನ್ವಿ

ಸ್ವಾತಂತ್ರ್ಯೋತ್ಸವದ ಸಂಭ್ರಮದ ಆಚರಣೆಯ ಹಿಂದಿನ ದಿನವೇ ಮಂಗಳೂರು ಪರಿಸರದಲ್ಲಿ ಸೂತಕದ ಛಾಯೆ. ಅಲ್ಲಿನ ಉಪ್ಪಿನಂಗಳ ಬಳಿಯ ನದಿಗೆ ನಿಯಂತ್ರಣ ತಪ್ಪಿದ ಬಸ್ ಉರುಳಿ 11 ಶಾಲಾ ಬಾಲಕರು ಮೃತಪಟ್ಟ ಘಟನೆಯಿಂದ ಎಲ್ಲರಲ್ಲಿಯೂ ಮಡುಗಟ್ಟಿದ ದುಃಖ.

ಈ ಘಟನೆ ಸಂಭವಿಸುತ್ತಲೇ ಅಲ್ಲಿಗೆ ಜನಧಾವಿಸಿದರು, ಕೆಲವು ಯುವಕರಂತೂ 'ರಿಸ್ಕ್' ಲೆಕ್ಕಿಸದೇ ಹಿಂದೆ - ಮುಂದೆ ನೋಡದೇ ನದಿಗೆ ಹಾರಿ ಕೆಲವು ಮಕ್ಕಳ ಪ್ರಾಣ ಉಳಿಸಿದರು. ಕೆಲವರು ಮುಳುಗುತ್ತಿದ್ದ ಬಸ್‌ಗೆ ಹಗ್ಗ ಕಟ್ಟಿ ಹೊರಗೆಳೆಯಲು ವಿಫಲ ಯತ್ನ ನಡೆಸಿದರು. ಇವರೆಲ್ಲರದ್ದು ಒಂದೇ ಮಿಡಿತ ಮಕ್ಕಳು ಉಳಿಯಬೇಕು, ಆದರೆ ಅದು ಆಗದೇ ಹೋದಾಗ, ಕಣ್ಣು ಮುಚ್ಚಿದ ಎಳೆ ಕಂದಮ್ಮಗಳು ಶವಗಳೆದುಳರು ಕಣ್ಣೀರು ಹಾಕಿದರು. ಹಾಗೆ ನೋಡಿದರೆ ಇವರ್‍ಯಾರು ಅವರ ಬಂಧುಗಳಲ್ಲ, ರಕ್ತ ಸಂಬಂಧಿಕರೂ ಅಲ್ಲ... ಇನ್ನು ಹಿಂದೂ ಮುಸ್ಲಿ ಎಂಬಿತ್ಯಾದಿ ಜಾತಿ-ಮತಗಳ ನಂಟೂ ಇರಲಿಲ್ಲ. ಜನ ಅಪ್ಪಟ ಮಾನವರಾಗಿ ಸ್ಪಂದಿಸಿ ಮಾನವೀಯತೆ ಮೆರೆದರು.

ಇದು ಕೇವಲ ದಿನಪತ್ರಿಕೆ ಟಿ.ವಿ. ಚಾನೆಲ್‌ಗಳ ಒಂದು ತುಣುಕು ಸುದ್ದಿ ಎಂದು ಭಾವಿಸಿದರೆ ತಪ್ಪಾದೀತು. ಯಾಕೆಂದರೆ ಮಂಗಳೂರು-ಉಡುಪಿ-ಇಡೀ ಕರಾವಳಿ ಸದಾ ಉದ್ವಿಗ್ನ, ನಿತ್ಯವೂ ಕೋಮು ದ್ವೇಷದ ಉರಿಹೊತ್ತಿಸುವುದು, ಇಂತಹವರ ಆಟಕ್ಕೆ ಬಲಿಯಾಗುವ ಜನಸಾಮಾನ್ಯರು. ಅಮಾನವೀಯ ಅಪರಾಧದ ಕೃತ್ಯಗಳಿಗೆ 'ಧರ್ಮದ ರಕ್ಷಣೆ' ಲೇಪಿಸಿಕೊಂಡು ಗೌರವಸ್ಥ ರಾಗಿ ಎಲ್ಲವನ್ನೂ ದಕ್ಕಿಸಿಕೊಳ್ಳುತ್ತಾ ಓಡಾಡುವವರು... ಇವರು ಜನರನ್ನು ಎಂದೂ ಜನ ಎಂದು ನೋಡುವವರಲ್ಲ, ಜಾತಿ ಮತ-ಧರ್ಮದ ವಿಭಜಕ ದೃಷ್ಟಿಯಿಂದಲೇ ಎಲ್ಲರನ್ನೂ ವ್ಯಾಖ್ಯಾನಿಸುವವರು.

ಆದರೆ ಬಸ್ ದುರಂತದ ಸನ್ನಿವೇಶ ಇವನ್ನೆಲ್ಲಾ ಧಿಕ್ಕರಿಸಿ ಸೌಹಾರ್ದತೆಯ ಉತ್ತರ ನೀಡಿತು. ಜನ ಸಾಮಾನ್ಯರೊಳಗಿನ ಮಾನವೀಯತೆ ಮೇಲುಗೈ ಸಾಧಿಸಿತು. ಕರಾವಳಿಯಲ್ಲಿ ಕೋಮುವಾದಿಗಳ ಅಟ್ಟಹಾಸ ಇರುವಾಗಲೇ ಜನಸಾಮಾನ್ಯರಲ್ಲಿ ಅಂತರ್ಗತವಾಗಿರುವ ಮಾನವೀಯತೆ ಮಿಡಿತದ ಶಕ್ತಿಯೇ ಮೇಲು ಎಂದು ಸಂದೇಶ ಸಾರಿತು. ಕೋಮುದ್ವೇಷಯು ಮುಕ್ತ ಕರಾವಳಿ ಸೌಹಾರ್ದತೆಯಿಂದ ಬೆಳಗಬೇಕಾದರೆ ಇಂತಹ ಮಾನವೀಯತೆ ಎಲ್ಲರನ್ನೂ ಕೂಡಿಸುವ ಶಕ್ತಿಯಾಗಬೇಕು. ಇದು ಗ್ರಹಿಸಬೇಕಾದ ಸಂದೇಶ. ಯಾಕೆಂದರೆ ಕೋಮುವಾದಿಗಳು ಇದನ್ನು ಸಹ ತಿರುಚಿ ವ್ಯಾಖ್ಯಾನಿಸಬಲ್ಲರು. ವಿಕೃತಗೊಳಿಸಬಲ್ಲರು ಎಂಬ ಎಚ್ಚರವೂ ಅಗತ್ಯ... ಈ ಬಗ್ಗೆ ಒಂದು ವರದಿ ಈ ಸಂಚಿಕೆಯಲ್ಲಿ...



'ಅಕ್ರಮ ಗಣಿ' ಸಾಮ್ರಾಜ್ಯ ಸ್ಥಾಪನೆಗೆ ಕುಮ್ಮಕ್ಕು :

ಪ್ರತಿವಾರದ ರಾಜಕೀಯ ಬೆಳವಣಿಗೆಯಲ್ಲಿ 'ಗಣಿ ಕುಣಿ ಧಣಿ' ಗಳ ಪಾತ್ರವಿಲ್ಲದೆ ಇರಲಾರದು ಎಂಬ ಸ್ಥಿತಿ. ಆಶ್ಚರ್ಯವೆಂಬಂತೆ ಅಕ್ರಮ ಗಣಿಗಾರಿಕೆ ತಡೆಯಲು ಸ್ವತಃ ಗಣಿ ಹಗರಣದ ಸಚಿವ ಜನಾರ್ಧನ ರೆಡ್ಡಿಯೇ ಮುಂದಾದರು. ತಮ್ಮ 'ಮನೆಯಲ್ಲಿ' ಅಧಿಕಾರಿಗಳ ಸಭೆ ಸೇರಿಸಿ ನಿರ್ದೇಶನವನ್ನು ನೀಡಿದರು. ಅಕ್ರಮ ಗಣಿಗಾರಿಕೆ ವಿರುದ್ಧ ಕಠಿಣ ಕ್ರಮಕ್ಕೆ ಆದೇಶಿಸಿದರು. ಅದರಂತೆ ಜಿಲ್ಲೆಯಲ್ಲಿ ಸುತ್ತಾಡಿದ ಅಧಿಕಾರಿಗಳು 25 ಕೋಟಿಗಳಿಗೂ ಅಧಿಕ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡಿರುವುದಾಗಿ ಹೇಳಿದ್ದಾರೆ. ಇದನ್ನು ಅನುಸರಿಸಿ ಮುಖ್ಯಮಂತ್ರಿ ಯಡಿಯೂರಪ್ಪನವರು ಅಕ್ರಮ ಗಣಿಗಾರಿಕೆ ವಿರುದ್ಧ ಸಮರ ಸಾರಿರುವುದಾಗಿ, ಅದನ್ನು ಸಮರ್ಥಿಸಿಕೊಂಡು ಹೇಳಿದ್ದಾರೆ.

ತಿಮಿಂಗಲಗಳ ರಕ್ಷಣೆ:

ಆದರೆ ವಿಚಿತ್ರ ವಿಷಯವೆಂದರೆ ಈಗಲೂ ಅರಣ್ಯ ಪ್ರದೇಶಗಳಲ್ಲಿ 50 ಎಕರೆಗೆ 'ಪರವಾನಗಿ' ಪಡೆದು ನೂರಾರು ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಪರವಾನಗಿ ಪಡೆದ ದೊಡ್ಡ ಗಣಿಗಳ್ಳ ಕಂಪನಿಗಳು. ಅವ್ಯಾಹತವಾಗಿ ನಿರಾಂತಕದಿಂದ ಕಬ್ಬಿಣದ ಅದಿರನ್ನು ಕೊಳ್ಳೆ ಹೊಡೆಯುತ್ತಲೇ ಇವೆ. ಇವರಿಗೆ ರೆಡ್ಡಿ-ಯಡ್ಡಿ ಆದೇಶ



ಅನ್ವಯವಾಗುತ್ತಲೇ ಇಲ್ಲ. ಈಗಲೂ ಮೋದಿ, ಬಲ್ದೋಟಾ, ಉತ್, ಗಲಿ ಮತ್ಸಿ, ಆನಂದ್‌ಸಿಂಗ್, ಲಾಡ್ ಇತ್ಯಾದಿಗಳು ದಿನಂಪ್ರತಿ ಕ್ರಮವಾಗಿ 'ಅದಿರು ಸಾಗಿಸಿ ಕೋಟ್ಯಾಂತರ ರೂಪಾಯಿ ಕಮಾಯಿಸುತ್ತಿದ್ದಾರೆ. ಅಂದರೆ ಸರ್ಕಾರ ವಶಪಡಿಸಿಕೊಂಡಿದ್ದು ಯಾರದ್ದನ್ನು? ಈಗ ವಶಪಡಿಸಿಕೊಂಡಿರುವುದೆಲ್ಲಾ ರೈತರ ಪಟ್ಟಾ ಭೂಮಿಯಲ್ಲಿ ನಡೆಸಿದ 'ಡಿಗ್ಗಿಂಗ್ ಕಬ್ಬಿಣದ ಕಲ್ಲನ್ನು'. ಅಂದರೆ ಕೃಷಿ ಚಟುವಟಿಕೆ ಮಾಡಲಾಗದೇ, ಸಾಲದ ಬಾಧೆಯೇ ತಾಳಲಾಗದೇ ಕಂಗಾಲಾಗಿ ಹೋದ ರೈತರು ಅದಿರಿಗೆ ಬಂದ ದಿಢೀರ್ ಬೇಡಿಕೆ ಹಿನ್ನೆಲೆಯಲ್ಲಿ ತಮ್ಮ ಹೊಲಗಳಲ್ಲಿ ಸಿಗುವ ಕಬ್ಬಿಣದ ಕಲ್ಲುಗಳನ್ನು ಅಗೆದು ಆರಿಸಲು ಅವಕಾಶ ನೀಡಿರುವುದು. ಇದು ಕಾನೂನು ಪ್ರಕಾರ ಅಕ್ರಮಗಣಿಗಾರಿಕೆ ಇರಬಹುದು. ಆದರೆ ಅದು ರೈತರಿಗೆ ಅನಿವಾರ್ಯ. ಇಲ್ಲಿ ಸರ್ಕಾರ ಮಾಡಬಹುದಾಗಿದ್ದು 'ಡಿಗ್ಗಿಂಗ್ ಗಣಿಗಾರಿಕೆ'ಯನ್ನು ಪರಿಗಣಿಸಿ ಗಣಿ ಲೈಸೆನ್ಸ್ ಕಾಯ್ದೆಗೆ ತಿದ್ದುಪಡಿ ತಂದು, ನಿಗದಿತ ರಾಜಧನ ಸಂಗ್ರಹಿಸಿ ಅವಕಾಶ ನೀಡಬೇಕಿತ್ತು. ಆದರೆ ಹಾಗೆ ಮಾಡದೇ ದೊಡ್ಡ ತಿಮಿಂಗಲಗಳನ್ನು ರಕ್ಷಿಸಲು, ಈ ಬಡಪಾಯಿಗಳನ್ನು ಬಲಿ ಹಾಕಿ ಅಕ್ರಮ ಗಣಿಗಾರಿಕೆ ತಡೆದೆವೆಂದು ಹೇಳುವುದು ಒಂದು ಮಹಾ ಮೋಸವಾಗಿದೆ.



ಸಾರ್ವಜನಿಕರ ಒತ್ತಡ ಆರಂಭಗೊಂಡ ನಾಟಕ:


ಸ್ವತಃ ಜನಾರ್ಧನರೆಡ್ಡಿ ಕಂಪನಿಯೇ ಆಂಧ್ರ-ಕರ್ನಾಟಕ ಗಡಿಯಲ್ಲಿ ಅಕ್ರಮಗಣಿಗಾರಿಕೆ ನಡೆಸುತ್ತಿರುವುದು ಅಂತಹ

ಪುಟ10 ಕ್ಕೆ

ಶಾಲಾ ಬಸ್ ದುರಂತ

ಮಾನವೀಯತೆ ಮೆರೆದ ಮಂಗಳೂರಿಗರು

ಕರ್ನಾಟಕದ ಕರಾವಳಿ ಪ್ರದೇಶ ಕೋಮುದಳ್ಳುರಿಯಿಂದ ದಹಿಸುತ್ತಿರುವ ಬೆಂಕಿಗೂಡಾಗಿದೆ. ಜಾತ್ಯಾತೀತ ಭಾರತ ನಿರ್ಮಾಣಕ್ಕಾಗಿ ಸಮರ್ಪಿಸಿಕೊಂಡಿದ್ದ ಡಿವೈಎಫ್ಐ ಯುವ ನಾಯಕ ಕಾಂ: ಭಾಸ್ಕರ ಕುಂಬ್ಳೆಯನ್ನು ಹಿಂದೂ ಯುವ ಸೇನಾ ಗೂಂಡಾಗಳು ಹಾಡಹಗಲೇ ಲಾಂಗ್‌ಗಳಿಂದ ಕೊಚ್ಚಿ ಹಾಕಿದರು. ಹಾಗೆಯೇ ಡಿವೈಎಫ್ಐ ನಾಯಕ ಶ್ರೀನಿವಾಸ ಬಜಾಲ್‌ರ ಹತ್ಯೆಯಾಯಿತು. ಹಸು ಸಾಗಿಸುತ್ತಿದ್ದವರು ಎಂಬ



ನೀರಿಗೆ ಬಿದ್ದ ಶಾಲಾವಾಹನ

ಆರೋಪದ ಮೇಲೆ ಇಬ್ಬರು ಮುಸ್ಲಿಂ ಬಾಂಧವರನ್ನು ಬೆತ್ತಲೆಗೊಳಿಸಿ ಹಿಂಸೆ ನೀಡಲಾಯಿತು. ಸೂರತ್, ಭಟ್ಕಳ, ಪುತ್ತೂರು, ಮಂಗಳೂರಿನಲ್ಲಿ ಹತ್ತಾರು ಮಂದಿ ಅಮಾಯಕರು ಕೋಮು ಶಕ್ತಿಗಳ ಕ್ರೌರ್ಯಕ್ಕೆ ಬಲಿಯಾದರು. ಮನೆಯಿಂದ ಹೊರಟರೆ ಮತ್ತೆ ಹಿಂದಿರುಗುತ್ತೇವೆ ಎಂಬ ಭರವಸೆ ಇಲ್ಲದೆ ಹೃದಯವನ್ನು ಅಂಗೈಲಿಟ್ಟುಕೊಂಡು ಜೀವನ ಸಾಗಿಸುವಂತಹ ಪರಿಸ್ಥಿತಿ ಅನೇಕರದು.

ಅವರ ಗುರಿ ಎಲ್ಲರನ್ನೂ ಬದುಕಿಸಬೇಕೆಂದಿತ್ತು. ಜಾತಿ ಮತ ಭೇಧ ಅವರ ಮನಸ್ಸಿನಲ್ಲಿ ಸುಳಿಯಲಿಲ್ಲ. ಆದರೆ ದೇಶಪ್ರೇಮ, ಧರ್ಮ ರಕ್ಷಣೆ ಎಂದೆಲ್ಲಾ ಬಡಬಡಿಸುವ ಚೆಡ್ಡಿಪಡೆ ಗುಜರಾತ್‌ನಲ್ಲಿ ಮಾಡಿದ್ದು ಅಮಾನವೀಯ ಅಲ್ಲವೇ?

ಇಂತಹ ಪ್ರದೇಶದಲ್ಲಿ ಮಾನವೀಯ ಮೌಲ್ಯಗಳನ್ನು ಹೆಕ್ಕಿ ಪ್ರತಿ ಹೃದಯದಲ್ಲೂ ಪಸರಿಸುವುದರಿಂದ ಮಾತ್ರ ಮಾನವೀಯ ಸಮಾಜವನ್ನು ರೂಪಿಸಲು ಸಾಧ್ಯ.

ಕಳೆದ ಗುರುವಾರ ಮಂಗಳೂರು ಮೂಡಬಿದಿರೆ ನಡುವಿನ ಉಲ್ಲಾಳು ಬೆಟ್ಟ ಸಮೀಪ ನಡೆದ ಬಸ್ ಅಪಘಾತ ಇಡೀ ರಾಜ್ಯದ ಜನತೆಯ ಹೃದಯವನ್ನು ಕಲಕಿತು. ಜನರನ್ನು ಅವರ ಗೂಡು ಸೇರಿಸಲು ಹೊರಟ ಬಸ್ಸು ಉಲ್ಟೆಬೆತ್ತು ಸಮೀಪ ಫಲ್ಗುಣಿ ನದಿಯಲ್ಲಿ ಮುಳುಗಿತು. ಅದರಲ್ಲಿ ಶಾಲಾ ಮಕ್ಕಳೇ ಹೆಚ್ಚಾಗಿದ್ದರು ಎಂಬುದು ಇನ್ನಷ್ಟು ನೋವುಂಟು ಮಾಡುವ ವಿಷಯ. ಜಲ ಸಮಾಧಿಯಾದ ಹನ್ನೊಂದು ಮಂದಿಯಲ್ಲಿ ಏಳು ಮಂದಿ ಪ್ರಾಥಮಿಕ ಶಾಲಾ ಮಕ್ಕಳು. ಇನ್ನಷ್ಟು ಮಕ್ಕಳು ಇಹಲೋಕ ತ್ಯಜಿಸಬೇಕಾಗಿತ್ತು. ಆದರೆ ಘಟನೆ ನಡೆದ ಸ್ಥಳಕ್ಕೆ ಆಗಮಿಸಿದ ಮೂರು ಮಂದಿ ಮುಸ್ಲಿಂ ಯುವಕರು ಹಲವಾರು ಮಕ್ಕಳಿಗೆ ಮರು ಜೀವ ನೀಡಿದರು.

ಬಸ್ಸು ಫಲ್ಗುಣಿ ನದಿಗೆ ಮಗುಚಿಕೊಂಡಿದ್ದನ್ನು ನೋಡಿದ ತಕ್ಷಣ ಸಾಹುಲ್ ಹಮೀದ್, ಆಸೀಫ್ ಮತ್ತು ರಫೀಕ್ ತಮ್ಮ ಪ್ರಾಣವನ್ನು ಲೆಕ್ಕಿಸದೆ ಹರಿಯುತ್ತಿದ್ದ ನದಿಗೆ ಧುಮುಕಿದರು. ತಮ್ಮ ದೇಹದಲ್ಲಿ ಶಕ್ತಿಯ ಕೊನೆ ಅಣು ಮುಗಿಯುವತನಕ ಶ್ರಮಿಸಿದರು. ಹಲವಾರು ಮಕ್ಕಳನ್ನು ದಡಕ್ಕೆ ಸೇರಿಸಿದರು.

ಅನಾರೋಗ್ಯದಿಂದ ನರಳುತ್ತಿದ್ದ ಉಲ್ಲಾಳು ಬೆಟ್ಟದ ನಿವಾಸಿ ಸಾಹುಲ್ ತನ್ನ ಸ್ನೇಹಿತ ಆಸಿಫ್



ಬಲಿಯಾದ ಮುಗ್ಧ ಮಕ್ಕಳು

ಜೊತೆ ಔಷಧಿ ತರಲು ಗುರುಪುರಕ್ಕೆ ಹೊರಟಿದ್ದ. ದುರಂತ ಕಣ್ಣಿಗೆ ಕಾಣುತ್ತಿದ್ದಂತೆ ಆಸಿಫ್ ಮತ್ತು ಸಾಹುಲ್ ನದಿಗೆ ಧುಮುಕಿದರು. ಆಟೋ ಚಾಲಕ ರಫಿಕ್ ಸಹ ಅವರಿಬ್ಬರನ್ನು ಅನುಸರಿಸಿದ. ಇವರ ಈ ಮಾನವೀಯತೆಯಿಂದಾಗಿ ಹನ್ನೊಂದು ಮಕ್ಕಳು ಮರುಜೀವ ಪಡೆದುಕೊಂಡರು. ಆ ಪ್ರದೇಶದ ಗ್ರಾಮಸ್ಥರೂ ಮುಳುಗುತ್ತಿರುವ ಬಸ್‌ನ್ನು ದಡಕ್ಕೆ ಎಳೆಯಲು ಯತ್ನಿಸಿದರು. ಆದರೆ ಕಟ್ಟಿದ ಹಗ್ಗ ತುಂಡಾಗಿ ಪ್ರಯತ್ನ ವ್ಯರ್ಥವಾಯಿತು.

ಬಸ್ಸಿನಲ್ಲಿದ್ದ ಮಕ್ಕಳನ್ನು ಉಳಿಸುವುದು ತಮ್ಮ ಪ್ರಮುಖ ಆದ್ಯತೆಯಾಗಿತ್ತು ಎಂದು ಹಮೀದ್ ಗದ್ಗದಿತವಾಗಿ ಹೇಳುತ್ತಿದ್ದ. ಬಸ್‌ನ ಕಿಟಕಿ ಗಾಜುಗಳನ್ನು ಒಡೆದು ಮಕ್ಕಳನ್ನು ಅವರು ಹೊರಗೆಳೆದಿದ್ದರು. ತಮ್ಮ ಕೈ ಸೋಲುವತನಕ ಅವಿರತ ಪ್ರಯತ್ನ ನಡೆಸಿದರು.

ಗುಜರಾತ್‌ನ ಕರ್ಛ ಮತ್ತು ಬುಜ್‌ನಲ್ಲಿ ಭೂಕಂಪ ಸಂಭವಿಸಿದಾಗ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದ ಸಂಘ ಪರಿವಾರದವರು ಆಹಾರ ನೀರಿಗಾಗಿ ಹಪಹಪಿಸುತ್ತಿದ್ದ ಜನರ ನಡುವೆ ಸ್ವಜನ ಪಕ್ಷಪಾತ ಮೆರೆದಿದ್ದರು. ಆದರೆ ಬಸ್ ಅಪಘಾತದಲ್ಲಿ ಮಕ್ಕಳನ್ನು ರಕ್ಷಿಸುವಾಗ ಸಾಹುಲ್ ಹಮೀದ್, ಆಸೀಫ್ ಮತ್ತು ರಫೀಕ್ ಮನಸ್ಸಿನಲ್ಲಿ ಅಪ್ಪಿತಪ್ಪಿಯೂ ಅಂತಹ ಕ್ರೂರ ಭಾವನೆ ಅವತರಿಸಲಿಲ್ಲ. ಅಲ್ಲಿ ನೆರೆದವರಿಗೆ ಧಾವಿಸಿದ ಗ್ರಾಮಸ್ಥರಿಗೂ ಸಹ ಗುಜರಾತ್‌ನ ಗೋದ್ರಾ ಮತ್ತು ನಂತರದ ಕೋಮುಗಲಭೆಗಳಲ್ಲಿ ಮುಸ್ಲಿಂ ಸಮುದಾಯದ ಗರ್ಭಿಣಿಯರ ಹೊಟ್ಟೆ ಬಗೆದು ಭ್ರೂಣಗಳನ್ನು ಚೆಂಡಾಡಿದವರು ಇಂತಹ ಘಟನೆಗಳಿಂದ ಪಾಠ ಕಲಿಯುವುದು ಅಗತ್ಯವಾಗಿದೆ.

ಮನುಷ್ಯನನ್ನು ಮನುಷ್ಯನನ್ನಾಗಿ ಕಾಣದ ಮಾನವೀಯತೆ ಇಲ್ಲದ ಯಾವುದೇ ಧರ್ಮ ಅದು ಧರ್ಮವಲ್ಲ. ಈ ಘಟನೆಯ ನಂತರದಾದರೂ ಕೆಲವರು ಮೈಗೂಡಿಸಿಕೊಂಡಿರುವ ವಿಕೃತತೆಗೆ ಇತಿಶ್ರೀ ಹಾಡುತ್ತಾರೆಂದು ಭಾವಿಸೋಣವೇ.

○ ಮುರುಳಿ

ಉಳ್ಳವರ ಸಂತೆ

ಸ್ವಾತಂತ್ರ್ಯ ಭಾರತದಿ ಉಳ್ಳವರ ಸಂತೆ
ಸುರಳೀತ ಇನ್ನಷ್ಟು ಗಳಿಸುವುದೇ ಚಿಂತೆ
ದುಡಿವವಗೆ ಹಸಿವನ್ನು ಹತ್ತಿಕ್ಕಿ ರೂಢಿ
ಉಂಟಯ್ಯ ತೊಡಕಿಲ್ಲ ನಡೆಯುವುದು ಗಾಡಿ

ನಿರುದ್ಯೋಗ

ಹಾದಿ ಬೀದಿಯೊಳು ಬಿದ್ದು ಸಾಯುವಷ್ಟು
ಹೆಚ್ಚಲಿದೆ ನಿರುದ್ಯೋಗ ಇನ್ನು ಬಹಳಷ್ಟು
ಕಾರಣವು ಹೆಚ್ಚಿಹುದು ನಿವೃತ್ತಿ ವಯಸ್ಸು
ಸರ್ಕಾರಕ್ಕೆ ನೋಡಿ ಇದರ ಯಶಸ್ಸು

ವಿಡಂಬಾರಿ

ಆಹಾ ಭಂ, ಭಂ, ಭೋಲೆ! ಏನು ನಿನ್ನ ಭಕ್ತರ(?) ಲೀಲೆ!

ಅಬ್ಬಾ, ಅಬ್ಬಾ..., ಅಬ್ಬಾ..., ಏನ್ ಮಳೆ, ಏನ್ ಮಳೆ ಎಲ್ಲಾ ಕೊಚ್ಚ್ಕೊಂಡು ಹೋಯ್ತಲ್ಲಾ.

■ ನಮ್ಮ ಸನ್ಮಾನ್ಯ ಮುಖ್ಯ (ಭಕ್ತ) ಮಂತ್ರಿಗಳು ತಮ್ಮ ಭಕ್ತಮಂಡಳಿ (ಮಂತ್ರಿ ಮಂಡಲ)ಯೊಡನೆ ತೀರ್ಥ ಕ್ಷೇತ್ರಗಳಿಗೆ ಯಾತ್ರೆಗೈದು, ಪೂಜೆ ಮನಸ್ಕಾರಗಳನ್ನೂ, ಹೋಮ ಹವನಾದಿಗಳನ್ನು ಸಾಂಗವಾಗಿ ನೆರವೇರಿಸಿದ್ದರಿಂದಲೇ ಚೆನ್ನಾಗಿ ಮಳೆ ಬರುತ್ತಿದೆ ಎಂದು ಅಭಿಮಾನಿ ಶಿಷ್ಯರುಗಳ ಅಂಬೋಣ.

■ ಪೂಜೆಮನಸ್ಕಾರಗಳನ್ನು ನೆರವೇರಿಸಿದ್ದ ರಿಂದಲೇ ಎಲ್ಲ ಕಡೆ ನೆರೆ ಬಂದಿದೆಯಲ್ರೀ. ಇನ್ನೊಂದು ಬಾರಿ ತೀರ್ಥಯಾತ್ರೆ ಗೈದು ಮಳೆ ನಿಲ್ಲಿಸಲು ಯಾತ್ರೇ ಪೂಜೆ ಮಾಡುತ್ತಿಲ್ಲ ನಮ್ಮ ಮುಖ್ಯ (ಭಕ್ತ) ಮಂತ್ರಿಗಳು.

■ ಅಭಿನವ ಬಿಂದ್ರಾಗೆ ಒಲಿಂಪಿಕ್ಸ್ ನಲ್ಲಿ ಚಿನ್ನದ ಪದಕ.

■ ಅಂತೂ 108 ವರ್ಷಗಳ ನಂತರ 108 ಕೋಟಿಯಲ್ಲಿ ಒಬ್ಬ ಭಾರತೀಯ ಒಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಪಡೆದನಲ್ಲ! ಒಬ್ಬೊಬ್ಬರ ಪರವಾಗಿ ಒಂದೊಂದರಂತೆ 108 ಕೋಟಿ ಅಭಿನಂದನೆಗಳು ಅಭಿನವ.

■ ಒಲಿಂಪಿಕ್ಸ್ ನಲ್ಲಿ ಪದಕ ಪಡೆದ ಅಬಿನವ ಬಿಂದ್ರಾಗೆ ಕರ್ನಾಟಕದಿಂದ ಹತ್ತು ಲಕ್ಷ ರೂಪಾಯಿ ಬಹುಮಾನ ಘೋಷಣೆ.

■ ಸುಮ್ನೆ ಪ್ರಚಾರಕ್ಕೆ ಘೋಷಣೆ ಮಾಡಿದ್ರೆ ಆಗಲ್ಲ ಕಣ್ರೀ. ಇದೇನು ಪ್ರವಾಹ ಪೀಡಿತರಿಗೆ, ಬರಪೀಡಿತರಿಗೆ, ನಮ್ಮ ರೈತರಿಗೆ ಪರಿಹಾರ ಘೋಷಣೆ ಮಾಡಿ ಮರೆಯುವ ಹಾಗಲ್ಲ.

■ ಬರೀ ಗೆದ್ದೆತ್ತಿನ ಬಾಲ ಹಿಡಿಯುವುದಲ್ಲ. ಕ್ರೀಡೆಯಲ್ಲಿ ರಾಜಕೀಯ ಮಾಡದೆ, ಕ್ರೀಡಾ ಪಟುಗಳಿಗೆ ಸರಿಯಾದ ಸೌಲಭ್ಯ ಪ್ರೋತ್ಸಾಹ ನೀಡಿದಲ್ಲಿ ಇನ್ನಷ್ಟು ಮತ್ತಷ್ಟು ಪದಕಗಳು ಬರಲಾರವೇನ್ರೀ?

■ ಅಮರನಾಥ ವಿವಾದ ಬೆಳೆಸಿ ಮುಂದಿನ ಲೋಕಸಭಾ ಚುನಾವಣೆ ಲಾಭ ಪಡೆಯಲು ಬಿಜೆಪಿ ಸಭೆ.

■ ಶಿವ, ಶಿವಾ, 'ಅಮರ'ನ ಹೆಸರಿನಲ್ಲಿ ಇನ್ನೆಷ್ಟು 'ಮರಣ'ಗಳು ಕಾದಿವೆಯೋ?

■ ದೇಶದಲ್ಲಿ ಎಷ್ಟೆಲ್ಲ ಸಮಸ್ಯೆಗಳಿವೆ ಅಂಥದರಲ್ಲಿ ತುಂಡು ಭೂಮಿಯ ವಿವಾದ ಬೆಳೆಸಿ ಇಡೀ ದೇಶಕ್ಕೇ ಕಿಚ್ಚು ಹಚ್ಚಿ ಮೈ ಕಾಯಿಸಿಕೊಳ್ಳಲು ಹೊರಟಿದ್ದಾರಲ್ಲಾ ಶಿವನೇ?

ಕಲ್ಪೇಶ್ರೀ

ಆಹಾ ಭಂ ಭಂ ಭೋಲೆ!
ಏನು ನಿನ್ನ ಭಕ್ತರ(?) ಲೀಲೆ!
ನಾಥನೆ ನಿನಗೆ ನರಬಲಿ ಮಾಲೆ! ದಿಲ್ಲಿ ಗದ್ದುಗೆ ಏರಿದ ಮೇಲೆ,
ರಾಮನಂತೆ ಅಮರನೂ ಸೇರುವ ಮೂಲೆ!

■ ಅಕ್ಕ ಸಮ್ಮೇಳನಕ್ಕೆ ಹೋಗಲು ಪೈಪೋಟಿ.

ಅಕ್ಕನ ಮನೆಗೆ ಹೋಗಲು ತಮ್ಮಂದಿರ ದುಂಬಾಲು!. ಮಂತ್ರಿ ಮಹೋದಯರೂ, ಘನ ಸಾಹಿತಿಗಳೂ, ಕವಿ ಪುಂಗವರೂ, ಕಲಾವಿದ ಕೋವಿದರೂ, ಅತ್ತೂ ಕರೆದೂ ಅಕ್ಕನ ಮನೆಯ ಔತಣಕ್ಕೆ ಹೊರಟಿದ್ದಾರೆ. ಅವರಿವರ ಕಾಲು ಹಿಡಿದು ಅಥವಾ ಕಾಲು ಎಳೆದು ಅಕ್ಕನ ಸಮ್ಮೇಳನಕ್ಕೆ ಹೋಗಲು ಪ್ರಯತ್ನಿಸುತ್ತಿದ್ದಾರೆ. ಯಾರದೋ ದುಡ್ಡಲ್ಲಿ ಅಕ್ಕಮ್ಮನ ಜಾತ್ರೆ ಮಾಡುವುದರಿಂದ ತಮ್ಮ ಜನ್ಮ ಸಾರ್ಥಕ ಎಂದು ತಿಳಿದಿದ್ದಾರೆ.

ಈ ನಡುವೆ ಏನೇ ಶತ ಪ್ರಯತ್ನ ಮಾಡಿದರೂ ಅಕ್ಕನ ಜಾತ್ರೆಗೆ ಹೋಗಲು ಅವಕಾಶ ಸಿಗದ ತಮ್ಮಂದಿರು ಥೂ, ಇವಳು ಅಕ್ಕ ಅಲ್ಲ, ಅವಳಿಗೆ ಬಲು ಸೊಕ್ಕು! ಅಲ್ಲಿಗೆ ಹೋಗುವವರು ತಮ್ಮಂದಿರಲ್ಲ. ಕೊಳಕು ತಿಮ್ಮಂದಿರು ಎಂದು ಮೈ ಪರಚಿಕೊಳ್ಳಲಾರಂಭಿಸಿದ್ದಾರೆ.

■ ಹಣದುಬ್ಬರ ಇನ್ನೂ ಏರಿಕೆ – ಹಣಕಾಸು ಸಚಿವರಿಗೆ ನಿರಾಸೆ.

ಬೇವಿನ ಗಿಡದಲ್ಲಿ ಮಾವಿನ ಕಾಯಿ ಬಿಡಲಿಲ್ಲ ಅಂತ ನಿರಾಸೆ ಪಟ್ಟ ಹಾಗಾಯಿತು. ನಿಮ್ಮ ಅನಿಷ್ಟ ಆರ್ಥಿಕ ನೀತಿಗಳ ಫಲವೇ ಇದು ಕಣ್ರೀ. ಹಣದುಬ್ಬರ ಹೆಚ್ಚಿದ ಹಾಗೆಲ್ಲ, ನಿರಾಸೆ ಅಂತಲೋ, ಬೇಸರದ ಸಂಗತಿ ಅಂತಲೋ, ಸೂಕ್ತ ಕ್ರಮ ಕೈಗೊಳ್ಳ ಲಾಗುವುದು ಅಂತಲೋ ಏನೋ ಒಂದು ಪ್ರತಿಕ್ರಿಯೆ ನೀಡಿಬಿಟ್ಟರೆ ನಿಮ್ಮ ಕೆಲಸ ಮುಗಿಯಿತು. ಆದರೆ ಬಡಜನರು, ಮಧ್ಯಮ ವರ್ಗದವರೂ ಇಂಥ ಬೆಲೆಯೇರಿಕೆಯಲ್ಲಿ ಬದುಕುವುದಾದರೂ ಹೇಗ್ರೀ?

ಜನಶಕ್ತಿ
ಕನ್ನಡ ವಾರಪತ್ರಿಕೆ

ನಂದವಾಡಗಿ ಏತ ನೀರಾವರಿ ಯೋಜನೆಗಾಗಿ ತೀವ್ರಗೊಂಡ ಹೋರಾಟ :

ಬಯಲಾದ ಸರ್ಕಾರದ ಬಣ್ಣ

ಮಲ್ಲಯ್ಯ ಜಾಲಹಳ್ಳಿ

ನಂದವಾಡಗಿ ಏತ ನೀರಾವರಿ ರಾಯಚೂರು ಜಿಲ್ಲೆಯ ಅತಿ ದೊಡ್ಡ ಏತ ನೀರಾವರಿ, ಈ ಯೋಜನೆಯ ಮೂಲಕ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 5 ಹಳ್ಳಿಗಳಿಗೆ ಮತ್ತು ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲುಕಿನ 47 ಹಳ್ಳಿಗಳಿಗೆ ಮತ್ತು ಮಾನವಿ ತಾಲ್ಲೂಕಿನ 23 ಹಳ್ಳಿಗಳಿಗೆ ಒಟ್ಟಾರೆ 75 ಹಳ್ಳಿಗಳ ಭೂಮಿಗೆ ನೀರು ಒದಗಿಸಬಹುದಾಗಿದೆ. ಹುನಗುಂದ ತಾಲ್ಲೂಕಿನ 15,000 ಎಕರೆಗಳಿಗೆ, ಲಿಂಗಸೂಗೂರು ತಾಲ್ಲೂಕಿನ 80,000 ಹಾಗೂ ಮಾನವಿ ತಾಲ್ಲೂಕಿನ 40,000 ಎಕರೆಗಳ ಜಮೀನಿಗೆ ನೀರು ಸಿಗಲಿದೆ. ಒಟ್ಟಾರೆ 1,35,000 ಎಕರೆಗಳಿಗೆ ನೀರು ಕೊಡುವಂತಹ ಬೃಹತ್ ಯೋಜನೆಯಾಗಿದೆ. ಇದು 05.09.2003ರ ಮಾಸ್ಟರ್ ಪ್ಲಾನ್ ಸಮಿತಿ ಮಂಜೂರಾತಿ ನೀಡಿದ ಯೋಜನೆಯಾಗಿದೆ.

ಮಂಜೂರಾಗದ ಹಣ

2003ರಲ್ಲಿ ಮಾಸ್ಟರ್ ಫ್ಲಾನ್ ಸಮಿತಿ ಈ ಯೋಜನೆಗೆ ಮಂಜುರಾತಿ ನೀಡಿದಾಗ ಈ ಭಾಗದ ಜನ ಸಂತೋಷದಿಂದ ಕುಣಿದಾಡಿದರು. 'ಬಿ' ಸ್ಕಿಮಿನಲ್ಲಿ ಈ ಯೋಜನೆ ಕೈಗೊಳ್ಳಲಾಗುವುದೆಂದು ಪ್ರಚಾರವಾಯಿತು. ರೈತರು ಇನ್ನೇನು ನಾಲ್ಕಾರು ವರ್ಷಗಳಲ್ಲಿ ನೀರು ಕಾಣುತ್ತೇವೆ ಎಂಬ ಖುಷಿಯಲ್ಲಿದ್ದರು. 2006ರಲ್ಲಿ ಈ ಯೋಜನೆಗೆ ಸಂಬಂಧಿಸಿ ಸರ್ವೆ ಮತ್ತು ಅಂದಾಜು ಪತ್ರ ಸಿದ್ಧಪಡಿಸಲು ಸರ್ಕಾರ ಆದೇಶ ನೀಡಿತು. ಅದಕ್ಕೆ ಮುಖ್ಯ ಇಂಜಿನಿಯರ್ ನಾರಾಯಣಪುರ ಅವರು ಸರ್ವೆಗಾಗಿ ಮತ್ತು ಅಂದಾಜು ಪತ್ರ ಸಿದ್ದಪಡಿಸಲು 1,51,20,000 ರೂ.ಗಳ ಮಂಜೂರಾತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು. 26.03.2007 ರಿಂದ ಹಿಡಿದು 16.05.2008ರವರೆಗೆ ನೆನಪಿನ ಪತ್ರಗಳ ಸರಮಾಲೆಯೇ ಈ ಎರಡೂ ಕಛೇರಿಗಳ ನಡುವೆ ಹರಿದಾಡಿವೆ. ಆದರೆ ಹಣ ಮಾತ್ರ ಮಂಜೂರಿಯಾಗಲಿಲ್ಲ!

ಚಳುವಳಿಯತ್ತ

ಈ ನಡುವೆ 'ಬಿ' ಸ್ಕೀಂನಲ್ಲಿ ಈ ಯೋಜನೆ ಕೈಬಿಡಲಾಗಿದೆ ಎಂಬ ವಿಷಯ ಬಹಿರಂಗವಾಯಿತು. ಅಸಮಾಧಾನಗೊಂಡ ಜನತೆ ಹೋರಾಟಕ್ಕೆ ಇಳಿಯುವ ಮಾತನಾಡತೊಡಗಿತು. ಈ ಸಂದರ್ಭ ಬಳಸಿಕೊಂಡು ಲಿಂಗರಾಜ ಚುಕ್‌ನಟ್ಟಿ ಎಂಬ ಇಂಜಿನಿಯರ್ ನಂದವಾಡಗಿ ಏತ ನೀರಾವತಿ ಹೋರಾಟ ಸಮಿತಿಗಳನ್ನು ಯೋಜನಾ ವ್ಯಾಪ್ತಿಯ ಹಳ್ಳಿ ಹಳ್ಳಿಗಳಲ್ಲಿ ರಚಿಸಿದ. ಜನತೆ ಈ ಹೋರಾಟ ಸಮಿತಿಗಳ ಜೊತೆ ತಮ್ಮನ್ನು ಗುರುತಿಸಿಕೊಂಡರು. ಆದರೆ ಇಲಾಖೆಯ ಇಂಜಿನಿಯರ್‌ರವರು 'ಬಿ' ಸ್ಕೀಂನಲ್ಲಿ ಈ ಯೋಜನೆ ಸೇರಿಸಲು ಆಗಲಿಲ್ಲ, ಆದರೆ ನದಿ ಜೋಡಣೆಯಲ್ಲಿ ಈ ಯೋಜನೆ ಕೈಗೊಳ್ಳಲಾಗುವುದೆಂದು ತಿಳಿಸಿ ಲಿಂಗರಾಜನನ್ನು ಸುಮ್ಮನಾಗಿಸಿದರು. ಆದರೆ ರೈತರು ಹೋರಾಟಕ್ಕೆ ಇಳಿಯುವ ಮಾತನಾಡತೊಡಗಿದರು. ಇದನ್ನು ಗಮನಿಸಿದ ಕನ್ನಡ ರಕ್ಷಣಾ ವೇದಿಕೆಯವರು ಹಾಮನ ಕಲ್ಲೂರಿನಲ್ಲಿ ಅಮರಣಾಂತರ ಉಪವಾಸ ಸತ್ಯಾಗ್ರಹ ಕೈಗೊಂಡರು. ಅಮರಣಾಂತರ ಉಪವಾಸ ಕೈಗೊಂಡ 6 ಜನ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ನಂತರ ಅಮರಣಾಂತರ ಉಪವಾಸ ಸತ್ಯಾಗ್ರಹ ಧರಣೆಯಾಗಿ ಮಾರ್ಪಟ್ಟಿತು. ಜಿಲ್ಲಾ ಬಂದ್‌ಗೆ ಕರೆ ಕೊಟ್ಟರು. ಇಡೀ ಜಿಲ್ಲೆ ಉತ್ತಮವಾಗಿ ಸ್ಪಂದಿಸಿ ಬಂದ್ ಆಚರಿಸಿ ತೋರಿಸಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಎಂ.ಉದಾಸಿ ರಾಯಚೂರಿಗೆ ಬಂದರು. ಆದರೆ 70 ಕಿ.ಮೀ.ದೂರದಲ್ಲಿ ಕುಳಿತ ಸತ್ಯಾಗ್ರಹಿಗಳನ್ನು ಭೇಟಿಯಾಗಲಿಲ್ಲ. ಲಿಂಗಸೂಗೂರು ಶಾಸಕ ಮಾನಪ್ಪ ವಜ್ಜಲ್ ಮತ್ತು ಮಸ್ಕಿ ಶಾಸಕ ಪ್ರತಾಪಗೌಡ ಪಾಟೀಲ್‌ರು ಸತ್ಯಾಗ್ರಹಿಗಳ ಜತೆ ಮಾತನಾಡಿ ಮುಖ್ಯಮಂತ್ರಿ ಜೊತೆ ಚರ್ಚಿಸುವುದಾಗಿ ತಿಳಿಸಿದರು. ಅಷ್ಟು ಭರವಸೆಗೆ ಸತ್ಯಾಗ್ರಹ ಕೊನೆಗೊಂಡಿತು.

> ರೈತರ ಸಮಾವೇಶದಲ್ಲಿ ಯಡಿಯೂರಪ್ಪನವರು ನೀಡಿದ ಭರವಸೆ ಕೃತಿಗಿಳಿಯಲಿಲ್ಲ. ನೀರಾವರಿ ಯೋಜನೆ ಜಾರಿಗಾಗಿ ಜನ ಹೋರಾಟಕ್ಕೆ ಇಳಿದಾಗ ಸರ್ಕಾರದ ಬಣ್ಣ ಬಯಲಾಯಿತು.

ಹನುಮನಗೌಡ ಮದರಕಲ್ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡುತ್ತಿರುವುದು



ಈ ಮಧ್ಯೆ ಕರ್ನಾಟಕ ಪ್ರಾಂತ ರೈತ ಸಂಘ ಪ್ರತ್ಯೇಕ ಹೋರಾಟಕ್ಕೆ ಹೋಗಲು ತೀರ್ಮಾನಿಸಿತು. 24.07.08ರಿಂದ ಅನಿರ್ದಿಷ್ಟ ಧರಣಿಯನ್ನು ಲಿಂಗಸೂಗೂರಿನ ತಹಶೀಲ್ದಾರ್ ಕಛೇರಿ ಮುಂದೆ ಕೈಗೊಂಡಿತು. ಈ ಅಹೋರಾತ್ರಿ ಧರಣೆಗೆ ಅನೇಕ ಸಂಘ ಸಂಸ್ಥೆಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಅಪಾರ ಸಂಖ್ಯೆಯಲ್ಲಿ ರೈತರು ಬೆಂಬಲಿಸಿದರು. ಸಂಘವು ರೈತರಲ್ಲಿ ಹರಡಿದ ಹಲವು ಅಪಪ್ರಚಾರಗಳಿಗೆ ಸಮಾಜಾಯಿಷಿ ಕೊಡಲು 31.07.2008 ರಂದು ಲಿಂಗಸೂಗೂರು ನಗರದಲ್ಲಿ ವಿಚಾರ ಸಂಕಿರಣ ನಡೆಯಿತು. ಈ ವಿಚಾರ ಸಂಕಿರಣದಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ಉಪನ್ಯಾಸಕರುಗಳಾದ ಬಸವಂತ್ರಾಯ ಕುರಿ ಹಾಗೂ ಶೇಖಾವತಿ ತಮ್ಮ ವಿಚಾರ ಮಂಡಿಸಿದರು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಮಲ್ಲಯ್ಯ ಜಾಲಹಳ್ಳಿ ವಹಿಸಿದ್ದರು. ಪ್ರಾಸ್ತಾವಿಕವಾಗಿ ಹನುಮಗೌಡ ಮದರಕಲ್ ಮಾತನಾಡಿದರು. ಎಲ್ಲರೂ ಮಾತನಾಡಿದ್ದರಿಂದಾಗಿ ನಂದವಾಡಗಿ ಜಾರಿ ಬಗ್ಗೆ ಇದ್ದ ಗೊಂದಲ ಕಡಿಮೆಯಾಯಿತು. ಮಾಧ್ಯಮಗಳು ಈ ವಿಚಾರಸಂಕಿರಣಕ್ಕೆ ನಂತರದ ಸುದ್ದಿಗೋಷ್ಠಿಗಳಿಗೆ ಅಗತ್ಯ ಪ್ರಚಾರ ನೀಡಿದವು. ರೈತರಲ್ಲಿ ಜಿಲ್ಲೆಯಲ್ಲಿ ಹೊಸ ಉತ್ಸಾಹ ಉಕ್ಕಿತು.

ಮಾನಪ್ಪ ವಜ್ಜಲ ಸ್ಥಳೀಯ ಶಾಸಕರು ಮುಷ್ಕರ ಶಿಬಿರಕ್ಕೆ ಭೇಟಿ ನೀಡಿ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿ ಹಿಂತೆಗೆದುಕೊಳ್ಳಲು ವಿನಂತಿಸಿದರು. ಆದರೆ ರೈತ ಮುಖಂಡರು ನಿರಾಕರಿಸಿದರು. ನಂತರ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಬೃಹತ್ ಫೈಲುಗಳೊಂದಿಗೆ ಒಂದು ದೊಡ್ಡ ತಂಡ ಕಟ್ಟಿಕೊಂಡು ಬಂದರು. ಅವರಿಗೆ ಜಿಲ್ಲಾಡಳಿತದ ಎಲ್ಲಾ ಅಧಿಕಾರಿಗಳು ಸಹಾಯಕ್ಕಾಗಿ ಬಂದರು. ಮಾರುತಿ ಮಾನ್ಪಡೆಯವರ ಮುಖಂಡತ್ವದಲ್ಲಿ ಜಿಲ್ಲಾ ರೈತರ ಮುಖಂಡರು ಚರ್ಚೆಯಲ್ಲಿ ಭಾಗವಹಿಸಿದರು. ಅಧಿಕಾರಿಗಳು ಸತತ 2 ಗಂಟೆ ವಾದಿಸಿ ಈ ಯೋಜನೆ ಜಾರಿ ಅಸಾಧ್ಯವೆಂದರು.

ವಾದ – ಪ್ರತಿವಾದ

ನಂದವಾಡಗಿ ಸಮುದ್ರಮಟ್ಟದಿಂದ 591 ಮೀಟರ್ ಎತ್ತರವಿದೆ. ನೀರು ಏರಿಸುವುದು ಕಷ್ಟ. ಹೀಗಾಗಿ ನೀರು (14.43 ಟಿಎಂಸಿ) ನಿಲ್ಲಿಸಲು 15000 ದಿಂದ 20,000 ಎಕರೆ ಭೂಮಿ ಬೇಕು. ಅಂತಹ ಜಮೀನು ನಂದವಾಡಗಿ ಸುತ್ತಮುತ್ತ ಇಲ್ಲ. ಕೆಲವೆಡೆ ಇದ್ದರೂ ರೈತರು ಕೊಡಲು ಮುಂದೆ ಬರುವುದಿಲ್ಲ. ಇದು ಎ ಮತ್ತು ಬಿ ಸ್ಕೀಂಗಳಲ್ಲಿ ಸೇರಿಲ್ಲ. ಹೀಗಾಗಿ ಪ್ರವಾಹ ಬಂದಾಗ ನೀರು ಸಂಗ್ರಹಿಸಿಟ್ಟುಕೊಳ್ಳಬೇಕು ಇತ್ಯಾದಿ ವಾದಗಳನ್ನು ಇಂಜಿನಿಯರ್‌ಗಳ ತಂಡ ಇಟ್ಟಿತು. ಅದಕ್ಕೆ ರೈತ ಮುಖಂಡರು ಮುಳುವಾಡಗಿ ಏತ ನೀರಾವರಿಗೆ 630 ಮೀಟರ್ ನೀರು ಎತ್ತರಿಸುವುದು ಸಾಧ್ಯವಾಗಿರುವಾಗ ಅದಕ್ಕಿಂತ 39 ಮೀಟರ್ ಕಡಿಮೆ ಎತ್ತರವಿರುವ ನಂದವಾಡಿಗೆ ಸುಲಭವಾಗಿ ನೀರು ಎತ್ತಬಹುದು. ನೀರು ಸಂಗ್ರಹಕ್ಕೆ ಜಲಾಶಯದ ಅವಶ್ಯತೆಯಿಲ್ಲ. ಈಗ ಇರುವ ಅಲಮಟ್ಟಿ ಜಲಾಶಯ 519 ಮೀಟರ್ ಎತ್ತರವಿದ್ದು 173 ಟಿಎಂಸಿ ನೀರು ಸಂಗ್ರಹ ಇಟ್ಟುಕೊಂಡಿದೆ. ಇನ್ನೂ 5 ಮೀಟರ್ ಎತ್ತರಿಸಲು ಅವಕಾಶವಿದೆ. ಹಾಗಾದಾಗ 250 ಟಿಎಂಸಿ ಗೂ ಹೆಚ್ಚು ನೀರು ಸಂಗ್ರಹವಾಗುತ್ತದೆ. ಹೀಗಾಗಿ ಅದರಲ್ಲಿ ನಂದವಾಡಿಗೆ 14.43 ಟಿಎಂಸಿ ನೀರು ಕೊಡಬೇಕು. ಇನ್ನೂ ಎ ಮತ್ತು ಬಿ ಎರಡೂ ಸ್ಕೀಮಗಳಲ್ಲಿ ನೀರು ಮಂಜೂರಾತಿ ಪಡೆಯದೆ ಇದ್ದ ಎನ್‌ಆರ್‌ಬಿಸಿಯ 9 ಎ ಕಾಲುವೆಗೆ ನೀರು ಕೊಟ್ಟಿರುವಾಗ ಮಾಸ್ಟರ್ ಪ್ಲಾನ್ ಸಮಿತಿ ಮಂಜೂರಾತಿ ಹೊಂದಿರುವ ನಂದವಾಡಿಗೆ ನೀರು ಇಲ್ಲ ಎಂದರೆ ಸಂಘ ಒಪ್ಪುವುದಿಲ್ಲವೆಂದು ವಾದಿಸಿದಾಗ ಇಂಜಿನಿಯರ್ ಮತ್ತು ಅಧಿಕಾರಿಗಳ ತಂಡಗಳು ಅದನ್ನು ಒಪ್ಪಿ ಸಂಘದ ವಾದವನ್ನು ಸರ್ಕಾರ ಗಮನಕ್ಕೆ ತರುವುದಾಗಿ ಹೇಳಿಹೋದವು.

ಸರ್ಕಾರದ ಬಣ್ಣ ಬಯಲು

ನಂತರ ಸಭೆ ಸೇರಿದ ತಂಡ ಈ ವಾದದ ಸರಣಿ ಮತ್ತು ರೈತರಲ್ಲಿ ಹರಡಿರುವ ಗೊಂದಲಗಳು ಹಾಗೂ 03.01.08ರಂದು ಮುಖ್ಯಮಂತ್ರಿ ಯಡಿಯೂರಪ್ಪ ಲಿಂಗಸೂಗೂರಿನಲ್ಲಾದ ರೈತರ ಬೃಹತ್ ಸಮಾವೇಶದಲ್ಲಿ ನಂದವಾಡಗಿ ಯೋಜನೆ ಜಾರಿಗೆ ನೀಡಿದ್ದ ಆಶ್ವಾಸನೆ ಮತ್ತು ಮೇ ತಿಂಗಳಲ್ಲಿ ಚುನಾವಣೆಯಲ್ಲಿ ಮಸ್ಕಿಯಲ್ಲಿ ಮತದಾರರಿಗೆ ನೀಡಿದ್ದ ಭರವಸೆಗಳ ಬಣ್ಣ ಬಯಲಿಗಿಡುವ ಕುರಿತು ಚರ್ಚಿಸಿ 'ಜನ ಜಾಗೃತಿ ಜಾಥಾ' ನಡೆಸಲು ತೀರ್ಮಾನಿಸಿತು. ಪರಿಣಾಮವಾಗಿ 07.08.2008ರಿಂದ ಜಾಥಾ ಆರಂಭವಾಯಿತು. ಪ್ರತಿಹಳ್ಳಿಗಳಲ್ಲಿ ಅಪಾರ ಜನಸ್ತೋಮ ನೆರೆಯುತ್ತಿರುವುದು ಸಂಘದ ವಾದವನ್ನು ಒಪ್ಪುತ್ತಿರುವುದು ಬಿಜೆಪಿ ಸರ್ಕಾರಕ್ಕೆ, ಶಾಸಕರಿಗೆ, ಮುಖ್ಯಮಂತ್ರಿಗೆ ಜನ ನೇರವಾಗಿ ತೆಗಳುತ್ತಿರುವುದು ಬಿಜೆಪಿಗೆ ನುಂಗಲಾರದ ತುತ್ತಾಗಿದೆ. ಹೀಗಾಗಿ 11.08.2008ರಂದು ಜನಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿ, ಯುವಜನ ಸಚಿವ ಶಿವನಗೌಡ ನಾಯಕರ ಜೊತೆ ಶಾಸಕರುಗಳ ದಂಡು ಮುಷ್ಕರ ಶಿಬಿರಕ್ಕೆ ಆಗಮಿಸಿತು. ಭರವಸೆಗಳ ಮಹಾಪೂರ ಹರಿಸಲಾಯಿತು. ಈ ಚರ್ಚೆಯಲ್ಲಿ ಸಹ ಮಾರುತಿ ಮಾನ್ಪಡೆ ನೇತೃತ್ವ ವಹಿಸಿದ್ದರು. ಕಾಂ: ಮಲ್ಲಯ್ಯ ಜಾಲಹಳ್ಳಿ ಮನವಿ ಪತ್ರ ಓದಿ ಸಲ್ಲಿಸಿದರು. ಚರ್ಚೆಯ ನಂತರ ಸಂಘ ಸಚಿವರ ಮನವಿಯನ್ನು ತಿರಸ್ಕರಿಸಿತು. ಆದೇಶ ಕೈಗೆ ಬರದೆ ಹೋರಾಟದಿಂದ ಹಿಂದೆ ಸರಿಯುವುದು ಅಸಾಧ್ಯ ಎಂದಿತು. ಸಚಿವರ ಮತ್ತು ಶಾಸಕರ ದಂಡು ಛರಿಗ್ಯೆಲಿ ಮರಳಿತು.

ಮುಂದುವರಿದ ಹೋರಾಟ

3 ವಾರದಿಂದ ಧರಣಿ ಮುನ್ನಡೆದಿದೆ. ಪ್ರತಿದಿನ ಒಂದೊಂದು ಹಳ್ಳಿಯ 30-40 ಜನ ರೈತರು ಬರುತ್ತಾರೆ. ಧರಣಿ ಕೂರುತ್ತಾರೆ. 'ಜನ ಜಾಗೃತಿ ಜಾಥಾ' ಒಂದು ವಾರದಿಂದ ಹಳ್ಳಿಗಳಲ್ಲಿ ಸಂಚರಿಸುತ್ತಲೇ ಇದೆ. ಪ್ರತಿ ಹಳ್ಳಿಯಲ್ಲಿ ನೂರಾರು ರೈತರು ಸೇರುತ್ತಾರೆ. ಜಾಥಾದ ನೇತೃತ್ವದಲ್ಲಿರುವ ಕಾಂ:ಮಲ್ಲಯ್ಯ ಜಾಲಹಳ್ಳಿ ಮತ್ತು ಕಾಂ:ಹನುಮಗೌಡ ಮದರಕಲ್‌ರವರ ಭಾಷಣಗಳನ್ನು ಕೇಳುತ್ತಾರೆ. ಸಂಘದ ವಾದ ಸರಣಿ ಒಪ್ಪುತ್ತಾರೆ. ಪ್ರತಿಹಳ್ಳಿಯಲ್ಲಿ ಸಭೆಯ ಕೊನೆಯಲ್ಲಿ ಸಮಿತಿ ರಚಿಸಿಕೊಳ್ಳುತ್ತಿದ್ದಾರೆ. ಪ್ರಾಂತ ರೈತ ಸಂಘದ ಘಟಕಗಳು ಪ್ರತಿ ದಿನ ಐದಾರು ಹಳ್ಳಿಗಳಲ್ಲಿ ಹುಟ್ಟಿಕೊಳ್ಳುತ್ತಿವೆ. ಆಡಳಿತದಲ್ಲಿರುವ ಬಿಜೆಪಿಗೆ ಗಾಬರಿಯಾಗಿದೆ. ಕಾರ್ಯಕರ್ತರನ್ನು ಬಿಟ್ಟು ಸಭೆ ಕೆಡಿಸಲು ಯತ್ನಿಸುತ್ತಿದ್ದಾರೆ. ಆದರೆ ಹೋರಾಟಕ್ಕೆ ಸಿದ್ಧವಿರುವ ರೈತರು ಅವರನ್ನು ನಿಬಾಯಿಸುತ್ತಿದ್ದಾರೆ. ಒಟ್ಟಾರೆ ತಹಶೀಲ್ದಾರ್ ಕಛೇರಿ ಮುಂದಿರುವ ಮುಷ್ಕರ ಶಿಬಿರ ಮತ್ತು 'ಜನಜಾಗೃತಿ ಜಾಥಾ' ಬಿಜೆಪಿ ಶಾಸಕರ ನಿದ್ದೆಗೆಡಿಸಿದೆ. ಬಿಜೆಪಿ ಆಡಳಿತದ ರೈತ ವಿರೋಧಿ ನೀತಿಯ ಬಣ್ಣ ಬಯಲಾಗುತ್ತಿರುವುದು ಅವರಿಗೆ ನುಂಗಲಾರದ ತುತ್ತಾಗಿದೆ. ಆದರೆ ಎಚ್ಚೆತ್ತ ರೈತರು ಮುಷ್ಕರ ಶಿಬಿರಕ್ಕೆ ಬರುತ್ತಲೇ ಇದ್ದಾರೆ. 'ಜನ ಜಾಗೃತಿ ಜಾಥಾ' ಬರುವಿಕೆಗಾಗಿ ಹಳ್ಳಿಗಳಲ್ಲಿ ಕಾಯುತ್ತಲೇ ಇದ್ದಾರೆ.

ಮಂಗಳೂರು : ನ್ಯಾಯಕ್ಕಾಗಿ ನಿಲ್ಲದ ಹೋರಾಟ

ಸುನೀಲ್ ಕುಮಾರ್ ಬಜಾಲ್

ಕುಡಿಯುವ ನೀರಿಗಾಗಿ ಪರಿತಪಿಸುವ ಸ್ಥಿತಿ ಮಂಗಳೂರಿನ ಜನತೆಗೆ ಹೊಸದೇನಲ್ಲ. ಹೆಚ್ಚಿನ ವಾರ್ಡ್‌ಗಳಲ್ಲಿ 2 ರಿಂದ 3 ದಿನಕ್ಕೊಮ್ಮೆ ನಲ್ಲಿಯಲ್ಲಿ ನೀರು ಬಂದರೆ ವಿಶೇಷ, ಕುಡಿಯುವ ನೀರಿಗಾಗಿ ಕೋಟಿ, ಕೋಟಿ ರೂ.ಯಷ್ಟು ಹಣ ಬಿಡುಗಡೆಗೊಂಡರೂ ಸಮಸ್ಯೆಗಳು ಮಾತ್ರ ಪರಿಹಾರವಾಗಿಲ್ಲ. 500 ರೂ.ಗೆ ಮನೆ ಬಾಗಿಲಿಗೆ ನಲ್ಲಿ ಸಂಪರ್ಕ ಜೋಡಣೆ ಎಂದು ಜಲಭಾಗ್ಯ ಯೋಜನೆಯಡಿಯಲ್ಲಿ ಜನತೆಗೆ ಭಾರೀ ಮೋಸಗೈಯ್ಯಲಾಯಿತು. ಇದರ ಜೊತೆಗೆ ಜೊತೆಗೆ ಸಾರ್ವಜನಿಕ ನಲ್ಲಿ ನೀರಿನ ಸಂಪರ್ಕ ಕಡಿಯಲಾಯಿತು. ಇದರಿಂದಾಗಿ ಬಡ ಜನತೆ ಭಾರೀ ಸಮಸ್ಯೆಯನ್ನು ಎದುರಿಸಿದರು. 5 ವರ್ಷಗಳ ಹಿಂದೆ ಪ್ರಾರಂಭಗೊಂಡ ಈ ಜನವಿರೋಧಿ ಕೆಲಸಕ್ಕೆ ಡಿವೈಎಫ್ಐ ಅಂದೇ ಪ್ರತಿರೋಧ ಒಡ್ಡಿತು. ಮಾತ್ರವಲ್ಲದೆ ಕೊಂಚಾಡಿ, ಶಕ್ತಿನಗರ, ಉರ್ವಾಸ್ಟೋರುಗಳಲ್ಲಿ ಸಾರ್ವಜನಿಕ ನಲ್ಲಿ ನೀರಿನ ಸಂಪರ್ಕ ಕಡಿಯಲು ಬಂದವರನ್ನು ಓಡಿಸಲಾಯಿತು. ಹೀಗೆ ಸಾರ್ವಜನಿಕ ನಲ್ಲಿ ಸಂಪರ್ಕವನ್ನು ಬಳಸಿಕೊಳ್ಳಲು ಸಾಧ್ಯವಾಯಿತು.

ಗುತ್ತಿಗೆ, ಅವ್ಯಹಾರ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 23 ವರ್ಷಗಳಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್‌ನ ದುರಾಡಳಿತ, ವ್ಯಾಪಕ ಭ್ರಷ್ಟಾಚಾರದಿಂದ ಕಂಗೆಟ್ಟ ಜನತೆಗೆ ಇಂದು ಬಿಜೆಪಿ ಮಾಡಿದ್ದಾದರೂ ಏನು....? ಆಯುಕ್ತರ ನಕಲಿ ಸಹಿ ಬಳಸಿ ಕೋಟ್ಯಾಂತರ ಹಣವನ್ನು ಗುಳುಂ ಮಾಡಿದ ಪ್ರಕರಣದಲ್ಲಿ ಅಧಿಕಾರಿಗಳು, ಕೆಲವು ಬಿಜೆಪಿ ಕಾಂಗ್ರೆಸ್‌ನ ಜನಪ್ರತಿನಿಧಿಗಳು ಶಾಮೀಲಾಗಿದ್ದು ಅದನ್ನು ಮುಚ್ಚಿಹಾಕಲು ಆಡಳಿತದಲ್ಲಿರುವ ಬಿಜೆಪಿ ಷಡ್ಯಂತ್ರ ಹೂಡಿರುವುದು ಜಗಜ್ಜಾಹೀರಾಗಿದೆ. ಮತ್ತೊಂದೆಡೆ ಕುಡಿಯುವ ನೀರಿನ ದರವನ್ನು ವಿಪರೀತವಾಗಿ ಏರಿಸಲಾಗಿದೆ. ಬಿಲ್ ರೀಡಿಂಗ್ ಗುತ್ತಿಗೆಯನ್ನು ಖಾಸಗೀ ಕಂಪನಿಗಳಿಗೆ ನೀಡಲಾಗಿದೆ. ಬಿಲ್ ರೀಡಿಂಗ್ ಗುತ್ತಿಗೆ ನೀಡುವುದರಲ್ಲಿಯೂ


ಯಶವಂತ ಮರೋಳಿಯವನ್ನು ಬಂಧಿಸುತ್ತಿರುವುದು

ಭ್ರಷ್ಟಾಚಾರ ನಡೆಸಿರುವ ಅಧಿಕಾರಿಗಳು ಬಿಲ್‌ನ ಮೇಲೆ 3.60 ರೂ. ದರ ನಮೂದಿಸಿದ ಬಿಸಿಐಟಿಎಸ್ ಕಂಪನಿಯ ಬದಲಿಗೆ 6.70 ರೂ. ದರ ನಮೂದಿಸಿದ ಪ್ರಸನ್ನ ಟೆಕ್ನೊಲಜೀಸ್ ಕಂಪನಿಗೆ ಗುತ್ತಿಗೆ ನೀಡಿರುವುದು ದೊಡ್ಡ ಅವ್ಯವಹಾರ ನಡೆದಿರುವುದಕ್ಕೆ ಸಾಕ್ಷಿಯಾಗಿದೆ.

ಮನಸೋ ಇಚ್ಛೆ ಏರಿಕೆ

'2007 ಸೆಪ್ಟೆಂಬರ್‌ನಿಂದ 2008 ಜೂನ್‌ವರೆಗಿನ 10 ತಿಂಗಳ ಕಾಲಾವಧಿಯಲ್ಲಿದ್ದ ನೀರಿನ ದರವನ್ನು ಜಿಲ್ಲಾಧಿಕಾರಿಗಳೇ ಏರಿಕೆ ಮಾಡಿದ್ದೇ ಹೊರತು ನಾವಲ್ಲ' ಎಂದು ಬಿಜೆಪಿಯವರ ವಾದ. ಈ ಸಂದರ್ಭದಲ್ಲಿ ಶೇ.400ರಷ್ಟು ನೀರಿನ ದರ ಏರಿಕೆಯಾಗಿತ್ತು. 200 ರಿಂದ 300 ರೂ.ನಷ್ಟು ನೀರಿನ ಬಿಲ್ ಕಟ್ಟುತ್ತಿದ್ದ ಗ್ರಾಹಕರಿಗೆ 3000, 8000, 12,000, 20,000 ಕ್ಕೂ ಮಿಕ್ಕಿ ನೀರಿನ ಬಿಲ್ ಬರತೊಡಗಿತು. ಇದು ನಗರದೆಲ್ಲೆಡೆ ಭಾರೀ ಆಕ್ರೋಶಕ್ಕೆ ಕಾರಣವಾಯಿತು. ಇದನ್ನು ಮನಗಂಡ ಡಿವೈಎಫ್ಐ ಮೇ ತಿಂಗಳಿನಿಂದಲೇ ನೀರಿನ ಬಿಲ್ ಪಾವತಿಸಬೇಡಿ ಎಂಬ 'ಅಸಹಕಾರ ಚಳುವಳಿ'ಯನ್ನು ಪ್ರಾರಂಭಿಸಿತು. ಇದಕ್ಕೆ ನಗರಾದ್ಯಂತ ಜನತೆ ಪಕ್ಷಬೇಧ ಮರೆತು ಸಹಕರಿಸಿದರು. ಡಿವೈಎಫ್ಐ ನೊಂದಿಗೆ ಕೈಜೋಡಿಸಿದರು.

ಇಂದಿನವರೆಗೂ ಶೇ.90 ರಷ್ಟು ಜನತೆ ಬಿಲ್ ಪಾವತಿಸದಿರುವುದು ಹೋರಾಟಕ್ಕೆ ಬೆಂಬಲವನ್ನು ಸಾರುವಂತಿತ್ತು. ಜೂನ್ 16 ರಂದು ನಡೆದ ನಗರಪಾಲಿಕಾ ಸಭೆಯ ಸಂದರ್ಭದಲ್ಲಿ ಡಿವೈಎಫ್ಐ ಪ್ರತಿಭಟನೆಯನ್ನು ಆಯೋಜಿಸಿತ್ತು. ನಗರಪಾಲಿಕಾ ಸಭೆಯಲ್ಲಿ ಸಿಪಿಐ(ಎಂ)ನ ಪ್ರತಿನಿಧಿಯಾದ ಜಯಂತಿ ಬಿ.ಶೆಟ್ಟಿಯವರು ವಿಪರೀತವಾಗಿ ಏರಿಕೆಯಾದ ನೀರಿನ ದರಕ್ಕೆ ತೀವ್ರ ವಿರೋಧ ವ್ಯಕ್ತ ಪಡಿಸಿದರು. ಕಾಂಗ್ರೆಸ್ ನವರು ನಾಟಕೀಯವೆಂಬಂತೆ ಒಳಗೂ, ಹೊರಗೂ ಪ್ರತಿಭಟನೆ ನಡೆಸಿದರು. ಕೊನೆಗೂ ಆಡಳಿತ ಬಿಜೆಪಿ ನೀರಿನ ದರವನ್ನು ಪರಿಷ್ಕರಿಸುವುದಾಗಿ ಹೇಳಿಕೆ ನೀಡಿತು. ಇದನ್ನು ಆ ಕ್ಷಣದಲ್ಲೇ ಕಾಂಗ್ರೆಸ್ ಸ್ವಾಗತಿಸಿತು. ಆದರೆ ಸಿಪಿಐ(ಎಂ), ಡಿವೈಎಫ್ಐ ಇದನ್ನು ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕಿದಾಗ ಪರಿಷ್ಕರಿಸಿದ ನೀರಿನ ದರವು ಶೇ.100ರಷ್ಟು ಹೆಚ್ಚಳವಾಗಿತ್ತು. ಹೋರಾಟದ ಕಣದಲ್ಲಿ ಜನತೆ ಡಿವೈಎಫ್ಐ ಮತ್ತೆ ಹೋರಾಟದ ಕಣಕ್ಕೆ ಧುಮುಕಿತು. ನೀರಿನ ದರ ಇಳಿಕೆ ಮಾಡಲಾಗಿದೆ ಎಂದು ಬಿಜೆಪಿ ಎಷ್ಟೇ ಡಂಗುರ ಸಾರಿದರೂ ಪರಿಷ್ಕರಿಸಿದ ನೀರಿನ ದರವನ್ನು ಜನತೆ ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಹೋರಾಟದ ಭಾಗವಾಗಿ ಪೋಸ್ಟರ್ ಚಳುವಳಿ, ಮನೆ ಮನೆ ಪ್ರಚಾರ, ವಾಹನ ಪ್ರಚಾರ ಜಾಥಾಗಳು ಡಿವೈಎಫ್ಐ ನೇತೃತ್ವದಲ್ಲಿ ಯಶಸ್ವೀ ರೀತಿಯಲ್ಲಿ ಜರುಗಿದವು. ಹೋರಾಟವನ್ನು ನಿರ್ಣಾಯಕ ಹಂತಕ್ಕೆ ತಲುಪಿಸಲು ಸಿಪಿಐ(ಎಂ) ಕೂಡ ಹೋರಾಟದ ಪಥಕ್ಕೆ ಮುನ್ನುಗ್ಗಿತು. ಸಿಪಿಐ(ಎಂ), ಡಿವೈಎಫ್ಐ ಜಂಟಿಯಾಗಿ ಆಗಸ್ಟ್ 4 ರಂದು ಮನಪಾ ಕಚೇರಿಗೆ ಮುತ್ತಿಗೆ ಚಳುವಳಿಯನ್ನು ಹಮ್ಮಿಕೊಂಡಿತು. ಇದಕ್ಕೆ ಜನತೆಯಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಅದರ ಪರಿಣಾಮವೇ ಆಗಸ್ಟ್ 4 ರಂದು ನೂರಾರು ಸಂಖ್ಯೆಯಲ್ಲಿ ಮಹಿಳೆಯರು, ಮುದುಕರು, ಯುವಕರು ಪಾಲ್ಗೊಂಡರು. ಹೋರಾಟವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿಯವರು ಉದ್ಘಾಟಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಕಾರ್ಪೊರೇಟರ್ ಜಯಂತಿ ಶೆಟ್ಟಿ, ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಮಾನವತಾ ವೇದಿಕೆಯ ಅಧ್ಯಕ್ಷರಾದ ಯಶವಂತ ಮರೋಳಿ, ಮುಸ್ಲಿಂ ವರ್ತಕರ ಸಂಘದ ಆಲಿಹಸನ್ ಮುಂತಾ ದವರು ಮಾತನಾಡಿದರು. ಪ್ರತಿಭಟನೆ ಶಾಂತ ರೀತಿಯಲ್ಲೇ ನಡೆದಿತ್ತು. ಪೊಲೀಸ್ ಅಧಿಕಾರಿಗಳ ಮೂಲಕ ಮೇಯರ್ ಸ್ಥಳಕ್ಕೆ ಬಂದು ಜನತೆಗೆ ಸ್ಪಷ್ಟನೆ ನೀಡಬೇಕೆಂಬ ಬೇಡಿಕೆಗೆ ಪೊಲೀಸ್ ಅಧಿಕಾರಿಗಳು ಸಹಕರಿಸಿದ್ದರು. ಒಂದೂವರೆ ಗಂಟೆಯ ಬಳಿಕವೂ ಮೇಯರ್ ಬಾರದೇ ಇದ್ದಾಗ ಘೋಷಣೆಗಳು ಮುಗಿಲುಮುಟ್ಟಿತು. ಒಂದು ಕಡೆ ಪೊಲೀಸ್ ಅಧಿಕಾರಿಗಳು 10 ನಿಮಿಷದಲ್ಲಿ ಮೇಯರ್ ಬರುವುದಾಗಿ ತಿಳಿಸಿದ್ದರೂ. ಮತ್ತೊಂದೆಡೆ "ಹೋರಾಟ ನಡೆಯುವುದು ನನ್ನ ಗಮನಕ್ಕೆ ಬರಲೇ


ಸುನೀಲ್ ಕುಮಾರ್ ಬಜಾಲ್ ಮಾತನಾಡುತ್ತಿರುವುದು

ಇಲ್ಲ. ಮೇಯರ್ ಪ್ರತಿಭಟನಾ ಸ್ಥಳಕ್ಕೆ ಧಾವಿಸಿ ಮನವಿ ಸ್ವೀಕರಿಸುವ ಸಂಪ್ರದಾಯವಿಲ್ಲ. ಅಲ್ಲಿಗೆ ಹೋಗಿದ್ದರೆ ಹಲ್ಲೆ ನಡೆಸುವ ಸಂಭವವಿತ್ತು. ಇದು ಕಮ್ಯೂನಿಸ್ಟರ ಕೀಳುಮಟ್ಟದ ರಾಜಕೀಯ ಎಂದು ಎಡಬಿಡಂಗಿತನದ ಹೇಳಿಕೆಗಳನ್ನು ಮೇಯರ್ ಗಣೇಶ್ ಹೊಸಬೆಟ್ಟು ನೀಡುತ್ತಾ ಹೋದರು.

ಬಿಜೆಪಿ ಎಡಬಡಂಗಿತನ

ಒಂದು ಕಡೆ ಮೇಯರ್ ಕಳೆದ 10 ತಿಂಗಳ ನೀರಿನ ವಿಪರೀತ ಬಿಲ್‌ನ್ನು ಕಟ್ಟಬೇಕೆಂದು ಆದೇಶ ನೀಡಿದ್ದರೆ. ಇನ್ನೊಂದು ಕಡೆ ಬಿಜೆಪಿ ಕಾರ್ಪೊರೇಟರ್‌ಗಳ ಬಿಲ್‌ನ್ನು ಕಟ್ಟಬೇಡಿ ಎಂದು ತಮ್ಮ ವಾರ್ಡ್‌ನ ಜನತೆಯತ್ತ ಹೇಳುತ್ತಿರುವುದು ಬಿಜೆಪಿಯ ದ್ವಂದ್ವ ನೀತಿಗೆ ನಿದರ್ಶನವಾಗಿದೆ.

ದುರುದ್ದೇಶದ ಧಾಳಿ

ಈ ಎಲ್ಲಾ ಅಂಶವನ್ನು ಮುಂದಿಟ್ಟು ನಡೆದಿರುವ ಹೋರಾಟವನ್ನು ದಾರಿ ತಪ್ಪಿಸುವ ಉದ್ದೇಶದಿಂದಲೇ ಬಿಜೆಪಿಯ ಕಿಡಿಗೇಡಿಗಳು ಕಬ್ಬಿಣದ ಕುರ್ಚಿಯನ್ನು ಪೊಲೀಸ್ ಅಧಿಕಾರಿಗಳತ್ತ ಎಸೆದಿರುವುದು ಹಾಗೂ ಬಸ್ಸುಗಳಿಗೆ ಕಲ್ಲು ತೂರಾಟ ನಡೆಸಿರುವುದು ಎಲ್ಲಾ ರಾದ್ಧಾಂತಕ್ಕೆ ಕಾರಣವಾಯಿತು. ಮಹಿಳೆಯರು, ಮಕ್ಕಳು, ಮುದುಕರೆನ್ನದೆ ಎಲ್ಲರ ಮೇಲೂ ಪೊಲೀಸ್ ಲಾಠಿಗಳು ನರ್ತನಗೈದವು. ಲಾಠಿ ಚಾರ್ಜ್‌ನಿಂದಾಗಿ 27 ಮಂದಿ ಸರಕಾರಿ ಆಸ್ಪತ್ರೆಗೆ ದಾಖಲಾದರು. ಡಿವೈಎಫ್ಐ ಕಾರ್ಯಕರ್ತರಾದ ಡೊಲ್ಫಿ ಡಿಸೋಜ, ಇಮ್ತಿಯಾಜ್, ಸಂತೋಷ್, ದೀಪಕ್ ಬಜಾಲ್, ಸಿಐಟಿಯು ಕಾರ್ಯಕರ್ತರಾದ ದೆರೆಬೈಲ್ ಕೃಷ್ಣ, ಎಲ್.ಟಿ.ಸುವರ್ಣ, ಶಕ್ತಿನಗರದ ಬೇಬಿಯವರು ತೀವ್ರ ಗಾಯಗಳಾದ ಸಂಗಾತಿಗಳು. ನಗರದ ಹಿರಿಯ ವಕೀಲರೂ, ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಯಶವಂತ್ ಮರೋಳಿಯವರೊಂದಿಗೆ ಪೊಲೀಸರು ಅಸಭ್ಯವಾಗಿ ವರ್ತಿಸಿರುವುದು ಮಾತ್ರವಲ್ಲದೆ ಅವರನ್ನು ಬಂಧಿಸಿ ಜೈಲಿಗೆ ಅಟ್ಟಿರುವುದು ನಗರದ ಪ್ರಜ್ಞಾವಂತ ಜನತೆಯನ್ನು ಆಕ್ರೋಶಗೊಳಿಸಿದೆ. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಪ್ರಮೀಳಾರವರು ಹಲ್ಲೆಗೊಳಗಾದರು. ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಡಿವೈಎಫ್ಐ ನಗರ ಮುಖಂಡರಾದ ಯೋಗೀಶ್, ಎಸ್ಎಫ್ಐ ನಗರ


ಪುಟ 15 ಕ್ಕೆ

ನಿಲ್ಲದ ಪ್ರತಿಭಟನೆ, ದೌರ್ಜನ್ಯಕಾರರಿಗೆ ತಕ್ಕ ಉತ್ತರ

ನೀರಿನ ದರ ಏರಿಕೆ, ಖಾಸಗೀಕರಣವನ್ನು ವಿರೋಧಿಸಿ ಹಾಗೂ ಪೊಲೀಸ್ ದೌರ್ಜನವನ್ನು ಖಂಡಿಸಿ ಬೃಹತ್ ಹೋರಾಟವನ್ನು ಮಾಡಬೇಕೆಂಬ ಹೊತ್ತಿಗೆ ಸಿಪಿಐ(ಎಂ) ಬಿಎಸ್‌ಪಿ, ಎಸ್.ಪಿ, ಜೆಡಿಎಸ್ ಪಕ್ಷಗಳಲ್ಲದೆ ಪಿಯುಸಿಎಲ್, ದಲಿತ ಸಂಘಟನೆಗಳು ಜತೆಗೂಡಿದವು. ಆಗಸ್ಟ್ 11 ರಂದು ಜಂಟಿ ಹೋರಾಟ ನಡೆಸುವ ತೀರ್ಮಾನವಾಯಿತು. ಹೋರಾಟಕ್ಕೆ ಹೆದರಿದ ಪೊಲೀಸ್ ಅಧಿಕಾರಿಗಳು ಮನಪಾ ಸುತ್ತ 500 ಮೀ ವ್ಯಾಪ್ತಿಯಲ್ಲಿ 144 ಸೆಕ್ಷನ್ ಹಾಕಿದರು. ಆದರೆ ಪ್ರತಿಭಟನೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯೆದುರು ನಡೆಸಲಾಯಿತು. 2ರಿಂದ 3 ದಿನಗಳಿಂದ ಸುರಿಯುತ್ತಿದ್ದ ಧಾರಾಕಾರ ಮಳೆ ಹಾಗೂ ಬಸ್ ಸಿಬ್ಬಂದಿಗಳ ಮೇಲೆ ನಡೆದ ಹಲ್ಲೆಗೆ ಪ್ರತಿಭಟನೆಯಾಗಿ, ಸರ್ವಿಸ್ ಬಸ್‌ಗಳ ಓಡಾಟ ಇಲ್ಲದಿದ್ದರೂ ಜಿಲ್ಲೆಯ ಮೂಲೆ ಮೂಲೆಗಳಿಂದ ಬೃಹತ್ ಸಂಖ್ಯೆಯಲ್ಲಿ ಜನತೆ ಆಗಮಿಸಿದ್ದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎಸ್.ನಾಗರಾಜ್‌ರವರು "ರಾಜ್ಯದ ಬಿಜೆಪಿ ಸರಕಾರವು ಲಾಠಿಚಾರ್ಜ್ ಮತ್ತು ಗೋಲಿಬಾರ್ ಸರಕಾರವಾಗಿ ಹೆಸರು ಪಡೆದಿದ್ದು, ಅಧಿಕಾರಕ್ಕೆ ಬಂದ ಬಳಿಕ ಹಲವು ಕಡೆಗಳಲ್ಲಿ ಲಾಠಿಚಾರ್ಜ್ ನಡೆದಿದೆ. ಪೊಲೀಸರು ಸಂಪೂರ್ಣ ಬಿಜೆಪಿ ಆಡಳಿತದ ನಿಯಂತ್ರಣದಲ್ಲಿದ್ದಾರೆ. ಪ್ರತಿಯೊಂದು ವಿಷಯಕ್ಕೂ ಸೆಕ್ಷನ್ ಹೇರುವುದಾದರೆ ಮುಂದೆ ಬಿಜೆಪಿ ಸರ್ಕಾರವನ್ನು ಸೆಕ್ಷನ್ 144 ಸರ್ಕಾರ ಎಂದು ಕರೆಯಬೇಕಾಗುತ್ತದೆ" ಎಂದು ಲೇವಡಿ ಮಾಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ, ಸಿಪಿಐ ಮುಖಂಡರಾದ ಬಿ.ಕೆ.ಕೃಷ್ಣಪ್ಪ, ಸಮಾಜವಾದಿ ಪಕ್ಷದ ಚಂಗಪ್ಪ, ಬಿಎಸ್‌ಪಿಯ ಗಿರೀಶ್ ರೈ, ಜೆಡಿಎಸ್‌ನ ಬಲರಾಜ್ ರೈ, ಪಿಯುಸಿಎಲ್‌ನ ಪಿ.ಬಿ.ಡೇಸಾ, ಮುಸ್ಲಿಂ ವರ್ತಕರ ಸಂಘದ ಆಲಿಹಸನ್, ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಮುಂತಾದವರು ಮಾತನಾಡಿದರು.

ಏರಿಸಿದ ನೀರಿನ ದರವನ್ನು ವಾಪಸ್ ಪಡೆಯುವವರೆಗೆ ನಿರಂತರ ಹೋರಾಟ ನಡೆಸಬೇಕೆಂಬ ತೀರ್ಮಾನದ ಮೇರೆಗೆ ಹೋರಾಟ ಮುಂದುವರಿಯುತ್ತಲೇ ಇದೆ.



ಎಡಪಕ್ಷಗಳ ಬೆಂಬಲದಿಂದ ಸ್ಪೀಕರ್ ಹುದ್ದೆ ಅಲಂಕರಿಸಿದ ಸೋಮನಾಥ ಚಟರ್ಜಿಯವರು, ಅಣು ಒಪ್ಪಂದ ದೇಶದ ಹಿತಕ್ಕೆ ಮಾರಕ ಎಂದು ಎಡಪಕ್ಷಗಳು ಯುಪಿಎಗೆ ನೀಡಿದ ಬೆಂಬಲ ವಾಪಸ್ ತೆಗೆದುಕೊಂಡಾಗ ಪಕ್ಷದ ಒಬ್ಬ ಎಂ.ಪಿ.ಯಾಗಿ, ಸದಸ್ಯರಾಗಿ ಏನು ಮಾಡಬೇಕಿತ್ತು?

ಜನತೆಯ ಹಿತವೋ ಅಥವಾ ಸ್ಪೀಕರ್ ಹುದ್ದೆಯೋ ?

ಯಾವುದೇ ವ್ಯಕ್ತಿ ಒಂದು ರಾಜಕೀಯ ಪಕ್ಷಕ್ಕೆ ಸೇರುವಾಗ ಆಯಾ ಪಕ್ಷದ ಸಂವಿಧಾನ, ಕಾರ್ಯಕ್ರಮ ನೀತಿಗಳಿಗೆ ಬದ್ಧನಾಗಿರುತ್ತೇನೆ ಎಂದು ಪ್ರತಿಜ್ಞೆ ಗೈಯುತ್ತಾನೆ. ಕೆಲವೊಂದು ರಾಜಕೀಯ ಪಕ್ಷಗಳಲ್ಲಿ 'ಸ್ವಂತ ಹಿತಕ್ಕಿಂತಲೂ ಪಕ್ಷದ ಹಿತ ಮುಖ್ಯ'ವೆಂದು ಪ್ರತಿಜ್ಞೆ ಗೈಯುತ್ತಾನೆ. ಇಂತಹ ಪ್ರತಿಜ್ಞೆ ಕೈಗೊಳ್ಳುವ ಸಂಪ್ರದಾಯಬಿಟ್ಟು ಕಡಿಮೆ ಎಲ್ಲ ರಾಜಕೀಯ ಪಕ್ಷಗಳಲ್ಲಿ ಇದ್ದರೂ ಇದನ್ನು ಗಂಭೀರವಾಗಿ ಜಾರಿಗೊಳಿಸುವುದು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತದಲ್ಲಿ ಅಚಲವಾದ ನಂಬಿಕೆಯುಳ್ಳ ಕಮ್ಯುನಿಸ್ಟ್ ಪಕ್ಷ ಮಾತ್ರ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಭಾರತದ ಸಂಸತ್ತಿಗಾಗಲೀ, ವಿಧಾನಸಭಾ, ವಿಧಾನಪರಿಷತ್ತಿಗಾಗಲೀ ಅಧ್ಯಕ್ಷ ಸಭಾಪತಿಯಾಗಿ ಆಯ್ಕೆಯಾಗುವವರು ಪಕ್ಷಾತೀತವಾಗಿ ನಡೆದುಕೊಳ್ಳಬೇಕು ಎಂಬುದು ನಿಸ್ಸಂಶಯ. ಆದರೆ ಆ ಹುದ್ದೆಗೆ ಆಯ್ಕೆಯಾಗುವ ಮೊದಲು ಅಥವಾ ನಂತರವಾಗಲೀ ಅವರು ರಾಜಕೀಯ ಪಕ್ಷದ ಕಾರ್ಯಕರ್ತರೇ ಆಗಿರುತ್ತಾರೆ. ಆ ಹುದ್ದೆಯಲ್ಲಿರುವಾಗಲೂ ರಾಜಕೀಯ ಪಕ್ಷದ ಕಾರ್ಯಕರ್ತರಾಗಿ ನೇರವಾಗಿ ಕಾಣಿಸಿಕೊಳ್ಳದಿದ್ದರೂ ಆಯಾ ಪಕ್ಷದ ಸದಸ್ಯರೇ ಆಗಿರುತ್ತಾರೆ.

ಉದಾರಹಣೆಗೆ ಸಿಪಿಐ(ಎಂ) ಪಕ್ಷದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾದ ಸೋಮನಾಥ ಚಟರ್ಜಿಯವರು ಸ್ಪೀಕರ್ ಹುದ್ದೆಯನ್ನು ಸ್ವೀಕರಿಸಿದ ನಂತರ ಸಿಪಿಐ(ಎಂ)ನ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಲ್ಲ. ಆದರೆ ಸಿಪಿಐ(ಎಂ)ನ ಸಂವಿಧಾನದ ಪ್ರಕಾರ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಅವರು ನವೀಕರಿಸಿಕೊಂಡಿದ್ದಾರೆ. ಆದ್ದರಿಂದ ಅವರು ಸಿಪಿಐ(ಎಂ)ನ ಸದಸ್ಯರೇ, ಒಂದು ವೇಳೆ ಸ್ಪೀಕರ್ ಅವಧಿ ಮುಗಿದ ನಂತರ ಪುನಃ ಸಂಸತ್ ಸದಸ್ಯನಾಗಿ ಆಯ್ಕೆಯಾಗಬೇಕೆಂದು ಬಯಸಿದಲ್ಲಿ ಅವರು ಸಿಪಿಐ(ಎಂ) ನಿಂದಲೇ ಸ್ಪರ್ಧಿಸುತ್ತಿದ್ದರು.

ಬ್ರಿಟನ್ನಿನ ಸಂಸತ್ ವ್ಯವಸ್ಥೆಯಲ್ಲಿ ಮಾತ್ರ ಒಮ್ಮೆ ಸ್ಪೀಕರ್ ಆಗಿ ಆಯ್ಕೆಯಾದವರು ಪುನಃ ಚುನಾವಣೆಗೆ ಸ್ಪರ್ಧಿಸಿದಲ್ಲಿ ಯಾವುದೇ ಪಕ್ಷದವರು ಅವರ ವಿರುದ್ಧ ಅಭ್ಯರ್ಥಿಯನ್ನು ಹಾಕುವುದಿಲ್ಲ. ಅಂದರೆ ಅವರು ಅವಿರೋಧವಾಗಿ ಆಯ್ಕೆಯಾಗುವ ಪದ್ಧತಿ ಇದೆ. ಆದರೆ ಈ ಪದ್ಧತಿ ಭಾರತದ ಸಂಸತ್ತಿಗೆ ಅನ್ವಯಿಸುವುದಿಲ್ಲ.

ಇಂದಿನ ಗೃಹಮಂತ್ರಿ ಶಿವರಾಜ್‌ಪಾಟೀಲ್‌ರು ಹಿಂದೆ ಲೋಕಸಭೆ ಅಧ್ಯಕ್ಷರಾಗಿದ್ದರು. ಅವಧಿ ಮುಗಿದ ಬಳಿಕ ಪುನಃ ಕಾಂಗ್ರೆಸ್ ಪಕ್ಷದ ಸಂಸತ್ ಸದಸ್ಯರೂ ಆಗಿ ಆಯ್ಕೆಗೊಂಡು ಇಂದು ಗೃಹ ಮಂತ್ರಿಗಳಾಗಿದ್ದಾರೆ. ಸಕ್ರಿಯ ರಾಜಕಾರಣಿ ಗಳಾಗಿದ್ದಾರೆ. ಆದ್ದರಿಂದ ಲೋಕಸಭಾ ಸ್ಪೀಕರ್ ಆಗಿರುವವರು ಸಾರ್ವಕಾಲಿಕ ಪಕ್ಷೇತರರು ಎಂಬುದು ಭಾರತದ ವ್ಯವಸ್ಥೆಗೆ ಸರಿ ಹೊಂದುವುದಿಲ್ಲ.

ಸೋಮನಾಥ ಚಟರ್ಜಿಯವರ ಕುರಿತಾಗಿ ದೇಶದಾದ್ಯಂತ ಚರ್ಚೆ ನಡೆಯಿತು, ನಡೆಯುತ್ತಿದೆ. 2004ರಲ್ಲಿ ಸೋಮನಾಥ ಚಟರ್ಜಿಯವರು ಲೋಕಸಭೆಯ ಅಧ್ಯಕ್ಷರಾಗ ಬೇಕೆಂದು ಕಾಂಗ್ರೆಸ್ ಪಕ್ಷದ ಬಯಕೆಯಾಗಿತ್ತು. ಅಂದು ಸಿಪಿಐ(ಎಂ) ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವನ್ನು ಬೆಂಬಲಿಸುತ್ತಿತ್ತು. ಆದ್ದರಿಂದ ಪಕ್ಷ ಲೋಕಸಭೆ ಅಧ್ಯಕ್ಷರಾಗಲು ಒಪ್ಪಿಗೆ ನೀಡಿತ್ತು.

ನಂತರದ ಬದಲಾದ ಸನ್ನಿವೇಶದಲ್ಲಿ ಭಾರತ-ಅಮೇರಿಕಾ ಅಣು ಒಪ್ಪಂದದ ಕುರಿತಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಹಾಗೂ ಕಾಂಗ್ರೆಸ್ ನೇತೃತ್ವದ ಯುಪಿಎ ನಡುವೆ ಭಿನ್ನಾಭಿಪ್ರಾಯ ತೀವ್ರಗೊಂಡು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳಲಾಯಿತು. ಸ್ವಾಭಾವಿಕ ವಾಗಿಯೇ ಸಿಪಿಐ(ಎಂ)ನಿಂದ ಆಯ್ಕೆಯಾದ ಸೋಮನಾಥ ಚಟರ್ಜಿಯವರು ತಾನಾಗಿಯೇ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿದ್ದಿತ್ತು. ಹಾಗೆ ರಾಜೀನಾಮೆ ನೀಡದೆ 40 ವರ್ಷಗಳಿಂದ ನಂಬಿಕೊಂಡು ಬಂದಿದ್ದ ಸಿದ್ಧಾಂತವನ್ನು, ಪಕ್ಷವನ್ನು ತಿರಸ್ಕರಿಸಿದ್ದಾರೆ. ಪಕ್ಷದ ಸಮಿತಿಯ ವಿರುದ್ಧ ರಾಜೀ ಮಾಡಿಕೊಂಡಿದ್ದಾರೆ. ಇದು ಸೋಮನಾಥ ಚಟರ್ಜಿಯವರ ತಪ್ಪು ಹೆಜ್ಜೆ.

ಏನೇ ಆಗಲೀ ಯಾವುದೇ ಒಂದು ಪಕ್ಷದಲ್ಲಿ ವ್ಯಕ್ತಿಯ ಕೊಡುಗೆಯನ್ನು ಸ್ಮರಿಸುವಾಗಲೇ ವ್ಯಕ್ತಿಗಿಂತ ಜನತೆಯ ಹಿತವೇ ಮುಖ್ಯ ಎಂಬುದನ್ನು ನೆನಪಿ ನಲ್ಲಿಡಬೇಕು. ಅದಕ್ಕಾಗಿ ಪಕ್ಷದ ಸದಸ್ಯ ಶಿಸ್ತು ಪಾಲನೆ ಅವಶ್ಯಕ. ಭಾರತದ ಸಂಸತ್ ವ್ಯವಸ್ಥೆಯಲ್ಲಿ ಅದು ಸ್ಪೀಕರ್ ಹುದ್ದೆಗೂ ಅನ್ವಯಿಸುತ್ತದೆ. ಹೀಗಾಗಿ ಅವರು ಪಕ್ಷದಿಂದ ಉಚ್ಚಾಟನೆ ಗೊಂಡರು.

– ಬಾಲಕೃಷ್ಣಶೆಟ್ಟಿ

ವಿದರ್ಭದ ಕಲಾವತಿ ಮತ್ತು ಶಶಿಕಲಾ ಹಾಗೂ ರಾಹುಲ ಗಾಂಧಿಯವರ ಅಮೋಘ ಭಾಷಣ

ಲೋಕಸಭೆಯಲ್ಲಿ ವಿಶ್ವಾಸಮತದ ಮೇಲಿನ ಚರ್ಚೆಯಲ್ಲಿ ರಾಹುಲ ಗಾಂಧಿಯವರು ಅದ್ಭುತವಾಗಿ ಮಾತನಾಡಿದರು ಎಂದು ದೇಶದ ಮಾಧ್ಯಮಗಳು ಹಾಡಿ ಹೊಗಳಿದವು. ಅವರು ತಮ್ಮ ಭಾಷಣದಲ್ಲಿ ವಿದರ್ಭ ಪ್ರದೇಶದ ಇಬ್ಬರು ರೈತ ವಿಧವೆಯರಾದ ಕಲಾವತಿ ಮತ್ತು ಶಶಿಕಲಾರವರ ಹೆಸರುಗಳನ್ನು ಪ್ರಸ್ತಾಪಿಸುತ್ತಾ ಇವರ ಮನೆ ಬೆಳಗಲು ಭಾರತ-ಅಮೆರಿಕಾ ಪರಮಾಣು ಒಪ್ಪಂದ ಅಗತ್ಯ ಎಂದರು. ತಕ್ಷಣವೇ ಸಿಎನ್‌ಎನ್-ಐಬಿಎನ್ ಕಲಾವತಿಯನ್ನು 'ಪರಮಾಣು ಒಪ್ಪಂದದಿಂದ ಸಬಲೀಕರಿಸಿ' ಎಂದು ಹೇಳಿತು. ಇಕನಾಮಿಕ್ ಟೈಮ್ಸ್ ಪತ್ರಿಕೆ 'ಗ್ರಾಮೀಣ ಭಾರತದ ಲಕ್ಷಾಂತರ ಕಲಾವತಿಯರು ಸಾಮಾಜಿಕ-ಆರ್ಥಿಕ ಉದ್ಧಾರದ ಹೊಸ ರಾಜಕೀಯದ ಭಾಗವಾಗಬೇಕು' ಎಂದಿತು.

ಒಂದು ವರ್ಷದ ಹಿಂದೆ, ಮೇ24, 2007ರ ಹಿಂದೂ ಪತ್ರಿಕೆಯಲ್ಲಿ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಕಲಾವತಿ ಬಂಡುರ್ಕರ್ ಬಗ್ಗೆ ಬರೆದಿದ್ದರು. ಆಕೆ ಈಗ ರಾಹುಲ್ ಗಾಂಧಿಯವರು ಪ್ರಸ್ತಾಪಿಸಿರುವ ಕಲಾವತಿಯೇ. ಆದರೆ ಆಗ ಇದೇ ಮಾಧ್ಯಮಗಳ ಸಂಪಾದಕರುಗಳ ಗಮನಕ್ಕೆ ಇದು ಬರಲೇ ಇಲ್ಲ. ಏಕೆಂದರೆ ಸಾಯಿನಾಥ್ ಬರೆದದ್ದು ಭಾರತದ ಕೃಷಿಕೂಲಿಕಾರರ ಶೋಚನೀಯ ಸ್ಥಿತಿಯ ಸಂದರ್ಭದಲ್ಲಿ. ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದು ಭಾರತ-ಅಮೆರಿಕಾ ಪರಮಾಣು ಒಪ್ಪಂದದ ಸಂದರ್ಭದಲ್ಲಿ.

ಇರಲಿ, ರಾಹುಲ್ ಗಾಂಧಿ ತನ್ನ ಭಾಷಣದಲ್ಲಿ ವಿದ್ಯುತ್ ಭದ್ರತೆಗೂ ಬಡತನಕ್ಕೂ ನೇರವಾದ ಸಂಬಂಧವಿದೆ ಎನ್ನುತ್ತಾ ಅವರು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ರೈತರ ಆತ್ಮಹತ್ಯೆಗಳ ಮೂಲಕ ದೇಶದ ಗಮನ ಸೆಳೆದ ವಿದರ್ಭ ಪ್ರದೇಶದಲ್ಲಿ ತಾನು ಪ್ರವಾಸ ಮಾಡಿದಾಗ ಭೇಟಿಯಾದ ಈ ಇಬ್ಬರಿಂದ ತಾನು 'ಕಲಿತ ಪಾಠ'ವನ್ನು ಒಪ್ಪಿಸಿದರು. ಅವರು ವಿದ್ಯುತ್ ಅಭದ್ರತೆಯಿಂದಾಗಿ ಬಡವರಾಗಿದ್ದರು ಎಂದರಂತೆ. ವಿದ್ಯುತ್ ಇದ್ದಿದ್ದರೆ ಅವರ ಮಕ್ಕಳೂ ಶಿಕ್ಷಣ ಪಡೆದು ಡಾಕ್ಟರುಗಳು, ಇಂಜಿನಿಯರುಗಳು ಇತ್ಯಾದಿ ಆಗುತ್ತಿದ್ದರಂತೆ.

ಇತಿಹಾಸದಿಂದ ಪಾಠ ಕಲಿಯುವುದು ಯಾವಾಗ?

ನಿಜವಾಗಿಯೂ ಈ ಒಪ್ಪಂದ ವಿದ್ಯುತ್ ಭದ್ರತೆಯನ್ನು, ಇಂಧನ ಭದ್ರತೆಯನ್ನಾದರೂ ಒದಗಿಸುತ್ತದೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಈಗಾಗಲೇ ಹಿಂದೆ ಪರಿಶೀಲಿ'ಸಿದ್ದೇವೆ. ಈ ಸಂಬಂಧವಾಗಿ ಎನ್ರೋನ್ ಅನುಭವವನ್ನೂ ನೆನಪಿಸಿಕೊಂಡಿದ್ದೇವೆ. ಇದೇ ರೀತಿ ಆಗ ವಿದ್ಯುತ್ ಅಭಾವ ನೀಗಿಸಲು ಎನ್ರೋನ್ ಪರಿಹಾರ ಎಂದು ನಮಗೆ ಹೇಳಲಾಯಿತು. ಆದರೆ ಈಗ ಮುಂಬೈ ಮಹಾನಗರದ ಹೊರಗೆ ಮಹಾರಾಷ್ಟ್ರ ಭಾರೀ ವಿದ್ಯುತ್ ಕ್ಷಾಮವನ್ನು ಅನುಭವಿಸುತ್ತಿರಲು ಮಹಾರಾಷ್ಟ್ರ ವಿದ್ಯುತ್ ಮಂಡಳಿಯನ್ನೆ ಮುಳುಗಿಸಿದ ಎನ್ರೋನ್ ದುರಂತ ಕಾರಣ ಎಂದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಕಲಾವತಿ ಮತ್ತು ಶಶಿಕಲಾರವರ ಮನೆಗಳಲ್ಲಿ ದೀಪಗಳು ಆರಿಹೋಗಲು ತಮ್ಮ ಕಾಂಗ್ರೆಸ್ ಸರಕಾರದ ಎನ್ರೋನ್ ಹಗರಣವೇ, ಜತೆಗೆ ಅದನ್ನು ಮುಂದುವರೆಸಿದ ಬಿಜೆಪಿ-ಶಿವಸೇನಾ ಸರಕಾರದ ನೀತಿಗಳೇ ಕಾರಣ ಎಂಬ ಇತಿಹಾಸದ ಪಾಠವೂ ರಾಹುಲ್ ಗಾಂಧಿಯವರಿಗೆ ಗೊತ್ತಿರಬಹುದೇ?.

ಕಲಾವತಿ ಮತ್ತು ಶಶಿಕಲಾರವರ ಕಥೆ ಕೇವಲ ವಿದ್ಯುತ್ತಿಗೇ ಸಂಬಂಧ ಪಟ್ಟದಲ್ಲ ಎಂಬುದನ್ನೂ ಗಮನಿಸಬೇಕು. ಕಲಾವತಿಯ ಗಂಡ, ಪರಶುರಾಂ ಬಂಡುರ್ಕರ್ ಆತ್ಮಹತ್ಯೆ ಮಾಡಿಕೊಂಡದ್ದು ಈ ಪ್ರದೇಶವನ್ನು ಆವರಿಸಿದ ಹತ್ತಿ ಆರ್ಥಿಕದ ಬಿಕ್ಕಟ್ಟಿನಿಂದ. ಈ ಬಿಕ್ಕಟ್ಟಿಗೆ ಕಾರಣ ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರಗಳು ಅನುಸರಿಸಿದ ನವ-ಉದಾರವಾದೀ ನೀತಿಗಳು ಮತ್ತು ಅದರ ಭಾಗವಾಗಿ ಬಂದ ಡಂಕೆಲ್ ಒಪ್ಪಂದದ ಜಾರಿ. ನಿರ್ದಿಷ್ಟವಾಗಿ, ಮಹಾರಾಷ್ಟ್ರದ ಕಾಂಗ್ರೆಸ್ ಸರಕಾರ ಹತ್ತಿ ಸಂಗ್ರಹ ಯೋಜನೆಯನ್ನು ಕ್ರಮೇಣ ದುರ್ಬಲಗೊಳಿಸಿದ್ದು, ಕೇಂದ್ರದ ಕಾಂಗ್ರೆಸ್ ಮತ್ತು ಎನ್‌ಡಿಎ ಸರಕಾರಗಳು ಡಬ್ಲ್ಯು.ಟಿ.ಒ. ಒಪ್ಪಂದದ ಜಾರಿಯ ಭಾಗವಾಗಿ ಹತ್ತಿಯ ಮೇಲೆ ಆಮದು ಸುಂಕಗಳನ್ನು ಬಹಳಷ್ಟು ಇಳಿಸಿ, ಹತ್ತಿಯ ಅಂದಿನ ಪ್ರಮಾಣದ ಮೇಲಿದ್ದ ಮಿತಿಯನ್ನು ತೆಗೆದುಹಾಕಿ ಈ ರೈತರನ್ನು ಪಾಶ್ಚಿಮಾತ್ಯ ದೇಶಗಳ ಸಬ್ಸಿಡಿ ಪಡೆದ ಹತ್ತಿಯೊಂದಿಗೆ ಅಸಮಾನ ಸ್ಪರ್ಧೆಗೆ ಒಡ್ಡಿದ್ದು, ಇನ್ನೊಂದೆಡೆಯಲ್ಲಿ ಅವರಿಗೆ ಕೊಡುತ್ತಿದ್ದ ಸಬ್ಸಿಡಿಗಳನ್ನು ಕಡಿತ ಮಾಡಿದ್ದು ರೈತರು ಹತಾಶರಾಗಿ ಆತ್ಮಹತ್ಯೆಗಳಿಗೆ ಇಳಿಯುವಂತೆ ಮಾಡಿದವು ಎಂಬುದೀಗ ಅಧ್ಯಯನಗಳಿಂದ ಸ್ಪಷ್ಟವಾಗಿದೆ.

ಪಾಪಗಳನ್ನು ಮರೆಮಾಚಲು?

ವಾಸ್ತವವಾಗಿ ರಾಹುಲ್ ಗಾಂಧಿಯವರ ಈ ಅಮೋಘ ಭಾಷಣ ನವ-ಉದಾರವಾದಿಗಳ ಈ ಪಾಪಗಳನ್ನು ಮರೆಮಾಚಲಿಕ್ಕಾಗಿಯಿರಬಹುದೇ ಎಂಬ ಅನುಮಾನ ಬರದೇ ಇರದು?

ಈ ಪರಮಾಣು ಒಪ್ಪಂದ ಅವರ ಮನೆಗಳನ್ನು ಸದ್ಯಕ್ಕಂತೂ ಬೆಳಗುವುದಿಲ್ಲ ಮಾತ್ರವಲ್ಲ, ನಾವು ಈಗಾಗಲೇ ನೋಡಿರುವಂತೆ, ಈ ಒಪ್ಪಂದದ ಭಾಗವಾಗಿ ಬಂದ ಕೃಷಿ ಜ್ಞಾನ ಮುತುವರ್ಜಿ (Agricultural Knowledge Initiative) ಮೂಲಕ ಈ ರೈತ ಮಹಿಳೆಯರ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸುವ ಭೀತಿಯೇ ಅಧಿಕವಾಗಿದೆ.



ಕಲಾವತಿ ಮತ್ತು ಕುಟುಂಬ

ಇನ್ನೂ ಒಂದು ಸಂಗತಿ ನಿಮಗೆ ತಿಳಿದಿರಬಹುದು. ಕಳೆದ ವರ್ಷ ಇದೇ ಪ್ರಧಾನ ಮಂತ್ರಿಗಳು ವಿದರ್ಭ ಪರಿಹಾರ ಪ್ಯಾಕೇಜ್ ಪ್ರಕಟಿಸಿದರು. ಆದರೆ ಈ ಪ್ಯಾಕೇಜ್ ಜಾರಿಯಾಯಿತೇ? ಮಹಾರಾಷ್ಟ್ರದ ಮಹಾ ಲೆಕ್ಕ ಪರಿಶೋಧಕರ(ಸಿಎಜಿ) ವರದಿ ಇದೊಂದು ಪ್ರಮುಖ ವಿಫಲತೆ ಎಂದು ಹೇಳಿದೆ!

ಕಾಂಗ್ರೆಸ್‌ನ ಆರ್ಥಿಕ ಸುಧಾರಣೆಗಳು ಭಾರತದ ಕೃಷಿಗೆ ಎಂತಹ ಅನಾಹುತ ತಂದಿವೆ, ಆಮೂಲಕ ಕಲಾವತಿ, ಶಶಿಕಲಾರಂತವರ ಬದುಕನ್ನು ಎಷ್ಟೊಂದು ದುರ್ಭರಗೊಳಿಸಿವೆ ಎಂಬ ಬಗ್ಗೆ ತುಸುವಾದರೂ ಕಾಳಜಿಯನ್ನು ಈ ಅಮೋಘ ಭಾಷಣದಲ್ಲಿ ನಿರೀಕ್ಷಿಸುವಂತಿರಲಿಲ್ಲ.

ಆಗಸ್ಟ್ 20ರ ಮಹಾಸಮರಕ್ಕೆ ದುಡಿಯುವ ಜನಗಳ ಭರದ ಸಿದ್ಧತೆ

ಇದು ಜಾಗತೀಕರಣದ ವಿರುದ್ಧ 12ನೇ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

ಜಾಗತೀಕರಣದ ನೀತಿಗಳ ವಿರುದ್ಧ ಭಾರತದಲ್ಲಿ ಒಂದು ಐಕ್ಯ ಆಂದೋಲನ ಮೂಡಿ ಬಂದಿದ್ದು ಇದುವರೆಗೆ ಹನ್ನೊಂದು ಸಾರ್ವತ್ರಿಕ ಮುಷ್ಕರಗಳನ್ನು ಸಂಘಟಿಸಲಾಗಿದೆ. ಈ ಎಲ್ಲಾ ಮುಷ್ಕರಗಳಲ್ಲಿ ಕಾರ್ಮಿಕ ವರ್ಗದ ತಕ್ಷಣದ ಆರ್ಥಿಕ ಬೇಡಿಕೆಗಳಿಗಿಂತ ಹೆಚ್ಚಾಗಿ ದೇಶದ ದುಡಿಯುವ ಜನಗಳ ಸಾರ್ವತ್ರಿಕ ಬೇಡಿಕೆಗಳೇ ಪ್ರಾಧಾನ್ಯತೆ ಪಡೆಯುತ್ತವೆ ಎಂಬುದು ಗಮನಾರ್ಹ. ನೀತಿ-ಧೋರಣೆಗಳ ಪ್ರಶ್ನೆಗಳ ಮೇಲೆ ರಾಷ್ಟ್ರವ್ಯಾಪಿ ಹೋರಾಟಗಳನ್ನು ನಡೆಸಲು ಸಿದ್ಧವಾಗುತ್ತಿರುವಂತಹ ಒಂದು ಪ್ರಜ್ಞೆ ದೇಶದ ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿರುವುದನ್ನು ಇದು ತೋರಿಸುತ್ತದೆ.


ಕಳೆದ ಜುಲೈ 5ರಿಂದ ಕರ್ನಾಟಕದ 29 ಜಿಲ್ಲೆಗಳಲ್ಲಿ, 150ಕ್ಕೂ ಹೆಚ್ಚು ತಾಲೂಕುಗಳಲ್ಲಿ ಕಾರ್ಮಿಕರ ಪ್ರತಿಭಟನೆಗಳು ನಡೆಯುತ್ತಿವೆ. ಅಗಸ್ಟ್ 20 ರಂದು ಈ ಪ್ರತಿಭಟನೆಗಳು ತಾರಕಕ್ಕೇರಲಿವೆ. ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ನೀಡಿದ ಕರೆಯ ಮೇರೆಗೆ ಅಂದು ದೇಶದ ಎಲ್ಲ ಕಡೆಗಳಂತೆ ರಾಜ್ಯದಲ್ಲೂ ಸಾರ್ವಜನಿಕ ವಲಯದ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು, ಬ್ಯಾಂಕುಗಳು, ವಿಮಾವಲಯ, ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು ಈ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ. ಹಲವು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ, ಬೆಂಗಳೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಇದು ಹರತಾಳದ ಸ್ವರೂಪವನ್ನೂ ಪಡೆಯಲಿದೆ.

ದೇಶದಲ್ಲಿ ನವ-ಉದಾರವಾದಿ ಆರ್ಥಿಕ ನೀತಿಗಳು ಜಾರಿಯಾಗಲಾರಂಭಿಸಿ ಕಳೆದ 18 ವರ್ಷಗಳಲ್ಲಿ ಅವು ಶ್ರಮಜೀವಿಗಳ ಬದುಕಿನ ಮೇಲೇ ಭಾರೀ ಪ್ರಹಾರಗಳನ್ನು ಮಾಡಿವೆ. ನಂತರ ನಡೆದ ಪ್ರತಿಯೊಂದೂ ಚುನಾವಣೆಗಳಲ್ಲಿ ಜನಸಾಮಾನ್ಯರು ಈ ಆರ್ಥಿಕ ನೀತಿಗಳಿಗೆ ತಮ್ಮ ವಿರೋಧವನ್ನು ಅಭಿವ್ಯಕ್ತಗೊಳಿಸಿದ್ದರೂ ನಮ್ಮನ್ನು ಆಳುವ ಮಂದಿ ಈ ನೀತಿಗಳನ್ನು ಮುಂದುವರೆಸಿಕೊಂಡೇ ಹೋಗುತ್ತಿದ್ದಾರೆ. ಭಾರತ ಈಗ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕಗಳಲ್ಲಿ ಒಂದು ಎಂದು ಅವರು ಬೀಗುತ್ತಿದ್ದಾರೆ.

ಎಂತಹ ಬೆಳವಣಿಗೆಯಿದು?

ಒಂದು ಅಮೆರಿಕನ್ ಪತ್ರಿಕೆ ಸಿದ್ಧಪಡಿಸಿದ ಅಧ್ಯಯನದ ಪ್ರಕಾರ ಜಗತಿನ 10 ಅತಿ ಶ್ರೀಮಂತ ವ್ಯಕ್ತಿಗಳಲ್ಲಿ ನಾಲ್ವರು ಭಾರತದವರು. ಜಪಾನ್ ದೇಶದಲ್ಲಿ ತಲಾ ಆದಾಯ ಭಾರತಕ್ಕಿಂತ 30 ಪಟ್ಟು ಹೆಚ್ಚಿದ್ದರೂ ಜಗತ್ತಿನ 10 ಅತಿ ಶ್ರೀಮಂತರಲ್ಲಿ ಕೇವಲ ಇಬ್ಬರು ಜಪಾನೀಯರು. ಭಾರತದಲ್ಲಿ 48 ಡಾಲರು ಬಿಲಿಯಾಧಿಪತಿಗಳಿದ್ದಾರೆ. ರಾಷ್ಟ್ರೀಯ ಆದಾಯದ 25 ಶೇಕಡಾ ಇವರ ಕೈಗಳಲ್ಲಿದೆ.

ಜಾಗತೀಕರಣದ ನೀತಿಗಳ ವಿರುದ್ಧ ಭಾರತದಲ್ಲಿ ಒಂದು ಐಕ್ಯ ಆಂದೋಲನ ಮೂಡಿ ಬಂದಿದ್ದು ಇದುವರೆಗೆ ಹನ್ನೊಂದು ಸಾರ್ವತ್ರಿಕ ಮುಷ್ಕರಗಳನ್ನು ಸಂಘಟಿಸಲಾಗಿದೆ. ಈ ಎಲ್ಲಾ ಮುಷ್ಕರಗಳಲ್ಲಿ ಕಾರ್ಮಿಕ ವರ್ಗದ ತಕ್ಷಣದ ಆರ್ಥಿಕ ಬೇಡಿಕೆಗಳಿಗಿಂತ ಹೆಚ್ಚಾಗಿ ದೇಶದ ದುಡಿಯುವ ಜನಗಳ ಸಾರ್ವತ್ರಿಕ ಬೇಡಿಕೆಗಳೇ ಪ್ರಾಧಾನ್ಯತೆ ಪಡೆಯುತ್ತವೆ ಎಂಬುದು ಗಮನಾರ್ಹ. ನೀತಿ-ಧೋರಣೆಗಳ ಪ್ರಶ್ನೆಗಳ ಮೇಲೆ ರಾಷ್ಟ್ರವ್ಯಾಪಿ ಹೋರಾಟಗಳನ್ನು ನಡೆಸಲು ಸಿದ್ಧವಾಗುತ್ತಿರುವಂತಹ ಒಂದು ಪ್ರಜ್ಞೆ ದೇಶದ ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿರುವುದನ್ನು ಇದು ತೋರಿಸುತ್ತದೆ.



ಡಾಲರ್ ಬಿಲಿಯಾಧಿಪತಿ ಎಂದರೆ 4000 ಕೋಟಿ ರೂಪಾಯಿಗಳ ಸಂಪತ್ತು ಇರುವಾತ! ಇದೇ ರೀತಿ ಡಾಲರ್ ಮಿಲಿಯಾಧಿಪತಿಗಳ ಸಂಖ್ಯೆಯಲ್ಲೂ ಭಾರೀ ಹೆಚ್ಚಳವಾಗಿದೆ; 2007ರಲ್ಲಿ 22.7 ಶೇ. ಹೆಚ್ಚಳವಾಗಿದೆಯಂತೆ. ನಿಜವಾಗಿಯೂ ಅತ್ಯಂತ ವೇಗದ ಹೆಚ್ಚಳ! ಇಷ್ಟೊಂದು ಸಂಪತ್ತು ಈ ಕೆಲವರ ಕೈಗಳಲ್ಲಿ ಹೇಗೆ ಶೇಖರವಾಯಿತು? ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆಯಲ್ಲಿ ನೀಡಿದ ಕೆಲವು ಅಂಕಿ-ಅಂಶಗಳಲ್ಲಿ ಇದಕ್ಕೆ ಉತ್ತರ ಸಿಗುತ್ತದೆ.

ಆ ಅಂಕಿ-ಅಂಶಗಳ ಪ್ರಕಾರ ಜಾಗತೀಕರಣದ ನವ-ಉದಾರವಾದಿ ನೀತಿಗಳು ಬರುವ ಮೊದಲು ವಸ್ತುಗಳು, ಯಂತ್ರಗಳು ಇತ್ಯಾದಿಗಳನ್ನು ತಯಾರಿಸುವ ವಲಯದಲ್ಲಿ ಕಾರ್ಮಿಕರ ಶ್ರಮದಿಂದ ನಿರ್ಮಾಣಗೊಳ್ಳುವ ಉತ್ಪನ್ನಗಳ ಮೌಲ್ಯದಲ್ಲಿ 33 ಶೇಕಡ ಕಾರ್ಮಿಕರ ಪಾಲಿಗೆ ಸಿಗುತ್ತಿತ್ತು. ಜಾಗತೀಕರಣದ ಮೊದಲ 15 ವರ್ಷಗಳಲ್ಲಿ ಈ ಪಾಲು 17 ಶೇ. ಕ್ಕೆ ಇಳಿದಿದೆ. ಈ ಮೌಲ್ಯದಲ್ಲಿ ಲಾಭವಾಗಿ ಮಾಲಕರ ಪಾಲಿಗೆ ಮೊದಲು 12ಶೇ. ಹೋಗುತ್ತಿತ್ತು. ಉದಾರೀಕರಣದ ಮೊದಲ 15 ವರ್ಷಗಳಲ್ಲಿ ಇದು 45 ಶೇಕಡಾಕ್ಕೇರಿದೆ! ಜಾಗತೀಕರಣದ ನೀತಿಗಳು ಸಾಧಿಸಿದ ಬೆಳವಣಿಗೆ ದುಡಿಯುವ ಜನಗಳ ಮತ್ತು ಜನಸಾಮಾನ್ಯರ ಹಿತಾಸಕ್ತಿಗಳ ಮೇಲೆ ನೇರವಾಗಿ ಪ್ರಹಾರ ಮಾಡಿ, ಅವರನ್ನು ಸುಲಿದು 'ಸಾಧಿಸಿ'ದ್ದು ಎಂಬುದನ್ನು ಈ ಅಂಕಿ-ಅಂಶಗಳು ಸ್ಪಷ್ಟವಾಗಿ ಸಾರುತ್ತವೆ.

ವಾಸ್ತವವಾಗಿ ಸಂಘಟಿತ ಉದ್ದಿಮೆ ವಲಯದಲ್ಲಿ ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಿ, ಇನ್ನೊಂದೆಡೆ ಸೌಲಭ್ಯಗಳಿಲ್ಲದ, ಸಂರಕ್ಷಣೆಯಿಲ್ಲದ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಿ ಮಾಡಿದ ಸಾಧನೆಯಿದು! ಇದು ಕಾರ್ಮಿಕ ಕಾನೂನುಗಳನ್ನು ಮುರಿದು 'ಕಾಂಟ್ರಾಕ್ಟೀಕರಣ', ಕ್ಯಾಶುವಲ್ ಕೆಲಸ, ವರ್ಷಾನುಗಟ್ಟಲೆ ತರಬೇತಿ ಅವಧಿ ಎಂಬೆಲ್ಲ ತಂತ್ರಗಳನ್ನು ಬಳಸಿ 'ಸಾಧಿಸಿ'ದ್ದು. ಜತೆಗೆ ಹಿಂದಿನ ಭಾರತ ಸರಕಾರ ಬಹು ಸಂಖ್ಯೆಯಲ್ಲಿರುವ ಬಡವರಿಗೆ ನೀಡುತ್ತಿದ್ದ ಪರೋಕ್ಷವಾಗಿಯಾದರೂ ಸಿಗುತ್ತಿದ್ದ ಸಬ್ಸಿಡಿಗಳನ್ನು ಕಡಿತ ಮಾಡಿ ಶ್ರೀಮಂತ ವಿಭಾಗಗಳಿಗೆ ನೀಡಿದ ಭಾರೀ ತೆರಿಗೆ ರಿಯಾಯ್ತಿಗಳು ಇಂತಹ ಪರಿಸ್ಥಿತಿ ನಿರ್ಮಿಸಿದೆ ಎಂಬುದು ಸ್ಪಷ್ಟ.

ಹೆಚ್ಚುತ್ತಿರುವ ಅಸಮಾನತೆಗಳ ವಿರುದ್ಧ

ನವ-ಉದಾರವಾದಿ ನೀತಿಗಳು ನಮ್ಮ ಬಹುಪಾಲು ಜನಗಳಿಗೆ ಕೊಟ್ಟಿರುವುದು ಕೇವಲ ಸಂಕಟಗಳನ್ನು ಎಂಬುದನ್ನು ಇನ್ನೂ ಹಲವು ಅಂಶಗಳು ಸಾಬೀತು ಮಾಡುತ್ತವೆ. ಮೇಲೆ ಹೇಳಿದಂತೆ ಮಿಲಿಯಾಧಿಪತಿಗಳ ಸಂಖ್ಯೆ 22.7 ಶೇಕಡಾದಷ್ಟು ಏರಿದ 2007 ರಲ್ಲಿಯೆ ಪ್ರಕಟವಾದ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ(ಯುಎನ್‌ಡಿಪಿ) ವರದಿಯ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ 177 ದೇಶಗಳಲ್ಲಿ 128ನೇಯದ್ದು. ಜನಗಳಿಗೆ ವಸತಿ, ಪೋಷಕಾಂಶಗಳ ಲಭ್ಯತೆ, ದುಡಿಮೆಯ ಪರಿಸ್ಥಿತಿಗಳು, ಶಿಕ್ಷಣ, ಆರೋಗ್ಯ ಸೌಲಭ್ಯಗಳು, ವೃದ್ಧಾಪ್ಯ ಸೌಕರ್ಯಗಳು ಇತ್ಯಾದಿಗಳನ್ನು ಪರಿಶೀಲಿಸಿ ಈ ಸೂಚ್ಯಂಕವನ್ನು ಲೆಕ್ಕ ಹಾಕಲಾಗುತ್ತದೆ.

ಅಂದರೆ ಆರ್ಥಿಕ ಬೆಳವಣಿಗೆಯ ಲಾಭಗಳನ್ನೆಲ್ಲ ಶ್ರೀಮಂತ ಬಂಡವಾಳಶಾಹಿಗಳು ತಮ್ಮ ಜೇಬಿಗೆ ಸೇರಿಸಿಕೊಳ್ಳಲು ಈ ನವ-ಉದಾರವಾದೀ ವ್ಯವಸ್ಥೆ ಅವಕಾಶಮಾಡಿಕೊಟ್ಟಿದೆ. ಬಡ ಜನಸಮಾನ್ಯರಿಗೆ ತಮ್ಮ ಶ್ರಮದ ಫಲಗಳು ಕೈಸೇರಲೆ ಇಲ್ಲ. ಈ ರೀತಿ ಜಾಗತೀಕರಣದ ನೀತಿಗಳು ದೇಶದ ಒಳಗೂ, ದೇಶಗಳ ನಡುವೆಯೂ ಅಸಮಾನತೆಗಳನ್ನು ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಮೇ 13 ರಂದು ನವದೆಹಲಿಯಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಏರ್ಪಡಿಸಿದ್ದ ರಾಷ್ಟ್ರಿಯ ಸಮಾವೇಶ ಆರು ಬೇಡಿಕೆಗಳ ಮೇಲೆ ಕಾರ್ಯಾಚರಣೆ ನಡೆಸಲು ನಿರ್ಧರಿಸಿ, ಅಗಸ್ಟ್ 20 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು. ನಂತರ ಕರ್ನಾಟಕವೂ ಸೇರಿದಂತೆ ಹೆಚ್ಚಿನ ರಾಜ್ಯಗಳಲ್ಲಿಯೂ ಸಮಾವೇಶಗಳು ನಡೆದು ಈ ಕರೆಗೆ ರಾಷ್ಟ್ರವ್ಯಾಪಿ ಬೆಂಬಲ ವ್ಯಕ್ತವಾಗಿದೆ. ಬೆಂಗಳೂರಿನಲ್ಲಿ ರಾಜ್ಯ ಸಮಾವೇಶ ಜುಲೈ 5ರಂದು ನಡೆಯಿತು.

ಬೇಡಿಕೆಗಳು

ಈ ಸಾರ್ವತ್ರಿಕ ಮುಷ್ಕರದಲ್ಲಿ ಕಾರ್ಮಿಕರು ಮುಂದಿಟ್ಟಿರುವ ಬೇಡಿಕೆಗಳು ಹೀಗಿವೆ:

1. ಕೂಡಲೇ ಬೆಲೆ ಏರಿಕೆ ನಿಯಂತ್ರಣಕ್ಕೆ ಈ ಕ್ರಮಗಳನ್ನು ಅನುಸರಿಸಬೇಕು.

(ಅ) ದೇಶಾದ್ಯಂತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕರಣಗೊಳಿಸಿ ಆ ಮೂಲಕ ಎಲ್ಲಾ ಅಗತ್ಯ ವಸ್ತುಗಳನ್ನು ಈ ವ್ಯವಸ್ಥೆಯ ಮೂಲಕ ವಿತರಿಸಬೇಕು.

(ಆ) ಜೀವನಾವಶ್ಯಕ ವಸ್ತುಗಳ ವಾಯಿದಾ(ಮುಂಗಡ) ವ್ಯಾಪಾರವನ್ನು ಎಲ್ಲಾ ರೀತಿಯಿಂದಲೂ ನಿಷೇಧಿಸಬೇಕು.

(ಇ) ಪೆಟ್ರೋಲ್-ಡಿಸೇಲ್ ಮೇಲಿನ ತೆರಿಗೆಯನ್ನು ಕಡಿತಗೊಳಿಸಬೇಕು.

(ಈ) ಕಾಳಸಂತೆ ಮತ್ತು ಕಳ್ಳ ದಾಸ್ತಾನುದಾರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.

2. ಎಲ್ಲಾ ಕಾರ್ಮಿಕ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಮುಖ್ಯವಾಗಿ ಕನಿಷ್ಠ ಕೂಲಿ, ಕೆಲಸದ ಅವಧಿ, ಸಾಮಾಜಿಕ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಕಾನೂನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಗುತ್ತಿಗೀಕರಣ ಮತ್ತು ಹೊರಗುತ್ತಿಗೆಯನ್ನು ನಿಲ್ಲಿಸಬೇಕು.

3. ಸಂಸತ್ತಿನಲ್ಲಿ ಇನ್ನೂ ಅಂಗೀಕಾರವಾಗದೇ ಉಳಿದಿರುವ ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಾಮಾಜಿಕ ಸುರಕ್ಷತೆ ಮಸೂದೆ ವ್ಯಾಪ್ತಿಗೆ ಬಿಪಿಎಲ್-ಎಪಿಎಲ್ ಎನ್ನುವ ತಾರತಮ್ಯವಿಲ್ಲದೆ ಎಲ್ಲಾ ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಒಳಪಡಿಸಬೇಕು ಮತ್ತು ಈ ಸಂಬಂಧ ಅಸಂಘಟಿತ ವಲಯದ ಉದ್ದಿಮೆಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಎಎಸ್) ಮತ್ತು ಕಾರ್ಮಿಕರಿಗೆ ಸಂಬಂಧಿಸಿ ಸಂಸತ್ತಿನ ಸ್ಥಾಯಿ ಸಮಿತಿಗಳು ನೀಡಿರುವ ಎಲ್ಲಾ ಶಿಫಾರಸ್ಸುಗಳನ್ನು, ಕೇಂದ್ರ ಸರಕಾರದ ಹಣನೀಡಿಕೆಯೊಂದಿಗೆ ಅದು ಒಳಗೊಳ್ಳುವಂತಾಗಬೇಕು.

4. ರೈತರಿಗಾಗಿ ಜಾರಿ ಮಾಡಿರುವ ಸಾಲ ಮನ್ನಾ ಯೋಜನೆಯನ್ನು ಎಲ್ಲಾ ಖಾಸಗಿ ಲೇವಾದೇವಿಗಾರರ ಸಾಲಕ್ಕೂ ವಿಸ್ತರಿಸಬೇಕು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್ ಗಳು ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ ಯೋಜನೆಯನ್ನು ವಿಸ್ತರಿಸಬೇಕು.

ಪುಟ 12ಕ್ಕೆ

ಭಾರತವು, ಜಗತ್ತಿನ ದೊಡ್ಡಣ್ಣ ತಾನು ಎಂದು ಬೀಗುವ ಅಮೇರಿಕಾದ ಬಾಲಂಗೋಚಿಯಾಗಬೇಕೋ ಅಥವಾ ಜನತೆಯ ಹಿತಾಸಕ್ತಿಗೆ ಅನುಗುಣವಾಗಿ ಸ್ವತಂತ್ರವಾದ ಹಾದಿ ಹಿಡಿಯಬೇಕೋ?

ದೇಶದ ಸಾರ್ವಭೌಮತೆ ಮೇಲೆ ದಾಳಿ

ಪ್ರಕಾಶ್ ಕಾರಟ್

ದೇಶ ಇದೀಗ 61ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದೆ. ಆದರೆ ಅದೇ ಸಮಯದಲ್ಲಿ ದೇಶವು ತನ್ನ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಗಂಭೀರ ಸವಾಲು ಎದುರಿಸಬೇಕಾಗಿದೆ. ಇಂದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಎರಡೂ ವಿಚಾರಗಳಲ್ಲೂ ಇದೇ ಪರಿಸ್ಥಿತಿ ಎದುರಾಗಿದೆ. ರಾಷ್ಟ್ರದ ಸಾರ್ವಭೌಮತೆ ದುರ್ಬಲವಾದಲ್ಲಿ ಅದು ಸ್ವಾತಂತ್ರ್ಯಕ್ಕೂ ಅಪಾಯವನ್ನು ತರುತ್ತದೆ. ಭಾರತವು ಅಮೇರಿಕಾದೊಂದಿಗೆ ಮಾಡಿಕೊಳ್ಳ ಹೊರಟಿರುವ ಸಾಮರಿಕ ಮೈತ್ರಿಯು ಖಂಡಿತವಾಗಿಯೂ ದೇಶದ ಸಾರ್ವಭೌಮತೆಗೆ ಮಾರಕವಾಗಿದೆ.

ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು 'ಭಾರತದ ಆಳುವ ವರ್ಗಗಳು ಅನುಸರಿಸುತ್ತಿರುವ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ನಮ್ಮ ದೇಶದ ಎಲ್ಲ ರಂಗಗಳಲ್ಲೂ ಸಾಮ್ರಾಜ್ಯಶಾಹಿ ನುಸುಳುವಿಕೆಯನ್ನು ಅದರ ಉತ್ತುಂಗಕ್ಕೇರಿಸಿದೆ' 'ಸಾಮ್ರಾಜ್ಯಶಾಹಿ ಅಮೇರಿಕಾದ ಕಡೆ ವಾಲುತ್ತಿರುವ ನೀತಿಯ ವಿರುದ್ಧವಾಗಿ ಮತ್ತು ಅಲಿಪ್ತ ನೀತಿಯ . ಆಧಾರಿತವಾದ ಸಾಮ್ರಾಜ್ಯಶಾಹಿ ಒತ್ತಡಗಳಿಂದ ದೂರವಾದ ನೀತಿಗಳಿಗಾಗಿ ಜನತೆ ಮುಂದೆ ಮಹತ್ತರವಾದ ಹೋರಾಟಗಳನ್ನು ನಡೆಸಬೇಕಾಗಿದೆ'.



ಜಗತ್ತಿನ ಅತಿ ದುಷ್ಟ - ಮಿಲಿಟರಿ ಶಕ್ತಿಯಾದ ಅಮೇರಿಕದ ಯುದ್ಧ ವಿಮಾನಗಳು, ಮಿಲಿಟರಿ ಕೇಂದ್ರ ಪೆಂಟಗಾನ್. ಈ ದೈತ್ಯ ಮಿಲಿಟರಿ ಭಾರತವನ್ನು ಭಾರತೀಯ ಜನತೆ ಹೊರಲು ಶಕ್ಯರೇ?

ಈ ರೀತಿಯಲ್ಲಿ ಭಾರತದ ಆಳುವ ವರ್ಗಗಳ ಸಾಮ್ರಾಜ್ಯಶಾಹಿಯೊಂದಿಗಿನ ಬೆಳೆಯುತ್ತಿರುವ ಶಾಮೀಲು ಕೋರತನವು ಭಾರತದ ವಿದೇಶಾಂಗ ನೀತಿಗಳಲ್ಲೂ ಪ್ರತಿಫಲನಗೊಳ್ಳುತ್ತಿದೆ. ಆದ್ದರಿಂದಲೇ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು ಹೀಗೆ ಗುರುತಿಸಿದೆ.


ಅಮೇರಿಕಾದೊಂದಿಗೆ ಸಾಮರಿಕ (ಯುದ್ಧ)ಮೈತ್ರಿ ಏರ್ಪಡಿಸಿ ಕೊಳ್ಳುವುದು ಭಾರತವು ಅಮೇರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಕೈ ಮಿಲಾಯಿಸುವುದರ ಒಂದು ಪ್ರಮುಖ ಹೆಜ್ಜೆಯಾಗಿದೆ. ಜುಲೈ 2005 ರಲ್ಲಿ ಭಾರತದ ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್ ಮತ್ತು ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ಸಹಿ ಮಾಡಿದ ಜಂಟಿ ಹೇಳಿಕೆಯಲ್ಲಿ ಇದಕ್ಕಾಗಿಯೇ ಪ್ರಯತ್ನಿಸಲಾಗಿದೆ. ಈ ಸಾಮರಿಕ ಮೈತ್ರಿಯು ನಾಲ್ಕು ಭಾಗಗಳನ್ನೊಳಗೊಂಡಿದೆ. ಒಂದು, ಭಾರತವು ಅಮೇರಿಕಾದ 'ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ಹರಡುವ' ಬಗ್ಗೆ ತುತ್ತೂರಿ ಊದಬೇಕು. ಅಮೇರಿಕಾದೊಂದಿಗೆ ಈ ನಿಟ್ಟಿನಲ್ಲಿ ಕೈ ಜೋಡಿಸಬೇಕು. ಎರಡನೆಯದಾಗಿ, ಅಮೇರಿಕಾದ ಹಿತಾಸಕ್ತಿ, ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಯನ್ನು ಕಾಪಾಡುವಂತಹ ಹಣಕಾಸು ನೀತಿಗಳು; ಮೂರನೆಯದು, ರಕ್ಷಣಾ ಚೌಕಟ್ಟು ಒಪ್ಪಂದದಲ್ಲಿ ಹೇಳಲಾದಂತಹ ಮಿಲಿಟರಿ ಮೈತ್ರಿ, ಮತ್ತು ನಾಲ್ಕನೆಯದು, ಅಣು ಸಹಕಾರ ಒಪ್ಪಂದ.

ಈ ಅಣು ಒಪ್ಪಂದವನ್ನು ಕೇಂದ್ರವನ್ನಾಗಿಟ್ಟು ಕೊಂಡು ಭಾರತವನ್ನು ಅಮೇರಿಕಾ ದೊಂದಿಗೆ ಮೈತ್ರಿಗೆ ಎಳೆಯಲಾಗುತ್ತಿದೆ. ಇಂತಹ ಒಪ್ಪಂದ ಒಮ್ಮೆ ಜಾರಿಗೆ ಬಂದರೆ ಅಮೇರಿಕಾದೊಂದಿನ ಸಾಮರಿಕ ಮೈತ್ರಿಯೂ ಗಟ್ಟಿಗೊಳ್ಳುತ್ತದೆ ಮತ್ತು ಇದು ಭಾರತದ ಸ್ವಾಯತ್ತತೆ ಹಾಗೂ ವಿದೇಶಾಂಗ ನೀತಿಯ ಮೇಲೆ ಅತ್ಯಂತ ಗಂಭೀರವಾದ ದೂರಗಾಮಿ ಪರಿಣಾಮಗಳನ್ನು ಬೀರಲಿದೆ.

ಜನರ ಬದುಕಿನ ಮೇಲೆ ಪರಿಣಾಮ

ಈ ಸಾಮರಿಕ ಮೈತ್ರಿಯ ವಿರುದ್ಧದ ಹೋರಾಟ ಎಂದರೆ ಅದು ಕೇವಲ ಅಣು ಒಪ್ಪಂದದ ವಿರುದ್ಧದ ಹೋರಾಟವಿಲ್ಲ. ಇದು ಭಾರತದ ಆರ್ಥಿಕ ಸಾರ್ವಭೌಮತೆ, ಸ್ವಾತಂತ್ರ್ಯ, ವಿದೇಶಾಂಗ ನೀತಿ ಮತ್ತು ದುಡಿಯುವ ವರ್ಗದ ಜನರ ಬದುಕಿನ ಮೇಲೆ





ಪರಿಣಾಮ ಬೀರುತ್ತದೆ. ಈ ಆರ್ಥಿಕ ಪಾಲುದಾರಿಕೆಯ ಭಾಗವಾಗಿ ಈಗಾಗಲೇ ಹಲವು ಸರಣಿ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ಮಾರ್ಚ್ 2006ರಲ್ಲಿ ಜಾರ್ಜ್ ಬುಶ್ ಭಾರತಕ್ಕೆ ಭೇಟಿ ನೀಡಿದಾಗ ರಚನೆಗೊಂಡ ಭಾರತ-ಅಮೇರಿಕಾ 'ಸಿಇಓ ವೇದಿಕೆ'ಯಲ್ಲಿ ಯೋಜಿಸಿದಂತೆಯೇ ಇವೆ.

'ಭಾರತ-ಅಮೇರಿಕಾ ಕೃಷಿ ಜ್ಞಾನ ಮುತುವರ್ಜಿ'ಯು ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಕೃಷಿ ಸಂಶೋಧನೆಗಳ ಕುರಿತು ಆದೇಶ ನೀಡುವುದಕ್ಕೆ ದಾರಿ ಮಾಡಿಕೊಟ್ಟಿದೆ ಮತ್ತು ಭಾರತದ ಕೃಷಿಯನ್ನು ಕಾರ್ಪೋರೇಟ್ ರಂಗಕ್ಕೆ ತೆರೆದಿಡಲು ದಾರಿಮಾಡಿಕೊಟ್ಟಿದೆ. ಇದು ಭಾರತದ ರೈತರ ಬದುಕಿನ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಲಿದೆ. ಅದೇ ರೀತಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ) ವು ಲಕ್ಷಾಂತರ ಸಣ್ಣ ವ್ಯಾಪಾರಿಗಳು ಮತ್ತು ಮಾರಾಟಗಾರರ ಬದುಕನ್ನು ನಾಶಮಾಡಲಿದೆ. ಶಿಕ್ಷಣ, ಮಾಧ್ಯಮ ಕ್ಷೇತ್ರವೇ ಅಲ್ಲದೇ ಇಡೀ ದೇಶದ ಆರ್ಥಿಕತೆಯನ್ನು ವಿದೇಶಿ ಬಂಡವಾಳಕ್ಕೆ ತೆರೆದಿಡಬೇಕಾದ ಪರಿಸ್ಥಿತಿ ಬರುತ್ತಿದೆ. ಭೂವ್ಯವಹಾರ (ರಿಯಲ್ ಎಸ್ಟೇಟ್) ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶಿಸಿರುವುದರಿಂದ ದೊಡ್ಡ ಕಾರ್ಪೋರೇಟ್ ಕಂಪನಿಗಳು ಭೂಮಿಯನ್ನು ನುಂಗಲು, ಭೂಮಿಯನ್ನು ಸೆಳೆಸಲು ಅನುಕೂಲವಾಗಿದೆ. ಇದರಿಂದಾಗಿ ಜನ ಸಾಮಾನ್ಯರ ಸ್ವಂತ ಮನೆ ಕಟ್ಟಿಕೊಳ್ಳುವ ಕನಸು ಕನಸಿನ ಗಂಟೇ ಆಗುವಂತಹ ಪರಿಸ್ಥಿತಿ ಬರುತ್ತಿದೆ. ಆರ್ಥಿಕತೆಯ ಇನ್ನಷ್ಟು ಉದಾರೀಕರಣ, ವಿದೇಶಿ ಬಂಡವಾಳದ ಒಳ ನುಸುಳುವಿಕೆಯು ಭಾರತ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಮತ್ತಷ್ಟು ದುರ್ಬಲಗೊಳಿಸಲಿದೆ.

ಆಹಾರ ಸಹಾಯಧನವನ್ನು ಕಡಿತ ಮಾಡುವುದು ಮತ್ತು ಪಡಿತರ ವ್ಯವಸ್ಥೆಯನ್ನು ದುರ್ಬಲಗೊಳಿಸುವುದು ಮುಂತಾದ ನವ ಉದಾರೀಕರಣದ ನೀತಿಗಳಿಗೆ ಜೋತು ಬಿದ್ದಿರುವುದರಿಂದಲೇ ಬೆಲೆ ಏರಿಕೆಯನ್ನು ನಿಯಂತ್ರಿಸುವುದರಲ್ಲಿ ಕೇಂದ್ರ ಸರ್ಕಾರವು ವಿಫಲವಾಯಿತು. ನವ ಉದಾರೀಕರಣವಾದಿ ನೀತಿಗಳು ಅಗತ್ಯ ವಸ್ತುಗಳ ವಿಚಾರಗಳಲ್ಲಿ ಕೂಡ ವಾಯಿದಾ ವ್ಯಾಪಾರ (ಮುಂಗಡ ವ್ಯಾಪಾರ)ವನ್ನು ಉತ್ತೇಜಿಸುತ್ತವೆಯೇ ಹೊರತು ಅದನ್ನು ಹತ್ತಿಕ್ಕಲು ಸೂಚಿಸುವುದಿಲ್ಲ. ಇಂತಹ ಕಾರಣಗಳಿಂದಾಗಿಯೇ ಅಮೇರಿಕಾ ದೊಂದಿಗಿನ ಸಾಮರಿಕ ಮೈತ್ರಿಯು ದುಷ್ಟ, ಜನವಿರೋಧಿ ಆರ್ಥಿಕ ನೀತಿಗಳಿಂದಾಗಿ ಭಾರತದ ಬಡ ಜನರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರಗೊಳಿಸುತ್ತದೆ.

ಮಿಲಿಟರಿ ಮೈತ್ರಿಯೇ ನಿರ್ಣಾಯಕ :

ಅಮೇರಿಕನ್ ಸಾಮ್ರಾಜ್ಯಶಾಹಿಯು ಮುಖ್ಯವಾಗಿ ಭಾರತವನ್ನು ತನ್ನ ಮಿಲಿಟರಿ ಮೈತ್ರಿಗೆ ಸೆಳೆಯಲು ಬಯಸಿದೆ. ಅಮೇರಿಕಾಕ್ಕೆ ತನ್ನ ದೂರದೃಷ್ಟಿಯ ತಂತ್ರದ ದೃಷ್ಟಿಯಿಂದ ಭಾರತದೊಂದಿಗಿನ ಮಿಲಿಟರಿ ಮೈತ್ರಿ ಮುಖ್ಯವಾಗಿದೆ. ಏನೆಲ್ಲಾ ಮಿಲಿಟರಿ ಬಲ, ಸಾಮರ್ಥ್ಯ ಹೊಂದಿದ್ದಾಗ್ಯೂ ಅಮೇರಿಕಾವು ತನ್ನ ಪ್ರಾಬಲ್ಯವನ್ನು, ಜಗತ್ತಿನ ಮೇಲಿನ ಹಿಡಿತವನ್ನು ಕ್ರೋಢೀಕರಿಸಿಕೊಳ್ಳಲು, ತನ್ನ ಸೈನ್ಯದೊಂದಿಗೆ ಮಿಲಿಟರಿ ಮಧ್ಯಪ್ರವೇಶ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಆದ್ದರಿಂದಾಗಿ ಅಮೇರಿಕಕ್ಕೆ ತನ್ನ ಜಾಗತಿಕ ಪ್ರಾಬಲ್ಯವನ್ನು ಮೆರೆಯಲು ಸ್ಥಳೀಯವಾದ ಮಿಲಿಟರಿ ಮೈತ್ರಿ ಬೇಕಾಗಿದೆ. ಏಷ್ಯಾದಲ್ಲಿ ಜಪಾನ್ ಅಲ್ಲದೆ ಈಗ ಭಾರತ ಅಮೇರಿಕಾಕ್ಕೆ ಒಬ್ಬ ಮಿಲಿಟರಿ ಮಿತ್ರನಾಗಿ ಕಾಣಿಸುತ್ತಿದೆ. ಹತ್ತು ವರ್ಷಗಳ 'ರಕ್ಷಣಾ ಚೌಕಟ್ಟು ಒಪ್ಪಂದ'ವು ಅಮೇರಿಕಾ ಭಾರತಗಳ ಮಿಲಿಟರಿ ಸಹಯೋಗಕ್ಕೆ ಈ ಹಿಂದೆ ಎಂದೂ ಕಾಣದಂತಹ ಆಧಾರವನ್ನು ಒದಗಿಸಿದೆ.

ಈಗಾಗಲೇ ಅಮೇರಿಕಾದ ಸೈನ್ಯ ಶಕ್ತಿಯ ಕೇಂದ್ರವಾದ ಪೆಂಟಗಾನ್ ಭಾರತವನ್ನು ತಾನು ಮಿಲಿಟರಿ ನೆಲೆ ಸೌಲಭ್ಯ ಹೊಂದಿರುವ ದೇಶಗಳ ಪಟ್ಟಿಯಲ್ಲಿ ಸೇರಿಸಿಕೊಂಡಿದೆ. ಅಮೇರಿಕಾದ ಸೈನ್ಯವು ಭಾರತದ ನೌಕಾ ನೆಲೆ ಮತ್ತು ವಾಯುನೆಲೆಗಳಿಗೆ ಪ್ರವೇಶಿಸಲು ಅತ್ಯಂತ ಸರಾಗವಾದ ಪ್ರವೇಶಾವಕಾಶವನ್ನು ನೀಡುವ 'ಲಾಜಿಸ್ಟಿಕ್ ಸಪೋರ್ಟ್ ಅಗ್ರಿಮೆಂಟ್' ನ್ನು ಮನಮೋಹನ್ ಸಿಂಗ್ ಸರ್ಕಾರವು ಮಾಡಿಕೊಳ್ಳಲು ತುದಿಗಾಲಿನಲ್ಲಿ ನಿಂತಿತ್ತು. ಎಡಪಕ್ಷಗಳ ಅತ್ಯಂತ ದೃಢವಾದ ವಿರೋಧದಿಂದಾಗಿ ಮಾತ್ರ ಸರ್ಕಾರ ಈ ನಿಟ್ಟಿನಲ್ಲಿ ಯಶಸ್ವಿಯಾಗಲು ಸಾಧ್ಯವಾಗಿಲ್ಲ.

ಜುಲೈ 2007 ರಲ್ಲಿ ಅಮೇರಿಕಾ-ಭಾರತ ದ್ವಿಪಕ್ಷೀಯ ಅಣು ಸಹಕಾರ ಒಪ್ಪಂದವನ್ನು ಘೋಷಿಸಿದ ಬೆನ್ನ ಹಿಂದೆಯೇ ಅಮೇರಿಕಾ ಅಧೀನ ಕಾರ್ಯದರ್ಶಿ ನಿಕೋಲಸ್ ಬರ್ನ್ ಹೇಳಿದ್ದು ಹೀಗೆ. "....ನಾವೀಗ ನಾಗರೀಕ ಅಣು ವ್ಯಾಪಾರ ಒಪ್ಪಂದವನ್ನು ಪೂರ್ಣಗೊಳಿಸಿದ್ದೇವೆ ಮತ್ತು ಈ ದಾರಿಯಲ್ಲಿ ಮುಂದೆ... ಭವಿಷ್ಯದಲ್ಲಿ ನಮ್ಮ ನಡುವೆ ಇದಕ್ಕಿಂತ ವಿಶಾಲವಾದ ರಕ್ಷಣಾ ಸಹಕಾರವು ಕಾಣುತ್ತಿದೆ. ತರಬೇತಿ, ಸಮರಾಭ್ಯಾಸ, ... ಮತ್ತು ಅಮೇರಿಕಾದ ರಕ್ಷಣಾ ತಂತ್ರಜ್ಞಾನದ ವ್ಯಾಪಾರ ಸಹ ನಡೆಯಲಿದೆ ಎಂದು ಭಾವಿಸುತ್ತೇನೆ". ಈ ನಿಕೋಲಸ್‌ಬರ್ನ್ ಯಾರೆಂದರೆ...? ಈಚನೇ 123

ಪುಟ 10ಕ್ಕೆ

ದೇಶದ ಸಾರ್ವಭೌಮತೆ ಮೇಲೆ ದಾಳಿ

ಪುಟ 9 ರಿಂದ

ಒಪ್ಪಂದ ಮಾತುಕತೆಗಳಿಗೆ ಮುಖ್ಯವಾದ ಹೊಣೆಗಾರ.

ಈಗಾಗಲೇ ಅಮೇರಿಕಾವು ದಕ್ಷಿಣ ಏಷ್ಯಾದ ವಿಷಯಗಳಲ್ಲಿ ಭಾರತದೊಂದಿಗೆ ಸಮನ್ವಯವನ್ನು ಸಾಧಿಸಿದೆ. ಅಫಘಾನಿಸ್ತಾನ, ಬಾಂಗ್ಲಾದೇಶ, ನೇಪಾಳ, ಎಲ್ಲಾ ಪ್ರದೇಶಗಳಲ್ಲಿ ಭಾರತ-ಅಮೇರಿಕಾ ಜಂಟಿ ತಂತ್ರವನ್ನು ರೂಪಿಸಲಾಗಿದೆ.

1998ರಿಂದ 2004 ರ ನಡುವೆ ಇದ್ದ ಬಿಜೆಪಿ ನೇತೃತ್ವದ ಸರ್ಕಾರವು ಯಾವ ರೀತಿಯಲ್ಲಿ ಅಮೇರಿಕದೊಂದಿಗೆ ಸಾಮರಿಕ ಮೈತ್ರಿಗೆ ಹಾತೊರೆದು ಮುಂದುವರಿಯಿತೋ ಅದೇ ರೀತಿಯಲ್ಲಿ ಅದೇ ದಾರಿಯಲ್ಲಿ ಮನಮೋಹನ್ ಸರ್ಕಾರವೂ ಸಹ ನಡೆಯುತ್ತಿದೆ. ಇದು ಏನನ್ನು ತೋರಿಸುತ್ತಿದೆ? ಭಾರತದ ಆಳುವ ವರ್ಗವು ಅಮೇರಿಕಾದೊಂದಿಗೆ ಗಾಢವಾದ ಸಹಯೋಗವನ್ನು ಬಯಸುತ್ತಿರುವುದಕ್ಕೆ ಇದೇ ಒಂದು ಸಾಕ್ಷಿಯಾಗಿದೆ. ಇದು ಅಮೇರಿಕಾದ ಆಳುವ ಜನರಿಗೂ ಗೊತ್ತಿದೆ. ಬ್ರೂಸ್ ರೈಡೆಲ್ ಎಂಬಾತ, ಕ್ಲಿಂಟನ್ ಆಡಳಿತದಲ್ಲಿ, ಅಮೇರಿಕಾದ ಗೂಢಚಾರ ಸಂಸ್ಥೆ ಸಿಐಎಯಲ್ಲಿ ದುಡಿದ ಮನುಷ್ಯ, ಏಪ್ರಿಲ್ 2008ರಲ್ಲಿ 'ಫಾರಿನ್ ಅಫೈರ್ಸ್' ಗೆ ನೀಡಿದ ಸಂದರ್ಶನದಲ್ಲಿ ಆತ ಹೀಗೆ ಹೇಳುತ್ತಾನೆ: 'ಭಾರತ -ಅಮೇರಿಕಾದ ಸಂಬಂಧ ಸಹಕಾರಗಳಿಗೆ ಈಗಲೂ ಬಲವಾದ ವಿರೋಧವೇ ಇದೆ. ಕಮ್ಯುನಿಸ್ಟರು ಇದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯ ವಿರೋಧ ಪಕ್ಷವಾದ ಬಿಜೆಪಿಗಳ ನಡುವೆ ಭಾರತದ ವಿದೇಶಾಂಗ ನೀತಿಯ ಮುಖ್ಯ ಆಧಾರ -ಸ್ಥಂಭ, 'ಅಮೇರಿಕಾ ಭಾರತಗಳ ನಡುವಿನ ಸಂಬಂಧ' ಎಂಬ ಬಗ್ಗೆ ಬಹುತೇಕ ಸಮ್ಮತಿ ಇದೆ.

ಈ ಪರಿಸ್ಥಿತಿಯಿಂದಾಗಿ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದಿಂದ ದೂರ ಸರಿಸಬೇಕಾಯಿತು. ಎಡಪಕ್ಷಗಳು ಬೆಂಬಲ ನೀಡುತ್ತಿರುವ ಸರ್ಕಾರವೊಂದು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ವಿರೋಧವಾಗಿ ಇಂತಹ ಸಾಮರಿಕ ಮೈತ್ರಿಗೆ ಮುಂದಾದರೆ ಅದನ್ನು ಎಡಪಕ್ಷಗಳು ಬೆಂಬಲಿಸಬಹುದಿತ್ತೇ. ಈ ಮೂಲಭೂತ ಪ್ರಶ್ನೆಯ ಆಧಾರದಲ್ಲಿ ಎಡಪಕ್ಷಗಳು ಬೆಂಬಲ ವಾಪಸ್ ಪಡೆದವು.

ಭಾರತದ ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಬೇಕಾದಲ್ಲಿ ಅಮೇರಿಕಾದೊಂದಿಗಿನ ಈ ವ್ಯೂಹಾತ್ಮಕ ಮೈತ್ರಿಯನ್ನು ಕೊನೆಗಾಣಿಸಬೇಕಿದೆ. ಈಗ ಮನ ಮೋಹನ್ ಸಿಂಗ್ ಸರ್ಕಾರ ಮುಂದೆ ಹೋಗುತ್ತಿರುವ ರೀತಿ ನೀತಿ ನೋಡಿದರೆ ದೇಶದ ಸಾರ್ವಭೌಮತೆಯನ್ನು ಅದು ರಕ್ಷಿಸುತ್ತದೆಂದು ಯಾವ ಕಾರಣಕ್ಕೂ ನೆಚ್ಚಿಕೊಳ್ಳುವಂತಿಲ್ಲ. ಇಂತಹ ಸಾಮ್ರಾಜ್ಯಶಾಹಿ ಪರವಾದ ನೀತಿಯನ್ನು ಅಳವಡಿಸಿಕೊಳ್ಳುವ ಮೂಲಕ ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳನ್ನು ಮಣಿಸುವ ಶಕ್ತಿಯನ್ನು ಸಹ ಕಾಂಗ್ರೆಸ್ ತೋರುವುದು ಸಾಧ್ಯವಿಲ್ಲ. ಅನುಭವಗಳು ಏನು ಹೇಳುತ್ತವೆ? ಹಿಂದುತ್ವ ಶಕ್ತಿಗಳು ಮತ್ತು ಬಿಜೆಪಿ ಅಮೇರಿಕಾದ ಪರವಾಗಿವೆ. ಅದೇ ನೀತಿಯನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷವು ಕೋಮುವಾದಿ ಶಕ್ತಿಗಳನ್ನು ಎದುರಿಸುವ ವಿಚಾರದಲ್ಲಿ ಇನ್ನಷ್ಟು ದುರ್ಬಲವಾಗಿದೆ.

ಭಾರತದ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವ ಪ್ರಶ್ನೆಯು ನೇರವಾಗಿ ದುಡಿಯುವ ವರ್ಗದ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಹೋರಾಟದೊಂದಿಗೆ ಬೆಸೆದುಕೊಂಡಿದೆ. ಸಾಮ್ರಾಜ್ಯಶಾಹಿ ಪ್ರೇರಿತ ಆರ್ಥಿಕ ನೀತಿಗಳು ಜನರ ಬದುಕಿನ ಮೇಲೆ ತೀವ್ರ ದಾಳಿ ನಡೆಸುತ್ತಿವೆ. ಸಿಪಿಐ(ಎಂ) ಪಕ್ಷವು ತನ್ನ 19ನೇ ಮಹಾಧಿವೇಶನದಲ್ಲಿ ನಿರ್ಣಯಿಸಿರುವಂತೆ ಅಮೇರಿಕಾದ ಸಾಮ್ರಾಜ್ಯಶಾಹಿ ಹುನ್ನಾರಗಳ ವಿರುದ್ಧ ಹಾಗೂ ಭಾರತವನ್ನು ಈ ಸಾಮರಿಕ ಒಪ್ಪಂದದಿಂದ ಹೊರತರಲು ಅತ್ಯಂತ ವಿಶಾಲವಾದ ದೇಶಪ್ರೇಮಿ ಶಕ್ತಿಗಳು ಮತ್ತು ಪ್ರಜಾಸತ್ತಾತ್ಮಕ ವಿಭಾಗಗಳನ್ನು ಅಣಿನೆರೆಸಲಿದೆ.

○

ಆಗಸ್ಟ್ 20ರ ಮಹಾಸಮರಕ್ಕೆ .....

ಪುಟ 8 ರಿಂದ

5. ಸರ್ಕಾರಿ ಸೇವೆಗಳಲ್ಲಿ ನೇಮಕಾತಿ ಮೇಲಿನ ನಿರ್ಬಂಧವನ್ನು ಹಿಂತೆಗೆಯಬೇಕು. 6ನೇ ವೇತನ ಆಯೋಗದಲ್ಲಿರುವ ಎಲ್ಲಾ ನಕರಾತ್ಮಕ ಮತ್ತು ತಾರತಮ್ಯದ ಅಂಶಗಳನ್ನು ತೆಗೆದು, ಅದನ್ನು ಎಲ್ಲಾ ನೌಕರ ಸಂಘಗಳ ಜೊತೆ ಸಮಾಲೋಚನೆ ನಡೆಸಿದ ಬಳಿಕ ಜಾರಿಗೊಳಿಸಬೇಕು. ಗ್ರಾಮೀಣ ಅಂಚೆ ಸೇವಕರ ಸೇವೆಯನ್ನು ಖಾಯಂಗೊಳಿಸಿ ಅವರಿಗೆ ಪಿಂಚಣಿ ಮಂಜೂರು ಮಾಡಬೇಕು.

6. ಗುತ್ತಿಗೆ ಕಾರ್ಮಿಕರನ್ನು ಒಳಗೊಂಡಂತೆ ಕೇಂದ್ರ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಸಂಬಂಧಿಸಿದ ವೇತನ ಮಾತುಕತೆಯನ್ನು ಕೂಡಲೇ ಕೈಗೊಂಡು ಶರತ್ತುಗಳಿಲ್ಲದೆ ಇತ್ಯರ್ಥಗೊಳಿಸಬೇಕು.

ಇಲ್ಲಿ ಕಾರ್ಮಿಕ ವರ್ಗದ ಎಲ್ಲಾ ಬೇಡಿಕೆಗಳನ್ನು ಪ್ರಸ್ತಾಪಿಸಿಲ್ಲ, ಆದರೆ ಕಾರ್ಮಿಕ ವರ್ಗದ ಮನಗಳನ್ನು ಬಾಧಿಸುತ್ತಿರುವ ಕೆಲವು ಜ್ವಲಂತ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸುವ ಅಗತ್ಯವನ್ನು ಒತ್ತಿ ಹೇಳಿದೆ ಎಂದು ಸಿಐಟಿಯು ಅಧ್ಯಕ್ಷರಾದ ಡಾ. ಎಂ.ಕೆ. ಪಂಧೆ ಹೇಳುತ್ತಾರೆ. ಇದರಲ್ಲಿ ಗ್ರಾಮೀಣ ಪ್ರದೇಶದ ದುಡಿಮೆಗಾರರಾದ ರೈತಾಪಿ ಜನಗಳ ಬೇಡಿಕೆಯೂ ಪ್ರಮುಖವಾಗಿರುವುದನ್ನು ಗಮನಿಸಬೇಕು.

ಐಕ್ಯ ಆಂದೋಲನ

ಜಾಗತೀಕರಣದ ನೀತಿಗಳ ವಿರುದ್ಧ ಭಾರತದಲ್ಲಿ ಒಂದು ಐಕ್ಯ ಆಂದೋಲನ ಮೂಡಿ ಬಂದಿದ್ದು ಇದುವರೆಗೆ ಹನ್ನೊಂದು ಸಾರ್ವತ್ರಿಕ ಮುಷ್ಕರಗಳನ್ನು ಸಂಘಟಿಸಲಾಗಿದೆ. ಈ ಎಲ್ಲಾ ಮುಷ್ಕರಗಳಲ್ಲಿ ಕಾರ್ಮಿಕ ವರ್ಗದ ತಕ್ಷಣದ ಆರ್ಥಿಕ ಬೇಡಿಕೆಗಳಿಗಿಂತ ಹೆಚ್ಚಾಗಿ ದೇಶದ ದುಡಿಯುವ ಜನಗಳ ಸಾರ್ವತ್ರಿಕ ಬೇಡಿಕೆಗಳೇ ಪ್ರಾಧಾನ್ಯತೆ ಪಡೆಯುತ್ತವೆ ಎಂಬುದು ಗಮನಾರ್ಹ. ನೀತಿ-ಧೋರಣೆಗಳ ಪ್ರಶ್ನೆಗಳ ಮೇಲೆ ರಾಷ್ಟ್ರವ್ಯಾಪಿ ಹೋರಾಟಗಳನ್ನು ನಡೆಸಲು ಸಿದ್ಧವಾಗಿರುವಂತಹ ಒಂದು ಪ್ರಜ್ಞೆ ದೇಶದ ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿರುವುದನ್ನು ಇದು ತೋರಿಸುತ್ತದೆ ಎಂದು ಡಾ. ಪಂಧೆ ಹೇಳುತ್ತಾರೆ.

ಇದುವರೆಗೆ ನಡೆದ ಹನ್ನೊಂದು ಸಾರ್ವತ್ರಿಕ ಮುಷ್ಕರಗಳ ದಿನಾಂಕಗಳು ಹೀಗಿವೆ:

1. ನವಂಬರ್ 29, 1991
2. ಜೂನ್ 16, 1992
3. ಸಪ್ಟೆಂಬರ್ 9, 1993
4. ಸಪ್ಟೆಂಬರ್ 29, 1994
5. ಡಿಸೆಂಬರ್ 11, 1998
6. ಮೇ 11, 2000
7. ಎಪ್ರಿಲ್ 16, 2002
8. ಮೇ 21, 2003
9. ಫೆಬ್ರುವರಿ 24, 2004
10. ಸಪ್ಟೆಂಬರ್ 29, 2005
11. ಡಿಸೆಂಬರ್ 14, 2006.

ಇದಲ್ಲದೆ ಸಿಐಟಿಯು ಕರೆಯಂತೆ ಹೊಸ ಪೆನ್ಶನ್ ಯೋಜನೆಯ ವಿರುದ್ಧ ಫೆಬ್ರುವರಿ 23, 1996 ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ನಡೆಯಿತು. ಮತ್ತೆ ಅಗಸ್ಟ್ 8, 2007ರಂದು ಅಸಂಘಟಿತ ವಲಯದ ಕಾರ್ಮಿಕರ ಮೊದಲ ಅಖಿಲ ಭಾರತ ಕರ್ಯಾಚರಣೆ ಸಿಐಟಿಯು ಕರೆಯ ಮೇರೆಗೆ ನಡೆಯಿತು. ಇದರಲ್ಲಿ ಇತರ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಕಾರ್ಮಿಕರೂ ಭಾಗವಹಿಸಿದರು.

ಈ ಎಲ್ಲಾ ಕಾರ್ಯಾಚರಣೆಗಳು ನವ-ಉದಾರವಾದಿ ನೀತಿಗಳ ವಿರುದ್ಧ ಕಾರ್ಮಿಕರ ಹೆಚ್ಚುತ್ತಿರುವ ಪ್ರತಿರೋಧಕ್ಕೆ ಸಾಕ್ಷಿ. ಕಾರ್ಮಿಕರಲ್ಲಿ ಅಸಂತೃಪ್ತಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅಗಸ್ಟ್ 20 ರ ಸಾರ್ವತ್ರಿಕ ಮುಷ್ಕರ ಇನ್ನೂ ವ್ಯಾಪಕವಾಗಿ ನಡೆಯುವ ನಿರೀಕ್ಷೆಯಿದೆ.

ಈ ನಡುವೆ ಹಣದುಬ್ಬರ 12 ಶೇಕಡಾವನ್ನೂ ದಾಟಿದೆ. ಮತ್ತು ಎಡಪಕ್ಷಗಳು ಯುಪಿಎ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡ ನಂತರ ಈ ಸರಕಾರ ನವ-ಉದಾರವಾದಿ ನೀತಿಗಳನ್ನು ಭರದಿಂದ ಜಾರಿಗೆ ತರುವ ತರಾತುರಿಯನ್ನು ತೋರಿಸುತ್ತಿದೆ. ಕಾರ್ಮಿಕ ವರ್ಗ ಎತ್ತಿರುವ ಪ್ರಶ್ನೆಗಳು ಇತರ ಎಲ್ಲಾ ವಿಭಾಗಗಳನ್ನೂ ತಟ್ಟುತ್ತಿರುವುದರಿಂದ ಕೃಷಿ ಕೂಲಿಕಾರರು, ರೈತರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಯುವಜನರೂ ಇದಕ್ಕೆ ಬೆಂಬಲ ನೀಡುತ್ತಿದ್ದಾರೆ.

■

ಅಡ್ಡಗೋಡೆಗಳನ್ನೊಡೆದು ಬೆಳಗಿದ ಹಣತೆಗಳು

ಪುಟ 3 ರಿಂದ

ಅಕ್ರಮ ಹಣದಿಂದಲೇ ರಾಜಕಾರಣವನ್ನು ವ್ಯಾಪಾರೀಕರಣಗೊಳಿಸಿ ಅಧಃಪತನಕ್ಕೆ ತಳ್ಳಿರುವುದು ತಿಳಿದದ್ದೇ ಅಗಿದೆ. ಇವರ ಕೃಪಾಶೀರ್ವಾದದಲ್ಲೇ ಮುಖ್ಯಮಂತ್ರಿ ಯಡಿಯೂರಪ್ಪನವರು ಅಧಿಕಾರ ಗಳಿಸಲು, ಬಹುಮತ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇಡೀ ಜಗತ್ತೇ ಈ ಅಕ್ರಮಗಣಿಗಾರಿಕೆ ಸತ್ಯವನ್ನು ತಿಳಿದಿರುವ ಬೆನ್ನಲ್ಲಿಯೇ ಕರ್ನಾಟಕ ಲೋಕಾಯುಕ್ತರು ಅಕ್ರಮಗಣಿಗಾರಿಕೆಯ ಬಗ್ಗೆ ನೀಡಿದ ಮಧ್ಯಂತರ ವರದಿಯು ಇಂತಹ ಅಕ್ರಮವನ್ನು ಗುರುತಿಸಿದೆ. ಇದು ತಡೆಯಲು ಆಗದಿರುವುದರ ಬಗ್ಗೆ ಸರ್ಕಾರದತ್ತಲೇ ಬೊಟ್ಟು ಮಾಡಿದೆ. ಹೈಕೋರ್ಟ್ ಸಹ ರಾಷ್ಟ್ರೀಕರಣದ ಚಿಂತನೆಗೆ ಒತ್ತು ನೀಡಿದ್ದರೆ, ಲೋಕಾಯುಕ್ತರು ರಾಷ್ಟ್ರೀಕರಣವೊಂದೇ ಸಾಲದು, ಮೂಲತಃ ವಿದೇಶಕ್ಕೆ ರಫ್ತು ಮಾಡುವುದನ್ನು ನಿರ್ಬಂಧಿಸಬೇಕು, ಗಣಿಗಾರಿಕೆಯನ್ನು ಸರ್ಕಾರದ ಸ್ವಾಮ್ಯದ ಕಂಪನಿಗಳು ನಡೆಸಬೇಕು ಎಂದಿದ್ದು ಒಂದಡೆ ಹೈಕೋರ್ಟ್, ಇನ್ನೊಂದೆಡೆ ಲೋಕಾಯುಕ್ತರು, ಮತ್ತೊಂದೆಡೆ ಅಕ್ರಮ ಗಣಿಗಾರಿಕೆ, ನೈಸರ್ಗಿಕ ಸಂಪನ್ಮೂಲ ಲೂಟಿ ನಿಲ್ಲಿಸಿ ಜನರ ಬದುಕು ಉಳಿಸಿ ಎಂದು ನಡೆಯುತ್ತಿರುವ ವ್ಯಾಪಕ ಜನ ಚಳುವಳಿಗಳ ಒತ್ತಡ ಹೀಗೆ ಯಡಿಯೂರಪ್ಪ ಸರ್ಕಾರ ತಾನು ಅಕ್ರಮಗಣಿಗಾರಿಕೆಯ ವಿರುದ್ಧ ಕ್ರಮ ವಹಿಸುತ್ತಿದ್ದೇನೆ ಎಂದು ತೋರಿಸಲು ಈ ಕಿರುನಾಟಕ ಆಡುತ್ತಿದೆ. ಅರಣ್ಯ ಇಲಾಖೆಯೇ ಈ ಹಿಂದೆ ನೀಡಿದ ವರದಿಯನ್ನು ಅನುಸರಿಸಿ ಅವರು ಕ್ರಮ ವಹಿಸಿದರೆ ತಿಮಿಂಗಲಗಳನ್ನು ಪತ್ತೆ ಹಚ್ಚಿ ಮಟ್ಟ ಹಾಕಬಹುದು. ಅದರೆ ಈಗಲೂ ಸರ್ಕಾರ ಉಪಗ್ರಹ ಬಳಸಿ ಹೊಸದಾಗಿ ಸರ್ವೆ ಮಾಡಲಾಗುವುದು ಎನ್ನುತ್ತದೆ. ಅಲ್ಲಿಯವರೆಗೂ ಕಾಯದೇ? ಈಗಲೂ ಗಣಿಗಾರಿಕೆ ತಡೆಯಬಹುದಲ್ಲ ಎಂದರೆ ಅದಕ್ಕೆ ಮಾತಿಲ್ಲ.

ಗಣಿ ಸಾಮ್ರಾಜ್ಯ?

ಸಚಿವ ಜನಾರ್ಧನ ರೆಡ್ಡಿ ಕಂಪನಿ, ಬಳ್ಳಾರಿಯಲ್ಲಿ ನಡೆಸುತ್ತಿರುವ ಕಾರ್ಯಾಚರಣೆಯ ಹಿಂದೆ ಹಲವು 'ಡೀಲ್' ಗಳ ಲೆಕ್ಕಾಚಾರ ಇದೆಯೆಂದು ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಆಂಧ್ರದಲ್ಲಿ ಇರುವ ತನ್ನ ಗಣಿಗಾರಿಕೆಯಲ್ಲದೇ, ರಾಜ್ಯದಲ್ಲಿಯೂ ಗಣಿ ಸಾಮ್ರಾಜ್ಯ ಸ್ಥಾಪಿಸಲು ರೆಡ್ಡಿ ಸಹೋದರರು ಹೊರಟಿದ್ದಾರೆ. ಪಟ್ಟವಿರುವ ಹೊಲಗಳಲ್ಲಿ ತೆಗೆಯಲಾಗುವ ಕಬ್ಬಿಣದ ಅದಿರು ತಮಗೆ ಸಲ್ಲಬೇಕೆಂಬ ಪ್ರಸ್ತಾಪವೂ ಈ 'ಡೀಲ್' ನಲ್ಲಿದೆ ಎಂದು ಜನ ಹೇಳುತ್ತಾರೆ. ಇಂತಹವುಗಳನ್ನು ಸಮರ್ಥಿಸುತ್ತಿರುವ ಮುಖ್ಯಮಂತ್ರಿಗಳ ಪಾತ್ರ ಏನೂ ಇಲ್ಲವೆಂದು ಹೇಳಲಾದೀತೆ? ತಮ್ಮ ಗಣಿ ಸಾಮ್ರಾಜ್ಯ ಸ್ಥಾಪನೆಗೆ ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ರೆಡ್ಡಿ ಬಗ್ಗೆ ಮುಖ್ಯಮಂತ್ರಿಗಳಿಗೆ ಅರಿವಿಲ್ಲವೇ? ಆದ್ದರಿಂದ ಇಲ್ಲಿರುವುದು ಅವರ ನಡುವಿನ ಸಹಮತ ಎಂದೇ ಹೇಳಲೇಬೇಕಾಗುತ್ತದೆ.

ಆದ್ದರಿಂದ ನಿಜವಾದ ತಿಮಿಂಗಲಗಳ ಮೇಲೆ ಕ್ರಮ ಜರುಗಿಸಬೇಕು. ಗಣಿ ಲೈಸೆನ್ಸ್ ಕಾಯ್ದೆಗೆ ತಿದ್ದುಪಡಿ ತಂದು ಪಟ್ಟಾ ಭೂಮಿಯಲ್ಲಿ ರೈತರು ಇಚ್ಛಿಸಿದರೆ ಡಿಗ್ಗಿಂಗ್‌ಗೆ ಅವಕಾಶ ಕಲ್ಪಿಸಬೇಕು. ಒಟ್ಟಾರೆ ಒಂದು ರಾಷ್ಟ್ರೀಯ ಗಣಿ ನೀತಿ ಕೂಡಲೇ ರೂಪಿಸಬೇಕು. ಆದರೆ ಕೇಂದ್ರ-ರಾಜ್ಯ ಸರ್ಕಾರಗಳು ಇದಕ್ಕೆ ಮೀನಾಮೇಷ ಎಣಿಸುತ್ತಿವೆ ಯಾಕೆ? ಅವರ ಮಾತಿನಲ್ಲಿರುವುದು ಇಲ್ಲಿ ಕೃತಿಗೆ ಬರುತ್ತಿಲ್ಲ. ಇದೂ ಸಹ ಅರ್ಥವಾಗುವಂತಹದ್ದೆ! ಆದ್ದರಿಂದ ಗಣಿಗಾರಿಕೆ ಲೂಟಿಯ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ಇನ್ನೂ ಬಲಗೊಳಿಸಬೇಕು.

ಮೈಸೂರು : ಇವರು ಪಾಲಿಕೆ ಸದಸ್ಯರೋ ? ಬೀದಿ ರೌಡಿಗಳೋ?

ಜಗಮಗಿಸುವ ಮಾಲ್‌ಗಳ ಆಗಮನಕ್ಕಾಗಿ ಕಾತರಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆ ಸದಸ್ಯರು, ಬೀದಿ ಬದಿ ವ್ಯಾಪಾರಿಗಳ ಪರವಾಗಿ ಮಾತನಾಡುವವರ ಮೇಲೆ ಕೈ ಎತ್ತಿದ್ದಾರೆ. ಪೊಲೀಸರು ಲಾಠಿ ಬೀಸಿದ್ದಾರೆ.

ವಿಜಯಕುಮಾರ್, ಮೈಸೂರು

ಮೈಸೂರು ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳು ಸಾವಿರಾರು ಸಂಖ್ಯೆಯಲ್ಲಿದ್ದು ಬಡ, ಕೆಳಮಧ್ಯಮ, ಮಧ್ಯಮ ವರ್ಗದ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ವಸ್ತುಗಳನ್ನು ಮಾರುತ್ತಾರೆ. ತರಕಾರಿ, ಹೂವು, ಹಣ್ಣು, ವೀಳ್ಯದೆಲೆ, ಕರ್ಚಿಫ್, ಕಳ್ಳೆಕಾಯಿ, ಬಟ್ಟೆ, ತಿಂಡಿ, ಊಟ, ಆಟಿಕೆಗಳು, ಕರಕುಶಲ ವಸ್ತುಗಳು ಹೀಗೆ ಎಲ್ಲವನ್ನೂ ಇವರು ಪೂರೈಸುತ್ತಾರೆ. ಈ ವಹಿವಾಟು ತನ್ನದೇ ಒಂದು ಆರ್ಥಿಕತೆಯನ್ನು ಹೊಂದಿದೆ. ಅತಿಯಾದ ಲಾಭವನ್ನು ಬಯಸದೆ ತನ್ನ ಜೀವನ ನಿರ್ವಹಣೆಗಾಗುವಷ್ಟು ಮಾತ್ರ ಸಂಪಾದಿಸುವ ಪ್ರಾಮಾಣಿಕ ಮನೋಭಾವದ ಬೀದಿ ಬದಿ ವ್ಯಾಪಾರಿಗಳು ನಗರದ ಬದುಕಿನ ಅವಿಭಾಜ್ಯ ಅಂಗವಾಗಿ ಹೋಗಿದ್ದಾರೆ. ಹಾಗೆಯೇ ಗ್ರಾಮಗಳ ಸಂತೆಯ ಪರಂಪರೆಯನ್ನು ನಗರಕ್ಕೆ ತಂದಿದ್ದಾರೆ. ಚಿಕ್ಕ ಬಂಡವಾಳದ ನಿರ್ದಿಷ್ಟ ಮಾರುಕಟ್ಟೆಯ ಬಡ ಗ್ರಾಹಕರನ್ನಷ್ಟೇ ಹೊಂದಿರುವ ಒಂದು ವ್ಯವಸ್ಥೆ ತನ್ನ ವ್ಯಾಪಾರವನ್ನು ನಡೆಸುವುದು ಫುಟ್‌ಪಾತಿನಲ್ಲಿ ಸಾರ್ವಜನಿಕ ರಸ್ತೆಗಳ ಬದಿಯಲ್ಲಿ, ಇಲ್ಲಿ ಭವ್ಯ ಮಾಲ್‌ಗಳಿಲ್ಲ, ಜಗಮಗಿಸುವ ದೀಪಗಳಿಲ್ಲ, ಐಷಾರಾಮಿ ಕಾರುಗಳ ಮೈಲುಗಟ್ಟಲೆ ಸಾಲುಗಳಿಲ್ಲ, ಬೀದಿ ದೀಪದ ಕೆಳಗೋ, ಪೆಟ್ರೋಮಾಕ್ಸ್ ಬೆಳಕಿನಲ್ಲೋ ಚೌಕಾಸಿಗೆ ಆಸ್ಪದವಿಲ್ಲದ ಅತಿ ಕಡಿಮೆ ದರದಲ್ಲಿ ಮಾರಾಟ ನಡೆಯುತ್ತದೆ. ಸಾವಿರಾರು ಕುಟುಂಬಗಳ ಬದುಕು ಸಾಗುತ್ತದೆ. ಆದರೆ ಈಗ ಈ ಬದುಕಿಗೆ ಸಂಚಕಾರ ಬಂದೊದಗಿದೆ.

ಸುಂದರಗೊಳಿಸುವ ಹೆಸರಿನಲ್ಲಿ

ಪಾರಂಪರಿಕ ನಗರವೆಂದು ಘೋಷಿತವಾಗಿರುವ ಮೈಸೂರು ನಗರಕ್ಕೀಗ ನೂರಾರು ಕೋಟಿಯಷ್ಟು ಹಣ ನರ್ಮ್ ಯೋಜನೆಯಡಿ ಹರಿದುಬರುತ್ತಿದೆ. ನಗರವನ್ನು ಸುಂದರಗೊಳಿಸುವ ಹೆಸರಿನಲ್ಲಿ ಬಡವರ ಬದುಕನ್ನು ವಿರೂಪಗೊಳಿಸಲಾಗುತ್ತಿದೆ. ಫುಟ್‌ಪಾತ್‌ಗಳನ್ನು ತೆರವುಗೊಳಿಸುವ ಕ್ರಮವಾಗಿ ಬೀದಿ ಬದಿ ವ್ಯಾಪಾರಸ್ತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. 'ಧನುಷ್' ವಾಹನಗಳಲ್ಲಿ ಬಂದಿಳಿಯುವ ಪಾಲಿಕೆಯ ನೌಕರರು ಪೊಲೀಸ್ ಸುಪರ್ದಿಯಲ್ಲಿ ಸಾಮಾನುಗಳನ್ನು ಹೊತ್ತೊಯ್ಯುತ್ತಿದ್ದಾರೆ. ಬಡವರ ಮಾರ್ಕೆಟ್ ಬಡವಾಗಿದೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ದಾಳಿಗಳು ತೀವ್ರವಾದಂತೆಲ್ಲ ಬೀದಿ ಬದಿ ವ್ಯಾಪಾರಿಗಳು ಸಂಘಟಿತರಾಗುವ ನಿರ್ಧಾರ ಕೈಗೊಂಡರು. ಈ ಸಂಘಟನೆಯನ್ನು ಆದರ ಹೋರಾಟದ ಕ್ರಮಗಳನ್ನು-ನಿರ್ಧರಿಸುವ ಹೊಣೆ ಹೊತ್ತ ಸಿಐಟಿಯು ಅವರಿಗೆ ನಾಯಕತ್ವ ನೀಡಿತು. ಸಿಐಟಿಯು ಜಿಲ್ಲಾ ಸಮಿತಿಯ ಪದಾಧಿಕಾರಿಗಳಲ್ಲೊಬ್ಬರಾದ ಲಿಂಗರಾಜು ಈ ಸಂಘದ ಅಧ್ಯಕ್ಷರಾದರು. ಸಂಘವನ್ನು ರಚಿಸುವ ಪೂರ್ವದಲ್ಲಿ ಬರಲಿರುವ ಅಪಾಯಗಳ ಮನವರಿಕೆಯನ್ನು ಮಾಡಿಕೊಡಲಾಗಿತ್ತು. ಆದರಲ್ಲೂ ಕೆಂಬಾವುಟದಡಿ ಸಂಘಟಿತರಾದಾಗ ಆಳುವ ವರ್ಗಗಳ ಕಣ್ಣುರಿ ಹೆಚ್ಚಾಗುವ ಬಗ್ಗೆಯೂ ಅವರಿಗೆ ತಿಳಿಹೇಳಲಾಗಿತ್ತು. ಈ ಮಧ್ಯೆ ಮಹಾನಗರ ಪಾಲಿಕೆಯು ದಿನವೂ ಫುಟ್‌ಪಾತ್ ತೆರವುಗೊಳಿಸುವಂತೆ ಧ್ವನಿವರ್ಧಕ ಬಳಸಿ ಎಚ್ಚರಿಕೆ ನೀಡುತ್ತಿತ್ತು. ಇದರಿಂದ ಜಾಗ್ರತರಾದ ವ್ಯಾಪಾರಸ್ತರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಒಂದು ಬೃಹತ್ ರ್‍ಯಾಲಿಯ ಮೂಲಕ ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸಿದರು. ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಯ ಬಗ್ಗೆ ಅನುಕಂಪದ ಮಹಾಪೂರವೇ ಹರಿದುಬಂದಿತು. ಇವರನ್ನು ಒಕ್ಕಲೆಬ್ಬಿಸುವ ವಿರುದ್ಧ ಒಂದು ಬಲವಾದ ಜನಾಭಿಪ್ರಾಯ ರೂಪು ಗೊಳ್ಳುತ್ತಿದ್ದಾಗ ಇದರ ಬಗ್ಗೆ ಚರ್ಚಿಸಲು ಮೈಸೂರಿನ ಸಂಸದ ವಿಜಯಶಂಕರ್ ಅಧ್ಯಕ್ಷತೆಯಲ್ಲಿ ಶಾಸಕರು, ಪಾಲಿಕೆ ಸದಸ್ಯರು, ಪಾಲಿಕೆ ಅಧಿಕಾರಿಗಳು, ಪೊಲೀಸ್ ಆಯುಕ್ತರು ಮತ್ತು ಬೀದಿ ಬದಿ ವ್ಯಾಪಾರಿಗಳ ಸಂಘದ ಪ್ರತಿನಿಧಿಗಳ ಸಭೆಯನ್ನು ಪಾಲಿಕೆಯ ಸಭಾಂಗಣದಲ್ಲಿ ಆಗಸ್ಟ್ 11,2008 ರಂದು ಸಂಜೆ ಕರೆಯಲಾಗಿತ್ತು.

ಈ ಸಭೆಗೆ ಮೌಖಿಕವಾಗಿ ಆಹ್ವಾನಿತರಾಗಿದ್ದ ಲಿಂಗರಾಜು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಂಘದ ಪ್ರತಿನಿಧಿಗಳನ್ನು ಹೊರಗಿಟ್ಟು ಸಭೆ ನಡೆಸಲು ಮುಂದಾದಾಗ ಲಿಂಗರಾಜು ಪಟ್ಟು ಹಿಡಿದು ಅಲ್ಲೇ ಕುಳಿತರು. ಪೊಲೀಸ್ ಆಯುಕ್ತರು ಕಾನೂನಿನ ಪ್ರಕಾರ ಫುಟ್‌ಪಾತ್ ತೆರವು ಮಾಡಿಸುವುದು ತಮ್ಮ ಜವಾಬ್ದಾರಿಯಾಗಿದೆ ಎಂದಷ್ಟೇ ಹೇಳಿ ಸಭೆಯಿಂದ ನಿರ್ಗಮಿಸಿದರು. ಸಭೆಯಲ್ಲಿ ಬೀದಿ ಬದಿ ವ್ಯಾಪಾರಸ್ತರನ್ನು ಒಕ್ಕಲೆಬ್ಬಿಸುವ ಕುರಿತು ಚರ್ಚೆ ತೀರ್ಮಾನಗಳಾಗಿ ನೆಪಕ್ಕೆ ಒಂದು ಸಮಿತಿಯನ್ನು ರಚಿಸಲಾಯಿತು. ಇದೆಲ್ಲವನ್ನೂ ಗಮನಿಸುತ್ತಿದ್ದ ಲಿಂಗರಾಜು ಜನಪ್ರತಿನಿಧಿಗಳನ್ನು ಉದ್ದೇಶಿಸಿ ಬಡಜನರ ಹೊಟ್ಟೆಯ ಮೇಲೆ ಹೊಡೆಯದಂತೆ, ಅವರಿಗೆ ವ್ಯಾಪಾರ ಮಾಡಿಕೊಳ್ಳಲು ಅವಕಾಶ ನೀಡಬೇಕೆಂದು ವಾದಿಸಿದರು. ಜನರ ಹಿತ ಕಾಯದ ನೀವೆಂಥ ಜನಪ್ರತಿನಿಧಿಗಳು ಎಂದು ಪ್ರಶ್ನಿಸಿದರು. ಈ ಹೇಳಿಕೆಯಿಂದ ಅಪಮಾನಿತರಾದವರಂತೆ ಭಾವಿಸಿದ ಪಾಲಿಕೆ ಸದಸ್ಯರು ಪಕ್ಷಬೇದ ಮರೆತು ಎಲ್ಲರೂ ಒಂದಾಗಿ ಲಿಂಗರಾಜು ಮೇಲೆ ದೈಹಿಕ ಹಲ್ಲೆ ಮಾಡಿ ನಿನ್ನನ್ನು ಮುಗಿಸಿಯೇ ಬಿಡುತ್ತೇವೆಂದು ಬೆದರಿಕೆಯೊಡ್ಡಿದರು. ಶಾಸಕ ತನ್ವೀರ್‌ಸೇಟ್‌ನ ಹಿಂಬಾಲಕರು, ಬಿಜೆಪಿ ಪಾಲಿಕೆ ಸದಸ್ಯ ನಂದೀಶ್ ಪ್ರೀತಮ್ (ಶಾಸಕ ಶಂಕರ ಲಿಂಗೇಗೌಡರ ಮಗ) ಈ ಹಲ್ಲೆಯ ಮುಂದಾಳತ್ವ ವಹಿಸಿದ್ದರು. ಲಿಂಗರಾಜುವನ್ನು ಬಿಡಿಸಿಕೊಂಡ ಪೊಲೀಸರು ಸುಮಾರು ಎರಡು ಗಂಟೆಗಳ ಕಾಲ ಪಾಲಿಕೆಯಲ್ಲಿಯೇ ತಮ್ಮ ವಶದಲ್ಲಿ ಇರಿಸಿಕೊಂಡು ನಂತರ ಠಾಣೆಗೆ ಕರೆಯೊಯ್ಯಲು ಪಾಲಿಕೆಯ ಹೊರಗಡೆ ಬಂದಾಗ ಅಲ್ಲಿ ಸೇರಿದ್ದ ನೂರಾರು ಬೀದಿ ಬದಿ ವ್ಯಾಪಾರಿಗಳು ಲಿಂಗರಾಜುವನ್ನು ಬಂಧಿಸದಂತೆ ತಕ್ಷಣವೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದಾಗ ಪೊಲೀಸರು ಅಪ್ರಚೋದಿತವಾಗಿ ಲಾಠಿ ಬೀಸಿದ್ದಾರೆ. ರಾತ್ರಿ 9.30 ಗಂಟೆಗೆ ಕೃಷ್ಣರಾಜ ಠಾಣೆಗೆ ಲಿಂಗರಾಜುವನ್ನು ಕರೆತಂದ ಪೊಲೀಸರು ಸೆಕ್ಷನ್ 323, 504 ಮತ್ತು 506 ಪ್ರಕಾರ ಮೊಕದ್ದಮೆ ಹೂಡಿ ನ್ಯಾಯಾಧೀಶರ ಮುಂದೆ ಅಂದೇ ಮಧ್ಯರಾತ್ರಿ ಕರೆದೊಯ್ದು ನ್ಯಾಯಾಧೀಶರು ಲಿಂಗರಾಜುವನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಲಿಂಗರಾಜು ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಪಾಲಿಕೆಯಲ್ಲಿ ಗೂಂಡಾಗಿರಿ ಮೆರೆದ ಪಾಲಿಕೆ ಸದಸ್ಯರೇ ಮುತುವರ್ಜಿ ವಹಿಸಿ ಪಾಲಿಕೆಯ ಅಧಿಕಾರಿಗಳಿಂದಲೇ ದೂರು ಕೊಡಿಸಿದ್ದಾರೆ. ತಾವೇ ಹಲ್ಲೆ ಮಾಡಿದರೂ ಲಿಂಗರಾಜುವೇ ತಮ್ಮ ಮೇಲೆ ಹಲ್ಲೆ ಮಾಡಿದರೆಂದು ಸುಳ್ಳು ದೂರು ನೀಡಲಾಗಿದೆ. ಅಂದೇ ರಾತ್ರಿ ಸಿಐಟಿಯು ಮುಖಂಡರು ಕೃಷ್ಣರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಾಲಾಜಿ ಸಿಂಗ್‌ರನ್ನು ಭೇಟಿ ಮಾಡಿ ಲಿಂಗರಾಜುವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಕೇಳಿದಾಗ ಆ ಅಧಿಕಾರಿ ತನ್ನ ಮೇಲೆ ಹೇರಿರುವ ರಾಜಕೀಯ ಒತ್ತಡದ ಬಗ್ಗೆ ಹೇಳಿದ್ದಾರೆ. ಜನ ಪ್ರತಿನಿಧಿಗಳಾಗಿ ಬಡ ಜನರ ಅಹವಾಲನ್ನು ಸ್ವೀಕರಿಸುವ ಬದಲು ಬೀದಿ ರೌಡಿಗಳಂತೆ ಕಾರ್ಮಿಕ ಸಂಘದ ಪದಾಧಿಕಾರಿಯೊಬ್ಬರ ಮೇಲೆ ಮುಗಿಬಿದ್ದದ್ದು ಆತಂಕಕಾರಿಯಾಗಿದೆ.

ಬಿಜೆಪಿ ಬಂದ ನಂತರ...

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಪರ ಹೋರಾಟಗಳನ್ನು ಪೊಲೀಸ್ ಬಲ



ಬಳಸಿ ಹತ್ತಿಕ್ಕುವುದು ಸಾಮಾನ್ಯವಾಗಿದೆ. ಹಾವೇರಿಯಲ್ಲಿ ರೈತರ ಮೇಲೆ ಗುಂಡಿನ ಮಳೆಗರೆದು, ಸಂತೆಬೆನ್ನೂರು, ದಾವಣಗೆರೆ, ಶಿವಮೊಗ್ಗ, ಧಾರವಾಡಗಳಲ್ಲಿ ರೈತರ ಮೇಲೆ ಲಾಠಿ ಬೀಸಿ, ನೀರಿನ ದರ ಏರಿಕೆಯನ್ನು ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟಿಸಿದ ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಅಮಾನುಷ ದಾಳಿ ನಡೆಸಿ ಈಗ ಮೈಸೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳ ಮೇಲೆ ದೊಣ್ಣೆ ಹಿಡಿದು ಸವಾರಿ ಮಾಡುತ್ತಿದ್ದಾರೆ. ಹೋರಾಟವನ್ನು ಬಗ್ಗುಬಡಿಯಲು ಸುಳ್ಳು ಮೊಕದ್ದಮೆಯನ್ನು ಹೂಡಲಾಗಿದೆ. ಹೋರಾಟದ ಮುಖಂಡತ್ವ ವಹಿಸಿದ ನಾಯಕರನ್ನು ಜೈಲಿಗೆ ತಳ್ಳಿ ಹೋರಾಟ ನಿರತ ಬೀದಿ ಬದಿ ವ್ಯಾಪಾರಿಗಳನ್ನು ಅತಂತ್ರಗೊಳಿಸುವ ಹುನ್ನಾರ ಇದಾಗಿದೆ.

ಬಿಜೆಪಿ, ಕಾಂಗ್ರೆಸ್, ಜನತಾದಳ ಪಕ್ಷಗಳ ಪಾಲಿಕೆ ಸದಸ್ಯರು ಲಿಂಗರಾಜು ಮೇಲೆ ಹಲ್ಲೆ ಮಾಡಿದ್ದಾರಾದರೂ ಏಕೆ ಎಂದು ವಿಶ್ಲೇಷಿಸಿದಾಗ ಮೈಸೂರು ನಗರವನ್ನು ತನ್ನ ಕೈವಶ ಮಾಡಿಕೊಳ್ಳ ಹೊರಟಿರುವ ಭೂಮಾಫಿಯಾ ಕಣ್ಣಿಗೆ ರಾಚುತ್ತದೆ. ಮೈಸೂರು ನಗರದಲ್ಲೀಗ ಇಂಚು ಭೂಮಿಗೂ ಲಕ್ಷಾಂತರ ಬೆಲೆ, ಪಾಲಿಕೆಯ ಮಾಲಿಕತ್ವ ಇರುವ ಹಳೆಯ ಕಟ್ಟಡಗಳಲ್ಲಿ ಸಣ್ಣ ವ್ಯಾಪಾರಸ್ಥರು, ದೊಡ್ಡ ದೊಡ್ಡ ಅಂಗಡಿಗಳವರು ದಶಕಗಳಿಂದ ಬಾಡಿಗೆಗಿದ್ದಾರೆ. ಪಾಲಿಕೆಯ ಮುಂದಿನ ದಾಳಿ ಇವರ ಮೇಲಾಗಲಿದೆ. ಹಳೆಯ ಕಟ್ಟಡಗಳನ್ನು ಖಾಸಗಿಯವರಿಗೆ ವಹಿಸಿ ಬಹುಮಹಡಿ ವಾಣಿಜ್ಯ ಸಂಕೀರ್ಣಗಳನ್ನು, ಮಾಲ್‌ಗಳನ್ನು ಕಟ್ಟಲು ನಿರ್ಧರಿಸಲಾಗುತ್ತಿದೆ. ಈಗಾಗಲೇ ಮಕ್ಕಾಜಿ ಚೌಕದಲ್ಲಿ ಗರುಡಾಮಾಲ್ ನಿರ್ಮಾಣ ಪ್ರಾರಂಭ ವಾಗಿದೆ. ದೇವರಾಜ ಮಾರುಕಟ್ಟೆ ಶಿಥಿಲವಾಗಿದೆ ಎನ್ನುವ ನೆಪವೊಡ್ಡಿ ಅಲ್ಲಿನ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮುಂದುವರೆದಿದೆ. ಹೀಗೆ ನಗರ ಮಧ್ಯದ ಭೂಮಿಯ ಹಸ್ತಾಂತರದಲ್ಲಿ ಕೋಟ್ಯಾಂತರ ರೂಪಾಯಿಗಳು ಕೈ ಬದಲಿಸುವುದರಿಂದ ಪಾಲಿಕೆ ಸದಸ್ಯರು ಪಕ್ಷಬೇಧ ಮರೆತು ತಮ್ಮನ್ನು ಪ್ರಶ್ನಿಸುವವರನ್ನು ಗದುಮುವ ಯತ್ನದಲ್ಲಿದ್ದಾರೆ.

ಬೀದಿ ಬದಿ ವ್ಯಾಪಾರಿಗಳು ದೇಶದ ಅನೌಪಚಾರಿಕ ವಲಯದ ಒಂದು ಬಹುಮುಖ್ಯ ಭಾಗವಾಗಿದ್ದಾರೆ. ಇಡೀ ದೇಶದಲ್ಲಿ ಇವರ ಸಂಖ್ಯೆ 10 ದಶಲಕ್ಷ ಇರಬಹುದೆಂದು ಅಂದಾಜಿಸ ಲಾಗಿದೆ. ಮಹಾನಗರಗಳ ಒಟ್ಟು ಜನಸಂಖ್ಯೆ ಶೇ.2ರಷ್ಟು ಈ ಬೀದಿ ವ್ಯಾಪಾರಿಗಳಿದ್ದಾರೆ. ಮುಂಬೈ, ಅಹ್ಮದಾಬಾದ್, ಕೋಲ್ಕತ್ತಗಳಲ್ಲಿ ನಡೆಸಲಾದ ಸಮೀಕ್ಷೆ ವರದಿ ಮಾಡುವಂತೆ ಈ ರೀತಿ ಸಣ್ಣಪುಟ್ಟ ಬೀದಿ ವ್ಯಾಪಾರದಲ್ಲಿ ತೊಡಗಿರುವ ಜನ ಒಂದು ಕಾಲಕ್ಕೆ ಜವಳಿ ಗಿರಣಿಗಳಲ್ಲಿ, ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ದುಡಿಯುತ್ತಿದ್ದವರು. ಆದರೆ ಗಿರಣಿಗಳು ಮುಚ್ಚಿದಾಗ ಉದ್ಯೋಗ ಕಳೆದುಕೊಂಡ ಈ ಜನ ಆಶ್ರಯಿಸಿದ್ದು ಬೀದಿ ಬದಿ ವ್ಯಾಪಾರವನ್ನು. ಅಹ್ಮದಾಬಾದ್ ನಗರದಲ್ಲಿರುವ ಬೀದಿ ಬದಿ ವ್ಯಾಪಾರಿಗಳಲ್ಲಿ ಶೇ.50 ರಷ್ಟು ಜನ ಹಿಂದೊಮ್ಮೆ ಜವಳಿ ಗಿರಣಿಗಳಲ್ಲಿ ಕೆಲಸಕ್ಕಿದ್ದರು ಎಂದು ಸಮೀಕ್ಷೆ ಹೇಳುತ್ತವೆ. ದೇಶದ ಏಳು ನಗರಗಳಲ್ಲಿ ನಡೆಸಲಾದ ಅಧ್ಯಯನದಂತೆ ಇವರ ದಿನಂಪ್ರತಿ ತಲಾವಾರು ಸರಾಸರಿ ಆದಾಯ ಕೇವಲ ರೂ.40 ರಿಂದ ರೂ.80 ಮಾತ್ರ ಮಹಿಳೆಯರು ಇನ್ನೂಕಡಿಮೆ ಗಳಿಸುತ್ತಿದ್ದಾರೆ.

ಸುಪ್ರೀಂಕೋರ್ಟಿನ ಐತಿಹಾಸಿಕ ತೀರ್ಪು

ಒಂದು ದಶಕದ ಹಿಂದೆ ನವದೆಹಲಿ ನಗರಪಾಲಿಕೆಯು ಒಬ್ಬ ಸಾಮಾನ್ಯ ಬೀದಿ ಬದಿ ವ್ಯಾಪಾರಿಯಾದ ಸೋಧನ್‌ಸಿಂಗ್‌ನನ್ನು ಜನಪಥ್ ರಸ್ತೆಯಲ್ಲಿ ಬಟ್ಟೆ ವ್ಯಾಪಾರದಲ್ಲಿ ತೊಡಗಿರುವಾಗ ಅಲ್ಲಿಂದ ಹೊರದೂಡಿತು.' ಒಂದು ಸಾರ್ವಜನಿಕ ಹಿತಾಸಕ್ತಿಯ ದಾವೆಯನ್ನು ಸೋಧನ್‌ಸಿಂಗ್ ಸುಪ್ರಿಂ ಕೋರ್ಟಿನಲ್ಲಿ ದಾಖಲಿಸಿದ. ಸಂವಿಧಾನದ ಆರ್ಟಿಕಲ್ 19(1) ಜಿ ಅನ್ವಯ ಖಾತ್ರಿಗೊಳಿಸಲಾದ ತನ್ನ ಮೂಲಭೂತ ಹಕ್ಕನ್ನು ವಿಶೇಷವಾಗಿ ವ್ಯಾಪಾರ ಮಾಡುವ ಹಕ್ಕನ್ನು ಮೊಟಕುಗೊಳಿಸಲಾಗಿದೆ ಎಂದು ಹೇಳಿದ. ಸುಪ್ರಿಂ ಕೋರ್ಟ್ ಸೋಧನ್‌ಸಿಂಗ್‌ನ ವಾದವನ್ನು ಆಲಿಸಿ ಒಂದು ಮಹತ್ವದ ತೀರ್ಪನ್ನು ನೀಡುತ್ತದೆ.

"ಸಂದರ್ಭಗಳ ಒತ್ತಡವನ್ನು ಸರಿಯಾಗಿ ನಿಯಂತ್ರಿಸಿದಲ್ಲಿ ದಿನಬಳಕೆಯ ವಸ್ತುಗಳನ್ನು ಜನಸಾಮಾನ್ಯರಿಗೆ ತುಲನಾತ್ಮಕವಾಗಿ ಕಡಿಮೆ ದರದಲ್ಲಿ ಒದಗಿಸುವ ಮೂಲಕ ಅವರಿಗೆ ಆರಾಮ ಅನುಕೂಲತೆಗಳನ್ನು ಬೀದಿ ಬದಿ ವ್ಯಾಪಾರಿಗಳು ಹೆಚ್ಚಿಸುತ್ತಾರೆ. ಶ್ರೀಮಂತನಲ್ಲದ ಒಬ್ಬ ಜನಸಾಮಾನ್ಯ ದಿನದ ದುಡಿಮೆ ಮುಗಿಸಿ ಮನೆಗೆ ಹೋಗುವ ಅವಸರದಲ್ಲಿ ಮಾರುಕಟ್ಟೆಗೆ ಹೋಗಲಾಗದೆ ಇಲ್ಲಿ ವಸ್ತುಗಳನ್ನು ಖರೀದಿಸುತ್ತಾನೆ. ಸಂವಿಧಾನದ ಆರ್ಟಿಕಲ್ 19(1) ಜಿ ನಲ್ಲಿ ಖಾತ್ರಿಗೊಳಿಸಲಾದ ವ್ಯಾಪಾರ ಮಾಡುವ ಹಕ್ಕನ್ನು ಬೀದಿ ಬದಿಯಲ್ಲಿ ಸರಿಯಾಗಿ ನಿಯಂತ್ರಿಸಿ ಅವಕಾಶ ಮಾಡಿಕೊಡಬೇಕು. ರಸ್ತೆಗಳು ಕೇವಲ ಹಾದುಹೋಗಲು ಮಾತ್ರ ಬೇರೆ ಯಾವುದಕ್ಕೂ ಅಲ್ಲ ಎಂದು ಹೇಳಿ ನಿರಾಕರಿಸಬಾರದು.

(ಸೋಧನ್‌ಸಿಂಗ್ V/s NDMC 1989)

ಜನಶಕ್ತಿ ಕನ್ನಡ ವಾರಪತ್ರಿಕೆ

ಆಗಸ್ಟ್ 24, 2008

“ಮನದ ಸೂತಕ ಹಿಂಗಿಸಲಾದೀತೆ?”

ಇವಳು ತನಗೆ ಮಕ್ಕಳಾಗಿಲ್ಲವೆಂದು ಮನೆಗೆ ದೀಪ ಹಚ್ಚುವವರು ದಿಕ್ಕಿಲ್ಲವೆಂಬಂತೆ ಆಗಬಾರದೆಂದು ತನ್ನ ಗಂಡನೊಂದಿಗೆ ಹುಚ್ಚಿಯ ಮದುವೆ ಮಾಡಿರುವಳಂತೆ. ಮುದುಕನಿಗೆ ಅರವತ್ತು ವಯಸ್ಸಿನ ಆಸುಪಾಸಿನಲ್ಲಿರುವಾಗ ಈ ಹುಡುಗಿ ದೊಡ್ಡವಳಾದಳಂತೆ. ಹೇಗೂ ತನ್ನ ಮಕ್ಕಳಿಲ್ಲ ಮತ್ತು ಈ ಹುಚ್ಚಿಗೆ ಅನ್ನವಂತೂ ಹಾಕಬೇಕಲ್ಲ, ಪುಗಸಟ್ಟೆ ಅನ್ನ ಏಕೆ ಹಾಕಬೇಕು? ಎರಡು ಮಕ್ಕಳಾದರೂ ಹಡೆದು ಋಣ ತೀರಿಸಲಿ ಎಂದು ಊರಿನ ಹಿರಿಯರು ಸೇರಿ ಈ ಮದುವೆ ಮಾಡಿಸಿದಂತೆ.

ಡಾ. ಮೀನಾಕ್ಷಿ ಬಾಳಿ

ಇದೇ ಮೇ ತಿಂಗಳಿನಲ್ಲಿ ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕು ಸಮಿತಿಯು ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತೆಯರಿಗಾಗಿ ಅಧ್ಯಯನ ಶಿಬಿರವೊಂದನ್ನು ಏರ್ಪಡಿಸಿತ್ತು. ಅಲ್ಲಿ ಸುತ್ತಲಿನ ಹಳ್ಳಿಗಳಿಂದ ಸಾಮಾನ್ಯ ಮಹಿಳೆಯರು ತಮ್ಮ ಬದುಕಿನ ಹಕ್ಕಿನ ಹಂಬಲಕ್ಕಾಗಿ ನೆರೆದಿದ್ದರು. ಅವರೆಲ್ಲ ಕಳೆದ ಎರಡು ವರ್ಷಗಳಿಂದ ಉದ್ಯೋಗ ಖಾತ್ರಿ ಕಾಯ್ದೆಗಾಗಿ ಸಂಘರ್ಷ ನಡೆಸಿ ಕೂಲಿ ಪಡೆದವರಾಗಿದ್ದರು. ಅಧಿಕಾರಶಾಹಿ ಮತ್ತು ಆಡಳಿತಶಾಹಿ ಪ್ರತಿನಿಧಿಗಳೊಂದಿಗೆ ನಿರಂತರ ಗುದ್ದಾಡಿಯೇ ಕೆಲಸ ಪಡೆಯಲು ಸಾಧ್ಯವಾಗಿತ್ತು. ಆದಾಗ್ಯೂ ಅವರಲ್ಲಿ ಇನ್ನು ಅನೇಕರಿಗೆ ಕೆಲಸ ಸಿಕ್ಕಿರಲಿಲ್ಲ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡಿದರೂ ಕೂಲಿ ಸಿಕ್ಕಿರಲಿಲ್ಲ. ಕೆಲವೊಂದೆಡೆ ಸುಳ್ಳು ಹಾಜರಿಗಳನ್ನು ಭರ್ತಿ ಮಾಡಿ ಸ್ಥಳೀಯ ಪ್ರತಿನಿಧಿಗಳು ಹಣವನ್ನು ಲಪಟಾಯಿಸಿದ್ದರು. ಇನ್ನು ಹತ್ತಾರು ಕಡೆ ಯಂತ್ರಗಳನ್ನು ಬಳಸಿ ಕೆಲಸ ಮಾಡಿಸಿ ದುಡಿಯುವವರ ಅನ್ನ ಕಸಿದುಕೊಳ್ಳಲಾಗಿತ್ತು. ಮತ್ತೂ ಕೆಲವೊಂದೆಡೆ ಕೆಲಸ ಕೇಳಲೆಂದು ಬಂದ ಕೂಲಿಕಾರರನ್ನು ಬೆದರಿಸಿ, ಗದರಿಸಿ ದೂರ ಅಟ್ಟಲಾಗಿತ್ತು. ಸ್ಥಳೀಯ ಮರಿ-ಕಿರಿ ಪುಢಾರಿಗಳು ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲಾಗದಂತೆ ತಮ್ಮ ಶಕ್ತ್ಯಾನುಸಾರ ಪ್ರಯತ್ನ ನಡೆಸಿದ್ದರು. ಈ ಎಲ್ಲ ಜ್ವಲಂತ ಸಮಸ್ಯೆಗಳನ್ನು ಕುರಿತು ಚರ್ಚಿಸಲೆಂದು ಕೃಷಿ ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಜಂಟಿಯಾಗಿ ಸಂವಾದ ಶಿಬಿರವೊಂದನ್ನು ಹಮ್ಮಿಕೊಂಡಿದ್ದವು.

ಕಿರುಚುವ ಶಬ್ದ

ಉದ್ಯೋಗ ಖಾತ್ರಿ ಕಾಯ್ದೆ ಜಾರಿಗೊಳಿಸಿದ್ದರ ಹಿನ್ನೆಲೆ, ಈ ಕಾಯ್ದೆಯ ಬಳಕೆಯಿಂದಾಗುವ ಅಭಿವೃದ್ಧಿಯ ಸಾಧ್ಯತೆ. ಸದರಿ ಕಾಯ್ದೆಯ ಅನುಷ್ಠಾನದಲ್ಲಿ ಎದುರಾಗುತ್ತಿರುವ ಅಡ್ಡಿ-ಆತಂಕಗಳು ಮತ್ತು ಅವುಗಳಿಗೆ ಕಾರಣಗಳು ಕುರಿತು ವಿಷಯ ತಜ್ಞರು ಪಾಠ ಮಾಡುತ್ತಿದ್ದರು. ಹೀಗೆ ಪಾಠ ಮಾಡುತ್ತಿರುವಾಗಲೇ ಜನರನ್ನು ಸಂವಾದಕ್ಕೆ ಎಳೆಯಲಾಗಿತ್ತು. ಜನಸಾಮಾನ್ಯರಿಂದ ಮಾತನಾಡಿಸುವ ಮೂಲಕವೇ ಸಮಸ್ಯೆಯ ಸಂಕೀರ್ಣತೆಯನ್ನು ಭೇದಿಸುವ ಪ್ರಯತ್ನ ನಡೆದಿತ್ತು. ತನ್ಮೂಲಕವೇ ಸಂಘಟನೆ ಏಕೆ ಕಟ್ಟಬೇಕು? ಆಯಾ ಧುಡಿಮೆ ವರ್ಗದವರ ಸಂಘಟನೆ ಕಟ್ಟುವ ಮೂಲಕ ಹೋರಾಟವನ್ನು ಹೇಗೆ ಅಣಿ ನೆರೆಸಬೇಕು? ಹೋರಾಟದ ಮೂಲಕವೇ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೇಗೆ ಸಾಧ್ಯವಾಗುತ್ತದೆ. ಎಂಬಿತ್ಯಾದಿ ಪ್ರಾಯೋಗಿಕ ಚರ್ಚೆ ನಡೆದಿರುವಾಗಲೇ ಮೂಲೆಯೊಂದರಿಂದ ಜೋರಾಗಿ ಕಿರಿಚುವ ಶಬ್ದ ಬರತೊಡಗಿತ್ತು. ಅದು ಸುಮಾರು 18-20ರ ನಡುವಿನ ಹರೆಯದ ಮಹಿಳೆಯೊಬ್ಬಳ ವಿಕಾರ, ವಿಕೃತ ಅಳುವಿನ ಧ್ವನಿಯಾಗಿತ್ತು. ಅಳುವು ಅಂದರೆ ಅದೂ ಅಳುವು ಆಗಿರಲಿಲ್ಲ. ಒಂದು ನಮೂನಿ ಹುಚ್ಚು ಅರಚಾಟವಾಗಿತ್ತು. ಹೌದು ಆಕೆ ಹುಚ್ಚಿಯಾಗಿದ್ದಳು. ಭರ್ತಿ ಜವಾನಿಯಿಂದ ಬೀಗುತ್ತಿರುವ ದೇಹದ ಉನ್ಮಾದ ಅವಳ ಮಾನಸಿಕ ಅಸ್ವಸ್ಥತೆಯನ್ನು ಮೀರಿತೊನೆಯ ತೊಡಗಿತ್ತು. ಚರ್ಚೆಯಿಂದ ಸರಿದು ಎಲ್ಲರ ಗಮನ ಅವಳ ಕಡೆಗೆ ಹರಿಯಿತು. ಯಾರೋ ಅಂದರು, ‘ಅಯ್ಯಾ ಬಾಯಾರೇ ಅರೆ ಹುಚ್ಚಿ ಹಳಾರಿ. ಆಕಿಗೀ ಒಂದ್ ರೂಪಾಯಿ ಬಂದಿ ಕೊಟ್ರ ಸುಮ್ ಇರತಾಳ್ರೀ’?

ಗಡವಂತಿಯವಳು

ಸರಿ ಪಕ್ಕದ ಮಹಿಳೆಯೋರ್ವಳು ತನ್ನ ಚಂಚಿಯಿಂದ ರೂಪಾಯಿ ನಾಣ್ಯ ತೆಗೆದುಕೊಟ್ಟಳು. ಆಕೆ ಅದನ್ನು ಪಡೆದು ಬ್ರಹ್ಮಾಂಡವೇ ಕೈಗೆಟುಕಿದ ಖುಷಿಯಿಂದ ನಡದೇಬಿಟ್ಟಳು. ಆದರೆ ಹತ್ತು ನಿಮಿಷಕ್ಕೆ ವಾಪಸ್ಸು ಬಂದು ಅದೇ ಮೊದಲಿನ ಧ್ವನಿಯಲ್ಲಿ ಚೀರತೊಡಗಿದಳು. ಮತ್ತದೇ ರೂಪಾಯಿ ಬಂದಿಗಾಗಿ ತಗಾದೆ. ಯಾರೋ ಇನ್ನೊಂದು ನಾಣ್ಯ ಕೊಟ್ಟರು. ಅಷ್ಟೇ ಖುಷಿಯಿಂದ ಹೋದಳು. ಆದರೆ ಮುಂದೆ ಹತ್ತು ಹದಿನೈದು ನಿಮಿಷಕ್ಕೊಮ್ಮೆ ಅವಳ ರಂಪಾಟ ಪುನರಾವರ್ತನೆಯಾಗುತ್ತಲೇ ಇತ್ತು. ಅವಳು ಒಂದರ್ಥದಲ್ಲಿ ಇಡೀ ಸಭೆಯನ್ನು ಅಸ್ತವ್ಯಸ್ತಗೊಳಿಸಿ ಹಾಕಿದ್ದಳು. ಅವಳು ಯಾವ ಊರಿನವಳು, ಯಾರು ಕರೆದುಕೊಂಡು ಬಂದಿದ್ದಾರೆ ಎಂದೆಲ್ಲ ಚೌಕಾಸಿ ನಡೆಯುತ್ತಿರುವಾಗಲೇ ಅವಳು ಪಕ್ಕದ ಗಡವಂತಿ ಊರಿನವಳು ಎನ್ನುವುದು ತಿಳಿಯಿತು. ಅವಳ ಸಂಬಂಧಿಗಳ ಬೆನ್ನುಹತ್ತಿ ಜಿದ್ದಿನಿಂದ ಬಂದಿದ್ದಳು. ಅವಳನ್ನು ನಿಯಂತ್ರಿಸುವಲ್ಲಿ ಶತಾಯ-ಗತಾಯ ಸಾಹಸ ಮಾಡಿ ಅಂತೂ ಆ ದಿನದ ಸಭೆ ಮುಗಿಸಲಾಯಿತು. ಆದರೆ ನನಗೆ ಮಾತ್ರ ಆ ಹುಡುಗಿಯ ಚೀರಾಟ, ಅವಳ ಅಸ್ತವ್ಯಸ್ತ ಧಿರಿಸು, ಅವಳು ಮಾಡುವ ಹಾವ-ಭಾವ. ಅವಳನ್ನು ಕೆಣಕಿದವರಿಗೆ ತನ್ನದೇ ಸ್ವರದಲ್ಲಿ ಬಯ್ಯುವ ಪರಿ, ವಿಶೇಷವಾಗಿ ಅವಳು ಮಾಡುತ್ತಿದ್ದ ಅಶ್ಲೀಲ ಸನ್ನೆ ಇವೆಲ್ಲ ಒಂದು ತಳಮಳವನ್ನು ಹುಟ್ಟಿಸಿದವು. ದೀರ್ಘ ವಿಷಾದವೊಂದು ಮಡುಗಟ್ಟಿ ನಿಂತಂತಾಗಿತ್ತು.

ಮುಂದೆ ತಿಂಗಳೊಪ್ಪತ್ತಿನಲ್ಲಿ ಗಡಿವಂತಿಗೆ ಉದ್ಯೋಗ ಖಾತ್ರಿ ಕಾಯ್ದೆ ಸಭೆಗೆ ಹೋಗುವ ಪ್ರಸಂಗ ಬಂತು. ನಾನು, ಮೀನಾ ಚೋರಾಳ್‌ಕರ್ (ಜನವಾದಿಯ ಕಾರ್ಯಕರ್ತೆ) ಇಬ್ಬರೂ ಸಭೆಯು ನಡೆಯುವ ಸ್ಥಳಕ್ಕೆ ಬರುತ್ತಿರುವಾಗಲೇ ಆ ಹುಡುಗಿ ನಮ್ಮನ್ನು ನೋಡಿ ಜಿಗಿದು ಓಡಿ ಬಂದಳು. ಅದೇ ವಿಕೃತ ಸ್ವರದಲ್ಲಿ ರೂಪಾಯಿ ಕೊಡುವಂತೆ ಸನ್ನೆ ಮಾಡತೊಡಗಿದಳು. ಅವಳನ್ನು ಕಂಡದ್ದೆ ತಡ ಹಳೆಯಗಾಯದ ಹಕ್ಕಳಿಕೆ ಕಿತ್ತಿ ರಕ್ತ ಮತ್ತೆ ಒಸರತೊಡಗಿದಂತೆ ಭಾಸವಾಯ್ತು. ಹೌದಲ್ಲವೇ ಪುರುಷ ಪ್ರಧಾನ ವ್ಯವಸ್ಥೆಯೇ ಮೇಲುಗೈ ಸಾಧಿಸಿರುವ ಈ ನಾಡಿನಲ್ಲಿ ಇಂಥ ಅಸಹಜ(ಅಬ್‌ನಾರ್ಮಲ್), ಅಸಹಾಯಕ ಮಹಿಳೆಯರನ್ನು ಕಾಪಾಡುವವರು ಯಾರು? ಎಂಬ ಪ್ರಶ್ನೆ ಹುಳುವಾಗಿ ಕೊರೆಯತೊಡಗಿತ್ತು. ಅಸಹಾಯಕ, ದುರ್ಬಲ ಮಹಿಳೆಯರಿಗೆಂದೆ ನಡೆಸುತ್ತಿರುವ ಅಬಲಾಶ್ರಮ, ರಿಮಾಂಡ್ ಹೋಂ, ಸಾಂತ್ವನ ಕೇಂದ್ರ ಇವೆಲ್ಲವೂಗಳ ವ್ಯವಸ್ಥೆ ಗೊತ್ತಿರುವಂಥದ್ದು ತಾನೆ? ಮಾನಸಿಕ, ಶಾರೀರಿಕವಾಗಿ ಸದೃಢವಾಗಿರುವ ಮಹಿಳೆಯರಿಗೆ ಸಿಗಬೇಕಾದ ಸೌಲಭ್ಯ, ಆಸರೆಗಳು ಸಿಗದಿರುವಾಗ ಇಂಥ ಹುಚ್ಚಿ ಬಡ ಮಹಿಳೆಯರ ಗತಿ ಏನಾಗಿರಲಿಕ್ಕೆ ಸಾಧ್ಯ ಎಂಬ ಚಿಂತೆಯೊಂದು ಬೇಗುದಿಯಾಗಿ ಕಾಡತೊಡಿಗಿತ್ತು. ಅಷ್ಟರಲ್ಲಿ ನಾವು ಕುಳಿತಿದ್ದ ಕಡೆ ಸುಮಾರು 50-55 ವಯೋಮಾನ ಆಸುಪಾಸಿನ ಮಹಿಳೆಯೊಬ್ಬಳು ಬಂದಳು. ತೀರ ದಯನೀಯವಾಗಿ ಅವಳು ‘ಬಾಯೋರೇ ಈ ಹುಚ್ಚಿಗಿ ಏನರೇ ಸರ್ಕಾರದಿಂದ ರೊಕ್ಕಾ ಬರಂಗ್ ಮಾಡ್ರಿ. ನಮಗ್ ಭಾಳ್ ಹೈರಾಣ ಆದಾರಿ’ ಅಂದ್ಳು. ನಾವು ‘ಹೌದಾ ಸರಿ. ಇಕೀ ನಿನ ಮಗಳೇನವಾ? ಹುಚ್ಚಿ ಹುಡುಗಿಗಿ ಹೀಂಗ್ ಖುಲ್ಲಾ ಬಿಟ್ರ ಹ್ಯಾಂಗವಾ’ ಎಂದು ಕೇಳುತ್ತಿರುವಾಗಲೇ; ಅವಳು ‘ಇಲ್‌ರಿ ಈಕಿ ನಮ್ ಅಣ್ಣನ ಮಗಳ್ ಹಳಾರಿ. ಅಂದ್ರ ನಂಗ್ ಸ್ವಾದರ ಸೊಸಿ ಹಳಾರಿ. ಈಕೀ ಹುಟ್ಟತ್ಲೆ ಇವ್ರ ಅವ್ವ ಸತ್ ಹೋಗ್ಯಾಳ್ರಿ. ನಮ್‌ಣ್ಣ ಮತ್ ಬ್ಯಾರೇ ಮದಿ ಮಾಡಕೊಂಡಾನ್ರೀ. ಇದಕ್ ಯಾರು ದಿಕ್ಕಿಲ್‌ಲ್ದಂಗಾಗಿ ನಂಬಲ್ಲೆ ಇಟ್‌ಕೊಂಡ್ರಿನೀ” ಮಾರುತ್ತಿರಿಸಿದಳು. ಆ ಅಸ್ವಸ್ತ ಹುಡುಗಿ ನಮ್ಮ ಹತ್ತಿರ ಬಂದು ಕುಳಿತು ಏನೇನೋ ಸನ್ನೆ ಮಾಡತೊಡಗಿದಳು. ಅಷ್ಟರಲ್ಲಿ ಸುಮಾರು ಒಂದೂವರೇ ಎರಡು ವರ್ಷದ ಗಂಡು ಮಗುವೊಂದು ಬಂದು ಆ ಹುಚ್ಚ ಹುಡುಗಿಗೆ ಮೊಲೆ ಕುಡಿಸುವಂತೆ ಪೀಡಿಸತೊಡಗಿತ್ತು. ಮಗು ರಚ್ಚೆಯಿಂದ ಅವಳ ಎದೆಗೆ ಕೈ ಹಾಕುತ್ತಿದ್ದರೆ; ಅವಳೋ ಅಷ್ಟೇ ರಭಸವಾಗಿ ಮಗುವನ್ನು ದೂರ ತಳ್ಳುತ್ತಿದ್ದಳು. ಅದಕ್ಕೆ ರಪರಪ ಹೊಡೆಯುತ್ತಿದ್ದಳು. ಅವಳ ಸೋದರತ್ತೆಯಾದ ಈ ಮಧ್ಯ ವಯಸ್ಸಿನ ಮಹಿಳೆಯು ಅವಳಿಗೆ ಏನೇನೋ ಸನ್ನೆ ಮಾಡಿ ಮಗುವಿಗೆ ಹಾಲು ಕುಡಿಸುವಂತೆ ಪುಸಲಾಯಿಸುತ್ತಿದ್ದಳು. ಅಷ್ಟರಲ್ಲಿ ಸುಮಾರು 65-70 ವಯಸ್ಸಿನ ಮುದುಕನೊಬ್ಬ ಆರೇಳು ವರ್ಷದ ಗಂಡು ಮಗುವೊಂದು ಎತ್ತಿಕೊಂಡು ನಮ್ಮ ಬಳಿಗೆ ಬಂದನು. ಆ ಮುದುಕ ಮತ್ತು ಮಗುವನ್ನು ನೋಡಿ ಈ ಹುಡುಗಿ ಇನ್ನಷ್ಟು ಜೋರಾಗಿ ವಿಚಿತ್ರವಾಗಿ ಚೀರತೊಡಗಿದಳು. ನಮಗೆಲ್ಲಾ ಇದೆಲ್ಲಾ ನೋಡಿ ಒಂದು ನಮೂನಿ ಗಾಬರಿ. ಮಧ್ಯವಯಸ್ಸಿನ ಮಹಿಳೆಗೆ ಕೇಳಲಾಗಿ ಅವಳು ಹೇಳಿದ ಸಂಗತಿಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿದವು. ಅವಳು ಹೇಳಿದ್ದೆನೆಂದರೇ ಆ ಎರಡು ಮಕ್ಕಳು ಹುಚ್ಚಿಯ ಹೊಟ್ಟೆಯಿಂದ ಹುಟ್ಟಿವೆ. ಇವಳು ತನಗೆ ಮಕ್ಕಳಾಗಿಲ್ಲವೆಂದು ಮನೆಗೆ ದೀಪ ಹಚ್ಚುವವರು ದಿಕ್ಕಿಲ್ಲವೆಂಬಂತೆ ಆಗಬಾರದೆಂದು ತನ್ನ ಗಂಡನೊಂದಿಗೆ ಹುಚ್ಚಿಯ ಮದುವೆ ಮಾಡಿರುವಳಂತೆ. ಮುದುಕನಿಗೆ ಅರವತ್ತು ವಯಸ್ಸಿನ ಆಸುಪಾಸಿನಲ್ಲಿರುವಾಗ ಈ ಹುಡುಗಿ ದೊಡ್ಡವಳಾದಳಂತೆ. ಹೇಗೂ ತನ್ನ ಮಕ್ಕಳಿಲ್ಲ ಮತ್ತು ಈ ಹುಚ್ಚಿಗೆ ಅನ್ನವಂತೂ ಹಾಕಬೇಕಲ್ಲ. ಪುಗಸಟ್ಟೆ ಅನ್ನ ಏಕೆ ಹಾಕಬೇಕು? ಎರಡು ಮಕ್ಕಳಾದರೂ ಹಡೆದು ಋಣ ತೀರಿಸಲಿ ಎಂದು ಊರಿನ ಹಿರಿಯರು ಸೇರಿ ಈ ಮದುವೆ ಮಾಡಿಸಿರದಂತೆ.

ಈಗ ಹುಚ್ಚು ಹಿಡಿಯುವ ಸರದಿ ನಮ್ಮದಾಗಿತ್ತು.

ಆ ಮಧ್ಯವಯಸ್ಸಿನ ಮಹಿಳೆ, ಮುದುಕ ಮತ್ತು ಎರಡು ಮಕ್ಕಳು ಹುಚ್ಚಿಯೊಂದಿಗೆ ಇಡೀ ಕುಟುಂಬ ನಮ್ಮ ಇದಿರು ದಯನೀಯವಾಗಿ ಕುಳಿತು ಬದುಕಿಗೆ ಬಾಷ್ಯ ಬರೆಯುವಂತೆ ಒತ್ತಾಯಿಸುತ್ತಿತ್ತು. ನಮಗಾದರೂ ಏನು ಬರೆಯಲು ಸಾಧ್ಯವಿತ್ತು. ಹೆಣ್ಣಿನ ಹೆಣ್ತನದ ಸಂಕೇತವಾದ ಗರ್ಭ ಮತ್ತು ಶಿಶುವಿಗೆ ಹಾಲೂಡಿಸುವ ಮೊಲೆಗಳು ಪಾತಾಳದಿಂದ ಆಕಾಶದೆತ್ತರಕ್ಕೆ ಬೆಳೆದು ನಿತಾಂತವಾಗಿ ಅಣಕಿಸುತ್ತಿದ್ದವು. ಇಲ್ಲಿ ಯಾರಿಗೆ ಯಾರು ಆಸರೆಯಾಗಿರುವರೋ? ಅಥವಾ ಯಾರಿಗೆ ಯಾರು ಶೋಷಣೆ ಮಾಡುತ್ತಿರುವರೋ? ಒಂದನ್ನೂ ನಿಷ್ಕರ್ಷೆ ಮಾಡಲಾಗದಷ್ಟು ಸಮಸ್ಯೆ ಜಟಿಲವಾಗಿತ್ತು. ದುಡಿಯಲು ಎರಡು ಸಮೃದ್ಧ ಕೈಗಳಿಲ್ಲದ, ತಿನ್ನಲು ತುತ್ತು ಅನ್ನಕ್ಕೂ ಗತಿಯಿಲ್ಲದ ಆ ಕುಟುಂಬ ಸಮಾಜವೆಂಬ ಕನ್ನಡಿ ಇದಿರು ನಿಂತು ತನ್ನ ಸಿಂಗರಿಸಿಕೊಳ್ಳುವ ತವಕದಲ್ಲಿತ್ತು. ಹುಚ್ಚಿಯಾದರೋ ರಪರಪ ಬಡಿಯುತ್ತಲೇ, ಜೋರಾಗಿ ಜಿಗುಟತಲೆ ಕೂಸಿಗೆ ಮೊಲೆ ನೀಡುತ್ತಿದ್ದಳು. ಅವಳ ಗಂಡನೆನಿಸಿಕೊಂಡ ಮುದುಕ, ಅಸ್ತಮಾ ತೇಕೆ ಹಾಕುತ್ತಲೇ ದೈನೇಸಿ ಕಂಗಳಿಂದ ಏನನ್ನೋ ಅರಸುತ್ತಿದ್ದನು. ಮಧ್ಯವಯಸ್ಸಿನ ಮಹಿಳೆ ಸಂಘ-ಸಂಸ್ಥೆ ,ಸರ್ಕಾರ, ಸಾಹುಕಾರ ಯಾರಿಂದಲಾದರೂ ಸಹಾಯ ಸಿಕ್ಕಿತೇ? ತನ್ಮೂಲಕ ಎರಡು ಜೋಡು ದೀಪಗಳನ್ನು ದೇದೀಪ್ಯಮಾನ್ಯವಾಗಿ ಬೆಳಗಿಸಲಾದೀತೆ ಎಂಬ ತವಕದಲ್ಲಿದ್ದಳು. ಆಗ ಥಟ್ಟನೆ ನೆನಪಾಯ್ತು. ಅಕ್ಕನ ವಚನದ ಸಾಲು ‘ಗಂಡು ಗಂಡಾದಡೆ ಹೆಣ್ಣಿನ ಸೂತಕ, ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ, ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?’ ....

ಸ್ವಾಯತ್ತತೆ

ನಮ್ಮ ಸ್ವಾಯತ್ತತೆಯ ಅಮೇರಿಕಕೆ ಮಾರಿ
ಈ ಜನರು ಅಲ್ಲಿಗೆ ಹೋಗುವವರೆ ಹಾರಿ?
ಸಂದೇಹ ಕೆಲವು ಜನ ವಿಫುಲ ಹಣ ಕೂಡಿ
ಇಟ್ಟಿದ್ದೆ ಪರದೇಶಿ ಬ್ಯಾಂಕಿನೊಳು ನೋಡಿ

-ವಿಡಂಬಾರಿ

ಕಾಮ್ರೇಡ್ ಸೂರಿರವರ ಒಂದು ನೆನಪು...

ಪುಟ 2 ರಿಂದ

ದಾವಣಗೆರೆ, ಭದ್ರಾವತಿ ಮುಂತಾದ ಕಡೆಗಳಿಗೂ ಹೋದರು. ಕೊನೆಯವರೆಗೂ ಅವರದ್ದು ಅವಿಶ್ರಾಂತ ಕೆಲಸ. ವಜ್ರವೇಲು, ಮುನಿರತ್ನಂ, ಎಂ.ಸಿ.ವೆಂಕಟರಾಂ, ಎ.ನಾಗೇಶ್ವರ ರಾವ್, ಅನಂತಸ್ವಾಮಿರಾವ್, ಚನ್ನಬಸಪ್ಪ ಮೊದಲಾದ ಕ್ರಿಯಾಶೀಲ ಸಮರಧೀರ ಕಾರ್ಯಕರ್ತರ ತಂಡವೇ ಅವರ ಸುತ್ತ ಇತ್ತು.

ಸಾರ್ವಜನಿಕ ಕ್ಷೇತ್ರದಲ್ಲಿ

ಬೆಂಗಳೂರು ಕೈಗಾರೀಕರಣಕ್ಕೆ ಒಂದು ಹೊಸ ದಿಶೆ ಮೂಡಿಬರುತ್ತಿದ್ದ ಕಾಲವದು. 2ನೇ ಪಂಚವಾರ್ಷಿಕ ಯೋಜನೆಯ ಭಾಗವಾಗಿ ಹಿಂದೂಸ್ತಾನ್ ಮಶಿನ್ ಟೂಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಹಿಂದೂಸ್ತಾನ್ ಏರೋನಾಟಿಕ್ ಲಿಮಿಟೆಡ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಮುಂತಾದ ಕಾರ್ಖಾನೆಗಳು ಒಂದರನಂತರ ಒಂದರಂತೆ ಸ್ಥಾಪನೆಯಾದವು. ಬೇರೆ ಬೇರೆ ರಾಜ್ಯಗಳಿಂದ ವಲಸೆ ಬಂದು ಈ ಕಾರ್ಖಾನೆಗಳಲ್ಲಿ ಸೇರ್ಪಡೆಯಾದ ಕಾರ್ಮಿಕರ ನಡುವೆ ಎಂ.ಎಸ್.ಕೃಷ್ಣನ್ ಹೆಚ್ಚು ಜನಪ್ರಿಯರಾಗಿದ್ದರು. ಆದರೆ ಕಾರ್ಮಿಕ ವರ್ಗದ ಮಹಾನ್ ಮುಖಂಡರಾದ ಪಿ.ರಾಮಮೂರ್ತಿ, ಎ.ಕೆ.ಜಿ, ಇ.ಎಂ.ಎಸ್., ಮೊದಲಾದವರ ಬಗ್ಗೆ ಈ ಕಾರ್ಮಿಕರಿಗೆ ಎಲ್ಲಿಲ್ಲದ ಗೌರವವಿತ್ತು. ಹಿಂದೊಂದು ಸಂದರ್ಭದಲ್ಲಿ ಹೆಚ್.ಎ.ಎಲ್ ಕಾರ್ಮಿಕರು ತಿರುಚನಾಪಳ್ಳಿಯಿಂದ ಅನಂತನ್ ನಂಬಿಯಾರ್ ಅವರನ್ನು ಕರೆತಂದು ತಮ್ಮ ಸಂಘದ ಅಧ್ಯಕ್ಷರನ್ನಾಗಿ ಮಾಡಿದರು. ಕೊನೆಗೆ ಕಮ್ಯುನಿಸ್ಟ್ ಪಕ್ಷ ವಿಭಜನೆಯಾಗುವುದರೊಂದಿಗೆ ಎಂ.ಎಸ್.ಕೃಷ್ಣನ್ ಒಂದೆಡೆ, ಸೂರ್ಯನಾರಾಯಣ ರಾವ್ ಇನ್ನೊಂದೆಡೆ ಕ್ರಮವಾಗಿ ಸಿಪಿಐ ಮತ್ತು ಸಿಪಿಐ(ಎಂ) ನಾಯಕರುಗಳಾಗಿ ಹೊರ ಹೊಮ್ಮುವಂತಾಯಿತು. ಭಾರತದ ಕಮ್ಯುನಿಸ್ಟ್ ಚಳುವಳಿಗೆ ಭಾರೀ ಧಕ್ಕೆಯನ್ನುಂಟುಮಾಡಿದ ವರ್ಗ ಸಹಕಾರದ ಧೋರಣೆಯನ್ನು ಕರ್ನಾಟಕದಲ್ಲಿ ದೃಢವಾಗಿ ವಿರೋಧಿಸಿದವರಲ್ಲಿ ಸೂರಿ ಮೊದಲಿಗರು. ವರ್ಗ ಸಂಘರ್ಷದ ದಾರಿಯನ್ನು ಎತ್ತಿಹಿಡಿದು ಸ್ಥಾಪನೆಯಾದ ಸಿಪಿಐ(ಎಂ)ನ್ನು ಸಂಘಟಿಸಲು ಕರೆಯಲಾದ ಪಕ್ಷದ 7ನೇ ಮಹಾಧಿವೇಶನದ ಪೂರ್ವದಲ್ಲಿ ತೆನ್ನಾಲಿಯಲ್ಲಿ ನಡೆಸಲಾದ ಸಮಾವೇಶಕ್ಕೆ ಕರ್ನಾಟಕದಿಂದ ಭಾಗವಹಿಸಿದ್ದ ಕೆಲವೇ ಪ್ರತಿನಿಧಿಗಳಲ್ಲಿ ಸೂರಿ ಒಬ್ಬರಾಗಿದ್ದರು.

ಎಐಟಿಯುಸಿ ವಿಭಜನೆಯಾಗುವ ಹೊತ್ತಿಗೆ ಸೂರಿ ಸಂಘದ ಕರ್ನಾಟಕ ಘಟಕವಾದ ಕೆಪಿಟಿಯುಸಿಯ ಅಧ್ಯಕ್ಷರಾಗಿದ್ದರು. ಜವಳಿ ಕೈಗಾರಿಕೆ ಇನ್ನೂ ಅವರ ಪ್ರಮುಖ ಕಾರ್ಯಕ್ಷೇತ್ರವಾಗಿತ್ತು. ಹೊಟೇಲ್ ಕಾರ್ಮಿಕರೂ ಅವರ ಜೊತೆಗಿದ್ದರು. ಆಟೋರಿಕ್ಷಾ ಚಾಲಕರನ್ನೂ, ಫುಟ್‌ಪಾತ್ ವ್ಯಾಪಾರಿಗಳನ್ನು ಅವರು ಸಂಘಟಿಸಿದ್ದರು. ಭದ್ರಾ ಮಿಲ್ಸ್, ಟಿ.ಆರ್.ಮಿಲ್ಸ್, ರಾಜ್‌ಕುಮಾರ್ ಮಿಲ್ಸ್, ಬಿನ್ನಿ ಮಿಲ್ಸ್ ಇವೆಲ್ಲಾ ಸೂರಿಯವರ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಇವುಗಳ ಜೊತೆಯಲ್ಲಿ ಸಾರ್ವಜನಿಕ ರಂಗದ ಕಾರ್ಮಿಕರ ನಡುವಿನ ರಾಜಕೀಯವಾಗಿ ಸಕ್ರಿಯವಾಗಿದ್ದ ಕಾರ್ಯಕರ್ತರು ಸೂರಿಯವರ ರಾಜಕೀಯ ಚಟುವಟಿಕೆಗಳಿಗೆ ಲಭ್ಯವಾಗುತ್ತಿದ್ದರು.

ದಾವಣಗೆರೆಯ ಜವಳಿ ಕಾರ್ಮಿಕರ ನಡುವೆ ಸೂರಿ ಜನಪ್ರಿಯರಾಗಿದ್ದರು. ಹರಿಹರದಲ್ಲಿ 'ಎಡಪಂಥೀಯ' ರೆಂದು ಕರೆಯಿಸಿಕೊಳ್ಳಲು ಹೆಮ್ಮೆ ಪಡುತ್ತಿದ್ದ ಕಾರ್ಮಿಕರಿಗೂ ಸೂರಿಯವರೇ ಮುಖಂಡರಾಗಿದ್ದರು. ಎಐಟಿಯುಸಿ ವಿಭಜನೆಯ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಉಂಟಾದ ಸಂಘರ್ಷದಲ್ಲಿ ಕೆಲವು ಕಾರ್ಮಿಕರ ಹತ್ಯೆಯಾಯಿತು. ಈ ಸಂದರ್ಭದ ಅವಕಾಶ ಪಡೆದು ಸೂರಿಯವರನ್ನು ಕೊಲೆ ಆಪಾದನೆಯ ಕೇಸಿನಲ್ಲಿ ಸಿಲುಕಿಸಲಾಯಿತು. ಜೈಲಿನಿಂದ ಹೊರಬರಲು ಒಂದೂವರೆ ವರ್ಷ ಹಿಡಿಯಿತು. ಹೀಗಾಗಿ 1970ರ ಮೇ ತಿಂಗಳಲ್ಲಿ ಕಲ್ಕತ್ತಾದಲ್ಲಿ ನಡೆದ ಸಿಐಟಿಯು ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸುವುದು ಸೂರಿ ಅವರಿಗೆ ಸಾಧ್ಯವಾಗಲಿಲ್ಲ.

ರಾಮ್‌ಕುಮಾರ್ ಮಿಲ್ ಹೋರಾಟ:

1971 ರ ಅಂತ್ಯದಲ್ಲಿ ಜೈಲಿನಿಂದ ಹೊರಬಂದ ಸೂರಿ ಬೆಂಗಳೂರಿನ ರಾಮ್‌ಕುಮಾರ್ ಮಿಲ್ಸ್ ಕಾರ್ಮಿಕರನ್ನು ಕಾರ್ಯಾಚರಣೆಗಿಳಿಸಿದರು. ಎಲ್ಲಾ ವಿಧದ ಕಷ್ಟನಷ್ಟಗಳನ್ನು ಎದುರಿಸಿ ಹೋರಾಟ ಬೆಳೆದರೂ ಹಿನ್ನಡೆಯಬೇಕಾಯಿತು. ಮಿಲ್ ಮಾಲೀಕರಿಗೆ ಅಂದಿನ ರಾಜ್ಯಪಾಲ ಧರ್ಮವೀರರವರ ಪೂರ್ಣ ಬೆಂಬಲವಿತ್ತು. ಈತ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಸರ್ವಾಧಿಕಾರಿಯಾಗಿ ವರ್ತಿಸಿ ಕುಖ್ಯಾತರಾಗಿದ್ದ ವ್ಯಕ್ತಿ. ಈ ಹೋರಾಟದಿಂದಾಗಿ ಬೆಂಗಳೂರು ದಕ್ಷಿಣದಲ್ಲಿ ರೈತರ ಸಂಘಟನೆ ಮತ್ತು ಚಳುವಳಿ ಮೂಡಿಬರುವಂತಾಯಿತು. ಸುಬ್ರಮಣ್ಯಪುರ ಮತ್ತು ಸುತ್ತಮುತ್ತ ಕಾರ್ಮಿಕ ರೈತರ ಸಖ್ಯತೆಯನ್ನು ಸ್ಥಾಪಿಸುವಲ್ಲಿ ಎ.ಕೆ.ಜಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪಿ.ಜಗನ್ನಾಥ್ ಈ ಹೋರಾಟದಿಂದ ಹೊರಹೊಮ್ಮಿದ ನಾಯಕರು. ಆಗಷ್ಟೇ ಟ್ರೇಡ್ ಯೂನಿಯನ್ ಕಾರ್ಯಕರ್ತನಾಗಿ ಬೆಳೆದು ಬರುತ್ತಿದ್ದ ಈ ಲೇಖಕ ಈ ಬೆಳವಣಿಗೆಗಳಿಂದ ಪ್ರಭಾವಿತನಾದ.



ಐತಿಹಾಸಿಕ ಮೈಕೊ ಹೋರಾಟದಲ್ಲಿ ಸೂರಿ

ಆಂತರಿಕ ಹೋರಾಟ

ರಾಮ್‌ಕುಮಾರ್ ಮಿಲ್ ಹೋರಾಟ ಕೊನೆಗೊಳ್ಳುತ್ತಿದ್ದಂತೆ ಪಕ್ಷದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಉಂಟಾದವು. ಜಲಂಧರ್ ಮಹಾಧಿವೇಶನದ ಧೋರಣೆಯಿಂದಷ್ಟೇ ಬೆಳಕು ಸಿಗುವಂತಾಗಿ ಸಂಕುಚಿತ ನೀತಿಗೆ ಅಂಟಿಕೊಂಡಿದ್ದವರನ್ನು ಅಂತಿಮವಾಗಿ ಪಕ್ಷದಿಂದ ಉಚ್ಚಾಟಿಸಲಾಯಿತು.

ಆ ವೇಳೆಗೆ ಸೂರಿಯವರು ನೇತೃತ್ವ ನೀಡುತ್ತಿದ್ದ ಸಂಘಗಳಲ್ಲಿ ಮೈಸೂರ್ ರಸ್ತೆಯಲ್ಲಿರುವ ಫೆದರ್‌ಲೈಟ್ ಇಂಡಸ್ಟ್ರೀಸ್ ಕಾರ್ಮಿಕರ ಸಂಘ ಒಂದಾಗಿತ್ತು. ಆರ್.ಶ್ರೀನಿವಾಸ್ ಅವರ ಸಹಾಯಕರಾಗಿದ್ದರು. ಸರ್ಜಾಪುರ ರಸ್ತೆಯಲ್ಲಿನ ಜಾನ್ ಫೌಲರ್, ಶಿವಾಜಿನಗರದ ಎವೆರಿ ಯೂನಿಯನ್ ಇನ್ನುಳಿದ ಸಂಘಗಳಾಗಿದ್ದವು. ಹೀಗೆ ಸಿಐಟಿಯು ಪ್ರಭಾವ ಸೀಮಿತವಾಗಿತ್ತು. ಪರಿಷ್ಕರಣ ವಾದಿಗಳ ಅಪಪ್ರಚಾರ ಜೋರಾಗಿತ್ತು. ಆದರೆ ಇದ್ಯಾವುದಕ್ಕೂ ಸೊಪ್ಪುಹಾಕದೆ ತಲೆಯೆತ್ತಿ ನಡೆಯುತ್ತಿದ್ದ ಸೂರಿ ಹಂತಹಂತವಾಗಿ ಬೆಳೆಯುತ್ತಾ ಹೋದರು.

ರಾಜಕೀಯ ಬಿರುಗಾಳಿಯಲ್ಲಿ

ಒಂದು ರಾಜಕೀಯ ಬಿರುಗಾಳಿ ದೇಶವನ್ನು ಆವರಿಸಿತ್ತು. ಯುವ ಜನರು ಸಿಡಿದೆದ್ದಿದ್ದರು. ಕಾಂಗ್ರೆಸ್‌ನಲ್ಲಿ ಒಂದೆಡೆ 'ಯಂಗ್ ಟರ್ಕ್' ಇನ್ನೊಂದೆಡೆ 'ಸಿಂಡಿಕೇಟ್' ಎಂದು ವಿಭಜನೆಯಾಗಿತ್ತು. ತೀವ್ರಗಾಮಿ ವಿಭಾಗ ಬೆಳೆದು ಗಲಭೆಕೋರರ ತಂಡವಾಯಿತು. ಇದೇ ಸಂಜಯಗಾಂಧಿಯ ಜೊತೆಗಿದ್ದ ಪುಂಡರು ಹಾಗೂ ಪಶ್ಚಿಮ ಬಂಗಾಳದ ಛಾತ್ರ ಪರಿಷತ್. ಇವರು ಬಲಪಂಥಿಯರನ್ನು ಎದುರಿಸುವ ಬದಲು, ಕೋಮುವಾದಿಗಳನ್ನು ಎದುರಿಸುವ ಬದಲು ಮಾರ್ಕ್ಸ್‌ವಾದಿಗಳನ್ನು ಎದುರಿಸುವುದರಲ್ಲಿ ವಿಕೃತ ಸಂತಸ ಪಡೆದರು. ಅವರಿಗೆ ಎಡಪಂಥೀಯರೊಳಗಿನ ಡಾಂಗೆ ವಾದಿಗಳ ಬೆಂಬಲವೂ ಇತ್ತು. ಇನ್ನೊಂಧೆಡೆಯಿಂದ ನಕ್ಸಲೀಯರು ಮಾರ್ಕ್ಸ್‌ವಾದಿಗಳ ಮೇಲೆ ಧಾಳಿ ಮಾಡುತ್ತಿದ್ದರು.

ಕಾರ್ಮಿಕ ವರ್ಗ ತೀವ್ರ ದಾಳಿ ದಬ್ಬಾಳಿಕೆಗಳಿಗೆ ಒಳಗಾದ ಅವಧಿ ಇದಾಗಿತ್ತು. ಕಾರ್ಮಿಕರ ಬೋನಸ್ ಕನಿಷ್ಠ ಶೇ.8.33 ರಿಂದ ಶೇ.4ಕ್ಕೆ ಕಡಿತಗೊಳಿಸಲಾಯಿತು. ಕಾರ್ಮಿಕರ ಸಂಬಳದಲ್ಲಾಗುವ ಹೆಚ್ಚಳವನ್ನು ಕಡ್ಡಾಯ ಠೇವಣಿಗೆ ಒಳಪಡಿಸಲಾಗುತ್ತಿತ್ತು. ಮಾಡಿದ ಒಪ್ಪಂದಗಳನ್ನು ಗಾಳಿಗೆ ತೂರಲಾಗುತ್ತಿತ್ತು. ಪ್ರಜಾಪ್ರಭುತ್ವ ಮತ್ತು ಮುಖ್ಯವಾಗಿ ಕಾರ್ಮಿಕ ಚಳುವಳಿಯ ಮುಂಚೂಣಿಯಲ್ಲಿದ್ದ ಪಶ್ಚಿಮ ಬಂಗಾಳದ ಮೇಲೆ ಅರೆಫ್ಯಾಸಿಸ್ಟ್ ದಬ್ಬಾಳಿಕೆ ನಡೆಸಲಾಯ್ತು. ಕೊನೆಗೆ 1975 ಜೂನ್ 25 ರಂದು ದೇಶದ ಮೇಲೆ ಕರಾಳ ತುರ್ತು ಪರಿಸ್ಥಿತಿ ಹೇರಲ್ಪಟ್ಟಿತು.

ಈ ಅವಧಿಯಲ್ಲಿ ಬೆಳೆದು ಬಂದ ಹೋರಾಟಗಳೇ, ಸಿಪಿಐ(ಎಂ) ಮತ್ತು ಸೂರ್ಯನಾರಾಯಣರಾವ್ ಅವರ ನಾಯಕತ್ವದ ಬೆಳವಣಿಗೆಗೆ ಕಾರಣವಾದುವು ಎಂದು ಹೇಳಿದರೆ ತಪ್ಪಾಗದು. ಎ.ಕೆ.ಜಿ ಅವರು ಸಂಸತ್ತಿನಲ್ಲಿ ಮಾಡಿದ ಭಾಷಣವನ್ನು ಮುದ್ರಿಸಿದ ಆರೋಪದ ಮೇಲೆ ಈ ಲೇಖಕನನ್ನು 1975ರ ಆಗಸ್ಟ್ 3 ರ ರಾತ್ರಿ ಭಾರತ ರಕ್ಷಣಾ ನಿಯಮಗಳ ಅಡಿಯಲ್ಲಿ ಬಂಧಿಸಿ 'ಬಿ' ವರ್ಗದ ವಿಚಾರಣಾಧೀನ ಖೈದಿಯಾಗಿ ಜೈಲಿಗೆ ಕಳುಹಿಸಲಾಯಿತು. 1976 ರವರೆಗೆ ನಾನು ಬೆಂಗಳೂರು ಜೈಲಿನಲ್ಲಿದ್ದೆ. ನನ್ನ ಮೇಲೆ ಮಾಡಲಾದ ಆರೋಪಗಳು ಕಾನೂನು ಬಾಹಿರವೆಂದು ನ್ಯಾಯಾಲಯವು ತೀರ್ಪು ನೀಡಿದ ಬಳಿಕ ನನ್ನನ್ನು ಬಿಡುಗಡೆ ಮಾಡಲಾಯಿತು. ನನ್ನ ಬಿಡುಗಡೆಯ ಕೆಲವೇ ವಾರಗಳೊಳಗೆ ಸೂರಿಯವರನ್ನು ತಾತಗುಣಿ ಕಾರ್ಮಿಕರ ಹೋರಾಟದಲ್ಲಿ ಜಗನ್ನಾಥ್ ಮತ್ತು ಚಿನ್ನಪ್ಪ ಅವರ ಜೊತೆಯಲ್ಲಿ ಆಂತರಿಕ ಭದ್ರತಾ ಶಾಸನ(ಮೀಸಾ) ಅಡಿಯಲ್ಲಿ ಬಂಧಿಸಲಾಯಿತು.

1977 ರಲ್ಲಿ ಸರ್ವಾಧಿಕಾರಿ ಕಾಂಗ್ರೆಸಿಗೆ ತೀವ್ರ ಹಿನ್ನಡೆಯಾಯಿತು. ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಯಾಗಿ ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಆದರೆ ದಕ್ಷಿಣ ಭಾರತದಲ್ಲಿ, ಮುಖ್ಯವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶ ಕಾಂಗ್ರೆಸಿನ ಕೋಟೆಗಳಾಗಿಯೇ ಮುಂದುವರೆದವು. ಕರ್ನಾಟಕದಲ್ಲಿ ಸರ್ವಾಧಿಕಾರಿ ಆಳ್ವಿಕೆ ಮುಂದುವರೆದು ಅದರ ವಿರುದ್ಧದ ಹೋರಾಟ ಇನ್ನಷ್ಟು ಮಹತ್ವ ಪಡೆಯುವಂತಾಯಿತು.

ತಿರುವು ನೀಡಿದ ಹೋರಾಟ

ತುರ್ತು ಪರಿಸ್ಥಿತಿಯ ನಂತರ, ಪಕ್ಷದ 10ನೇ ಮಹಾಧಿವೇಶನ ಜಲಂಧರ್‌ನಲ್ಲಿ ನಡೆಯಿತು. ಈ ಐತಿಹಾಸಿಕ ಅಧಿವೇಶನದ ತೀರ್ಮಾನಗಳು ರಾಜ್ಯದಲ್ಲಿ ಕಾರ್ಮಿಕ ವರ್ಗದ ಮತ್ತು ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಹೊಸ ಹುರುಪು ನೀಡಿತು. ಪಕ್ಷದ ರಾಜ್ಯ ಸಮಿತಿ ಮತ್ತು ಬೆಂಗಳೂರು ಜಿಲ್ಲಾ ಸಮಿತಿಗಳು ಪುನರ್ರಚಿತವಾದವು.

ಇತ್ತ ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದ ಜನತಾ ಪಕ್ಷದ ಸರ್ಕಾರವು ಕಾರ್ಮಿಕರಿಗೆ ನೀಡಿದ ಭರವಸೆಗಳನ್ನು ಕೈಬಿಟ್ಟು ಹಿಂದಿನ ಕಾಂಗ್ರೆಸ್ ಸರ್ಕಾರದ ಧೋರಣೆಗಳನ್ನು ಮುಂದುವರೆಸಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮೇಲೆ ಗದಾ ಪ್ರಹಾರ ಮಾಡಿತು. ಭೂತಲಿಂಗಂ ಸಮಿತಿಯ ವರದಿ, ಕೈಗಾರಿಕಾ ಸಂಬಂಧಗಳ ಮಸೂದೆ ಇತ್ಯಾದಿಗಳ ರೂಪದಲ್ಲಿ ಬಂದ ದಾಳಿಯನ್ನು ಐಕ್ಯತೆಯಿಂದ ಎದುರಿಸಲಾಯಿತು. ಸಾರ್ವಜನಿಕ ವಲಯಗಳ ಬ್ಯೂರೋ(ಬಿ.ಪಿ.ಇ.) ನಿರ್ದೇಶನಗಳ ವಿರುದ್ಧದ ಹೋರಾಟದಲ್ಲಿಯೂ ಕಾರ್ಮಿಕ ವರ್ಗದ ದೃಢ ಕಾರ್ಯಾಚರಣೆ ಕಂಡು ಬಂತು.

ಸೂರಿಯವರ ಹೋರಾಟಗಳ ಬದುಕಿಗೆ ತಿರುವು ನೀಡಿದ ಅತ್ಯಂತ ಮಹತ್ವದ ಹೋರಾಟವೆಂದರೆ ಮೈಕೊ ಹೋರಾಟ.

ಸೂರಿಯವರ ಜೀವನದಲ್ಲಿ, ಮುಖಂಡತ್ವದಲ್ಲಿ ತಿರುವು ಉಂಟಾದ ಅತ್ಯಂತ ಮಹತ್ವದ ಹೋರಾಟವೆಂದರೆ ಮೈಕೋ ಹೋರಾಟ. ಈ ಹೋರಾಟ ಕಾರ್ಮಿಕ ವರ್ಗವನ್ನು ಪ್ರಜಾಪ್ರಭುತ್ವ ಆಂದೋಲನವನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಯಿತಷ್ಟೇ ಅಲ್ಲ, ಅದು ಸರ್ವಾಧಿಕಾರಶಾಹಿ ಶಕ್ತಿಗಳನ್ನು ಹೊರಗೆಳೆದು ಅದನ್ನು ಸೋಲಿಸುವಲ್ಲಿಯೂ ಯಶಸ್ವಿಯಾಯಿತು. 1983ರ ಚುನಾವಣೆ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿತು. 1983ರ ಪೂರ್ವ ನಮ್ಮ ನೇತೃತ್ವದ ಹೋರಾಟಗಳಿಂದಾಗಿ ಸೂರಿಯವರು ವರ್ತೂರಿನಿಂದ, ರಾಮಚಂದ್ರರಾವ್ ಉಳ್ಳಾಲದಿಂದ ಹಾಗೂ ಅಪ್ಪುಸ್ವಾಮಿರೆಡ್ಡಿ ಬಾಗೇಪಲ್ಲಿಯಿಂದ ವಿಧಾನಸಭೆಗೆ ಚುನಾಯಿತರಾದರು. ಇದು ವಿಧಾನ ಮಂಡಲದಲ್ಲಿ ಕಾರ್ಮಿಕ ವರ್ಗದ ಪಾತ್ರಕ್ಕೆ ಸಂಬಂಧಪಟ್ಟಂತೆ ಅತ್ಯುತ್ತಮ ಅವಧಿ ಹಾಗೂ ನಾವು ಮಾಡಿದ ಕೆಲಸ, ಜತೆ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ, ಮೈಕೋ ಐಟಿಸಿ ಇತ್ಯಾದಿ ಕಾರ್ಮಿಕರ ಹೋರಾಟಗಳು, ಸೂರ್ಯನಾರಾಯಣ ರಾವ್‌ರವರನ್ನು ಬೆಂಗಳೂರಿನಲ್ಲಿ ಟ್ರೇಡ್ ಯೂನಿಯನ್ ಮುಖಂಡರಾಗಿ, ಶಾಸಕರಾಗಿ ವೇದಿಕೆಯ ಮೇಲೆ ನಿಲ್ಲಿಸಿದವು.

ಇದೇ ಸಮಯದಲ್ಲಿ ಆಂದೋಲನವನ್ನು ಉತ್ತರಕರ್ನಾಟಕದ ಪ್ರದೇಶಗಳಿಗೆ ವಿಸ್ತರಿಸಲು ನನ್ನನ್ನು ನಿಯೋಜಿಸಿದ ಪರಿಣಾಮವಾಗಿ ಹರಿಹರ, ಹುಬ್ಬಳ್ಳಿ, ಧಾರವಾಡ, ದಾಂಡೇಲಿ, ಬೆಳಗಾಂವ ಮುಂತಾದ ಕಡೆಗಳಿಗೆ ಸಿಐಟಿಯು ಸಂಘಟನೆಯನ್ನು ವಿಸ್ತರಿಸಲು ಸಾಧ್ಯವಾಯಿತು.

ಈಗ ಬದಲಾದ ಸನ್ನಿವೇಶದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳ ವಿರುದ್ಧ ಹಾಗೂ ಕೋಮುವಾದದ ವಿರುದ್ಧ ಕರೆಗಳಲ್ಲಿ ಕಾರ್ಯಾಚರಣೆಗಳಲ್ಲಿ ಅವರ ಸಕ್ರಿಯ ಮುಖಂಡತ್ವ ದೊರೆತಿದೆ.

ಹೀಗೆ ಕಾಮ್ರೇಡ್ ಸೂರಿಯವರ ವಿಕಾಸ ಪೂರ್ಣವಾಯಿತು. ಅವರಿಗೆ ಕಾರ್ಮಿಕ ಸಂಘ ಮತ್ತು ಪ್ರಜಾ ಪ್ರಭುತ್ವ ಪ್ರಕ್ರಿಯೆಯಾದ್ಯಂತ ದಾಪುಗಾಲು ಇಡಲು ಸಾಧ್ಯವಾಯಿತು.

ಸಮರ್ಪಣೆ

ಈಗ ಉಂಟಾಗಿರುವ ತೆರವನ್ನು ತುಂಬಿಸುವುದು ಕಷ್ಟ. ಸೂರಿಯವರ ಹೆಸರಿನಲ್ಲಿ ಮತ್ತೆ ಈ ಉದ್ದೇಶಗಳಿಗೆ ನಮ್ಮನ್ನು ಸಮರ್ಪಿಸಿಕೊಂಡಲ್ಲಿ ಫಲ ನೀಡುವುದು ಖಂಡಿತ. ಸೂರಿಯವರು ಯಾವ ಆದರ್ಶಗಳಿಗೆ ತಮ್ಮನ್ನು ಮುಡಿಪಾಗಿಟ್ಟಿದ್ದರೋ ಅದನ್ನು ಅನುಸರಿಸೋಣ. ಅವರ ಕಾರ್ಯ, ಆಚರಣೆಗಳಿಂದ ಪಾಠ ಕಲಿಯೋಣ.

ಜಗದಗಲ

ಶರತ್‌ಚಂದ್ರ

ರಶ್ಯಾ ಗಡಿಯಲ್ಲಿ ಯುದ್ಧ ಹರಡಲು ಬುಶ್ ಸರ್ಕಾರದ ಹುನ್ನಾರ

ಶೀತಲ ಸಮರದ ಮತ್ತು ರಶ್ಯಾದ ಮೇಲೆ ಆಕ್ರಾಮಕ ನೀತಿಯ ಮುಂದುವರಿಕೆಯಾಗಿ ಬುಶ್ ಸರ್ಕಾರ ಆ ದೇಶದ ಗಡಿಯಲ್ಲಿ ಪ್ರಚೋದಕ ಕೃತ್ಯಗಳನ್ನು ನಡೆಸುತ್ತಲೇ ಬಂದಿದೆ. ನೆರೆಯ ದೇಶಗಳಿಗೆ ನಾಟೋ ಸದಸ್ಯತ್ವ ಕೊಡುವುದು, ಅಲ್ಲಿ ರಶ್ಯಾದ ವಿರುದ್ಧ ಆಕ್ರಾಮಕ ಕ್ಷಿಪಣಿ, ರಾಡಾರ್ ಇತ್ಯಾದಿ ಅಣಿ ನೆರೆಸುವುದು, ಅಲ್ಲಿನ ಚುನಾವಣೆಗಳಲ್ಲಿ ಮಧ್ಯಪ್ರವೇಶದ ಮೂಲಕ ರಶ್ಯಾ-ವಿರೋಧಿ ಶಕ್ತಿಗಳನ್ನು ಅಧಿಕಾರಕ್ಕೆ ತರುವುದು - ಇತ್ಯಾದಿ ಅಂತಹ ಕೃತ್ಯಗಳು. ಜಾರ್ಜಿಯ ಇಂತಹ ಒಂದು ನೆರೆಯ ದೇಶ. ಇತ್ತೀಚೆಗೆ ಅಲ್ಲಿ ಅಮೆರಿಕ-ಬೆಂಬಲಿತ ಮಿಖೈಲ್ ಸಾಕ್ಷ್‌ವಿಲಿ ಅಧ್ಯಕ್ಷನಾದ ಮೇಲೆ ಬುಶ್ ಹುನ್ನಾರಗಳಿಗೆ ಹೆಚ್ಚಿನ ಅವಕಾಶ ಸಿಕ್ಕಿದೆ.

ಜಾರ್ಜಿಯದಿಂದ ಪ್ರತ್ಯೇಕವಾಗಲು ಬಯಸುವ (ಮತ್ತು ರಶ್ಯಾದ ಗಡಿಯಲ್ಲಿರುವ) ದಕ್ಷಿಣ ಒಸ್ಸೆಶಿಯ ಮತ್ತು ಅಬ್ಖಾರಿಜಿಯದ ಮೇಲೆ ಮಿಲಿಟರಿ ಆಕ್ರಮಣ ಮಾಡಲು ಸಾಕ್ಷ್‌ವಿಲಿಗೆ ಬುಶ್ ಸರ್ಕಾರ ಭಾರೀ ಕುಮ್ಮಕ್ಕು ನೀಡಿತು. ಈ ವಿವಾದ ಈಗಾಗಲೇ ಅಂತರ್‌ರಾಷ್ಟ್ರೀಯ ವಿವಾದವಾಗಿದ್ದು ರಶ್ಯನ್ ಶಾಂತಿಪಾಲನಾ ಪಡೆಗಳು ಆ ಪ್ರದೇಶದಲ್ಲಿವೆ. ಬುಶ್ ಸರ್ಕಾರದ ಭಾರೀ ಕುಮ್ಮಕ್ಕಿನ ಮೇಲೆ ಜಾರ್ಜಿಯಾ ಆಕ್ರಮಣ ಮಾಡಿತು. ರಶ್ಯಾ ತನ್ನ ಗಡಿಯಲ್ಲಿ ಯುದ್ಧ ಹೂಡಲು ಹಿಂಜರಿಯಬಹುದು. ಹೊಸ ರಶ್ಯನ್ ಅಧ್ಯಕ್ಷ ಮೆಡ್ವೆಡೆವ್ ಪುಟಿನ್ ರಷ್ಟು ಕಠಿಣ ಕ್ರಮ ತೆಗೆದುಕೊಳ್ಳಲಿಕ್ಕಿಲ್ಲ. ಅಧ್ಯಕ್ಷ ಮೆಡ್ವೆಡೆವ್ ಮತ್ತು ಪ್ರಧಾನಿ ಪುಟಿನ್ ನಡುವೆ ಈ ಬಗ್ಗೆ ಭಾರೀ ಭಿನ್ನಾಭಿಪ್ರಾಯ ಮೂಡಿ ಸರ್ಕಾರ ನಿಷ್ಕ್ರಿಯವಾಗಬಹುದು. ರಶ್ಯಾ ದುರ್ಬಲ ಶಕ್ತಿ ಎಂದು ತೋರಿಸಬಹುದು. ರಶ್ಯಾ ಮರುದಾಳಿ ಮಾಡಿದರೂ ಅದು ದುರ್ಬಲವಾಗಿದ್ದು ಅದನ್ನು 'ಅಫ್ಘಾನಿಸ್ತಾನ ಮಿಲಿಟರಿ ಮಧ್ಯ ಪ್ರವೇಶ'ದಂತೆ ಸುಸ್ತು ಹೊಡಿಸಬಹುದು. ಹೀಗೆ ರಶ್ಯ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸಿದರೂ ಇದನ್ನು ಬಳಸಿ ರಶ್ಯವನ್ನು ಅಂತರ್‌ರಾಷ್ಟ್ರೀಯವಾಗಿ ಒಂಟಿಯಾಗಿಸಲು ಬಳಸಬಹುದು ಎಂದೆಲ್ಲಾ ಬುಶ್ ಮತ್ತು ಜಾರ್ಜಿಯಾ ಸರ್ಕಾರ ಲೆಕ್ಕಾಚಾರ ಹಾಕಿತ್ತು.

ಆದರೆ ಅದರ ಹಲವು ಲೆಕ್ಕಾಚಾರ ತಲೆಕೆಳಗಾಗಿದೆ. ರಶ್ಯ ಅತ್ಯಂತ ಶೀಘ್ರ ಮತ್ತು ತೀಕ್ಷ್ಣ ಪ್ರತಿಕ್ರಿಯೆಯಲ್ಲಿ ಜಾರ್ಜಿಯಾದ ಆಕ್ರಮಣ ಹಿಮ್ಮೆಟ್ಟಿಸಿದೆ. ಮಾತ್ರವಲ್ಲ ಜಾರ್ಜಿಯಾದ ಮಿಲಿಟರಿ ವ್ಯವಸ್ಥೆಗೆ ಬಲವಾದ ಮಾರಣಾಂತಿಕ ಏಟು ನೀಡಿದೆ. ಜಾರ್ಜಿಯಾ ಅಧ್ಯಕ್ಷ ಸಾಕ್ಷ್‌ವಿಲಿ ಮತ್ತು (ಎಲ್ಲರಿಗೂ ಗೊತ್ತಿರುವಂತೆ) ಅವರ ಹಿಂದೆ ಇದ್ದ ಬುಶ್ ಗೆ ಮುಖಭಂಗವಾಗಿದೆ. ರಶ್ಯದ ಪ್ರತಿಕ್ರಿಯೆ ವಿರುದ್ಧ ಬುಶ್ ನ ಯುರೋಪಿಯನ್ ಮಿತ್ರರೂ ಅಷ್ಟು ತೀಕ್ಷ್ಣವಾಗಿ ಪ್ರತಿಕ್ರಿಯಿಸಲಿಲ್ಲ. ರಶ್ಯದ ವಿರುದ್ಧ ತೀವ್ರ ಅಪಪ್ರಚಾರಕ್ಕೂ ಅಷ್ಟೇನೂ ಅವಕಾಶ ಸಿಗಲಿಲ್ಲ. ಬುಶ್‌ನ ನಿಕಟ ಮಿತ್ರ ಫ್ರೆಂಚ್ ಅಧ್ಯಕ್ಷ ಸಾರ್ಕೊಜಿ, ಸಾಕ್ಷ್‌ವಿಲಿ ಮತ್ತು ಬುಶ್ ಗೆ ಪೂರ್ಣ ಮುಖಭಂಗವಾಗದಿರಲು ಮಾಸ್ಕೋಗೆ ಧಾವಿಸಿ ಕದನ ವಿರಾಮಕ್ಕೆ ಶ್ರಮಿಸಬೇಕಾಯಿತು. ಈ ಒಪ್ಪಂದದಲ್ಲಿ ದಕ್ಷಿಣ ಒಸ್ಸೆಶಿಯ ಮತ್ತು ಅಬ್ಖಾರಿಜಿಯದ ನಾಯಕರು ಸಹ ಭಾಗಿಯಾಗಿದ್ದಾರೆ.

ಕದನ ವಿರಾಮ ಇನ್ನೂ ಪೂರ್ಣವಾಗಿ ಜಾರಿಯಾಗಿಲ್ಲ. ಆದರೂ ತೀವ್ರ ಸತತ ಕದನವಂತೂ ನಿಂತಿದೆ. ಬುಶ್ ಯಥಾಪ್ರಕಾರ ಜಾರ್ಜಿಯಾದ



ಮೊದಲ ಆಕ್ರಮಣ ಖಂಡಿಸದೆ, ರಶ್ಯಾದ ಪ್ರತಿಕ್ರಿಯೆಯನ್ನು ಮಾತ್ರ ಖಂಡಿಸಿದ್ದಾರೆ. ಆದರೆ ಅವರ ನಿಲುವಿಗೆ ಅವರ ಮಿತ್ರರಿಂದಲೂ ಸಾಕಷ್ಟು ಬೆಂಬಲ ಸಿಕ್ಕಿಲ್ಲ. ಅವರ ಈ ದುಸ್ಸಾಹಸದ ಒಂದೇ 'ಸಾಧನೆ'ಯೆಂದರೆ ಈ ಪ್ರದೇಶದಲ್ಲಿ ತೀವ್ರ ಮಾನವೀಯ ಸಂಕಟ ಮತ್ತು ಬಿಕ್ಕಟ್ಟು ಸೃಷ್ಟಿ. ಹಲವು ಮುಂದಿನ ಯುದ್ಧಗಳಿಗೆ ಬುನಾದಿ ಹಾಕಿದ್ದಾರೆ.

ಸ್ವತಂತ್ರ ದೇಶಗಳ ಸಮಗ್ರತೆ-ಸಾರ್ವಭೌಮತೆಯನ್ನು ಮನ್ನಿಸದೆ, ಜನಾಂಗ-ಭಾಷೆ-ಧರ್ಮ-ಪ್ರದೇಶಗಳ ಆಧಾರದ ಮೇಲೆ ಪ್ರತ್ಯೇಕತೆಯನ್ನು ಬೆಂಬಲಿಸುವ, ಅದಕ್ಕಾಗಿ 'ಮಾನವೀಯ' ಮಿಲಿಟರಿ ಮಧ್ಯಪ್ರವೇಶ ಮಡುವ ಮೇಲ್ಪಂಕ್ತಿ (ಉದಾ: ಯುಗೋಸ್ಲಾವಿಯಾದ ಬಲವಂತದ ರಾಜಕೀಯ ವಿಘಟನೆ) ಹಾಕಿದ ಅಮೆರಿಕನ್ ಸಾಮ್ರಾಜ್ಯಶಾಹಿ ಈಗ ಜಾರ್ಜಿಯಾದ ಸಾರ್ವಭೌಮತೆ, ಸಮಗ್ರತೆ ಬಗ್ಗೆ ಮಾತನಾಡುವುದು ಅದರ ಬೆಂಬಲಿಗರಿಗೂ ಹಾಸ್ಯಾಸ್ಪದವಾಗಿ ಕಾಣುತ್ತಿದೆ. ಈ ಸಂದರ್ಭಸಾಧಕ ಮತ್ತು ಅಪಾಯಕಾರಿ ಧೋರಣೆಯನ್ನು ನೀತಿಶಃ ವಿರೋಧಿಸುತ್ತಿದ್ದ ರಶ್ಯವನ್ನು, ಅಂತಹ ಧೋರಣೆ ಅಂಗೀಕರಿಸುವಂತೆ ಮಾಡಿದ್ದೂ ಬುಶ್ 'ಸಾಧನೆ'. ಅಷ್ಟರ ಮಟ್ಟಿಗೆ ವಿಶ್ವಶಾಂತಿಗೆ ಇನ್ನೂ ಹೆಚ್ಚಿನ ಅಪಾಯ ಒಡ್ಡಿದಂತಾಗಿದೆ.

ಮಾಜಿ ಸಮಾಜವಾದಿ ದೇಶಗಳನ್ನು ಒಡೆಯುವ ಪಿತೂರಿಯ ಭಾಗವಾಗಿ ಅಮೆರಿಕ, 70-80 ರ ದಶಕಗಳಲ್ಲಿ ಎಲ್ಲಾ ದೇಶಗಳಲ್ಲಿ ಜನಾಂಗೀಯ ಮತ್ತಿತರ ಪ್ರತ್ಯೇಕವಾದಿಗಳಿಗೆ ಧನ-ಶಸ್ತ್ರಾಸ್ತ್ರ-ಪ್ರಚಾರ ಬೆಂಬಲದ ಮೂಲಕ ಕುಮ್ಮಕ್ಕು ಕೊಟ್ಟಿತ್ತು. ಅದರ ಪರಿಣಾಮವಾಗಿ ಎಲ್ಲಾ ಮಾಜಿ ಸೋವಿಯೆತ್ ಗಣರಾಜ್ಯಗಳಂತೆ ಜಾರ್ಜಿಯಾದಲ್ಲೂ ಜನಾಂಗೀಯ ಮತ್ತಿತರ ಪ್ರತ್ಯೇಕತಾವಾದದ ಸಮಸ್ಯೆ ಮುಂದುವರಿದಿದೆ ಮತ್ತು ಇನ್ನಷ್ಟು ಉಲ್ಬಣಗೊಂಡಿದೆ. ರಾಷ್ಟ್ರೀಯತೆ-ಜನಾಂಗೀಯ ಉದ್ರೇಕದ ಮೇಲೆ ಆಧಾರಿತ ಈ ಹೊಸ ದೇಶಗಳಲ್ಲಿ ಎಲ್ಲಾ ರೀತಿಯ ಅಲ್ಪಸಂಖ್ಯಾತರ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಂಡಿದೆ. ರಶ್ಯಾದ ಗಡಿಯಲ್ಲಿರುವ ದಕ್ಷಿಣ ಒಸ್ಸೆಶಿಯ ಮತ್ತು ಅಬ್ಖಾರಿಜಿಯದ ರಶ್ಯನ್ ಮತ್ತು ಇತರ ಅಲ್ಪಸಂಖ್ಯಾತರು ಜಾರ್ಜಿಯಾದಿಂದ ಪ್ರತ್ಯೇಕವಾಗುವ ಪರಿಸ್ಥಿತಿ ಸೃಷ್ಟಿಸಲು ಕಾರಣ ಅಮೆರಿಕದ ಈ ನೀತಿಯೇ. ಈಗ ಅದನ್ನೇ ರಶ್ಯಾದ ವಿರುದ್ಧ ಬಳಸುವ ಹಳೆಯ ಸಾಮ್ರಾಜ್ಯಶಾಹಿ ಆಟ ನಡೆಯಲಿಕ್ಕಿಲ್ಲ ಎಂಬ ಸೂಚನೆ ಈ ಬಿಕ್ಕಟ್ಟಿನಿಂದ ಸಿಕ್ಕಿದೆ. ಜಗತ್ತಿನ 'ಏಕಮಾತ್ರ ಸೂಪರ್ ಪವರ್' ಗೆ ಸವಾಲು ಹಾಕುವ ಬಹುಧ್ರುವೀಯ ಜಗತ್ತು ಬೆಳೆದು ಬರುತ್ತಿದೆ ಎಂಬ ಅರಿವು ಅಮೆರಿಕನ್ ಸಾಮ್ರಾಜ್ಯಶಾಹಿಯಲ್ಲಿ ಇನ್ನೂ ಮೂಡಿದಂತಿಲ್ಲ.

ಬೊಲಿವಿಯ ಜನಮತ ಸಂಗ್ರಹದಲ್ಲಿ ಬಲಪಂಥೀಯರಿಗೆ ಪರಾಭವ

ಬೊಲಿವಿಯದ ಸರ್ಕಾರದ ನೀತಿಗಳ ಬಗ್ಗೆ ನಡೆದ ಜನಮತ ಸಂಗ್ರಹದಲ್ಲಿ ಜನಪ್ರಿಯ ಅಧ್ಯಕ್ಷ ಇವೊ ಮೊರಲೆಸ್ ಭಾರೀ ಬಹುಮತದಿಂದ ಗೆದ್ದಿದ್ದಾರೆ. ಅವರಿಗೆ ಸವಾಲು ಹಾಕಿದ ಬಲಪಂಥೀಯ ಶಕ್ತಿಗಳಿಗೆ ಪರಾಭವ ಆಗಿದೆ. ಇವೊ ಮೊರಲೆಸ್ ಅಧ್ಯಕ್ಷರಾಗಿ ಆಯ್ಕೆಯಾದಾಗ ಅವರು ಗಳಿಸಿದ ಶೇ.54 ಕ್ಕಿಂತ ಸುಮಾರು ಶೇ.10 ಹೆಚ್ಚು ಮತಗಳಿಸಿ ಈ ಜನಮತ ಸಂಗ್ರಹದಲ್ಲಿ ಗೆದ್ದಿದ್ದಾರೆ. ಇದು ಲ್ಯಾಟಿನ್ ಅಮೆರಿಕದಲ್ಲಿ ಎಡ ಶಕ್ತಿಗಳಿಗೆ ಸಂದ ಇನ್ನೊಂದು ದೊಡ್ಡ ವಿಜಯ.

ಬೊಲಿವಿಯದ ಪ್ರಾಕೃತಿಕ ಗ್ಯಾಸ್ ರಾಷ್ಟ್ರೀಕರಣ, ಬಡವರ ಪರ ಭೂಸುಧಾರಣೆ ಮುಂತಾದ ಅಧ್ಯಕ್ಷ ಇವೊ ಮೊರಲೆಸ್ ರ ನೀತಿಗಳಿಗೆ ಅಲ್ಲಿನ ಬಲಪಂಥೀಯ ಶಕ್ತಿಗಳು ಸವಾಲು ಹಾಕಿದ್ದವು. ಕೆಲವು ಶ್ರೀಮಂತ ರಾಜ್ಯಗಳ ಬಲಪಂಥೀಯ ಗವರ್ನರುಗಳು ಅಲ್ಲಿನ ಸಂಪನ್ಮೂಲಗಳ ಮೇಲೆ 'ಸ್ವಾಯತ್ತತೆ'ಯ ನೀತಿಯ ಆಧಾರದ ಮೇಲೆ ನಿಯಂತ್ರಣದ ಹಕ್ಕು ಸಾಧಿಸಿದ್ದರು. ಆ ಮೂಲಕ ಮೊರಲೆಸ್ ಅಧಿಕಾರ ಮೊಟಕು ಮಾಡುವ ಪ್ರಯತ್ನ ಮಾಡಿದರು.

ಈ ವಿವಾದ ಬಿಸಿಯೇರಿದಾಗ ಒಬ್ಬ ಗವರ್ನರ್ ಈ ನೀತಿಯ ಮೇಲೆ 'ವಾಪಸು ಕರೆಸುವ' (ಬೊಲಿವಿಯದ ಸಂವಿಧಾನದಲ್ಲಿ ಲಭ್ಯವಿರುವ) ಜನಮತ ಸಂಗ್ರಹ ಎದುರಿಸಲು ತಯಾರಿದ್ದೀರಾ ? ಎಂದು ಸವಾಲು ಹಾಕಿದರು. ಎಲ್ಲಾ ಗವರ್ನರುಗಳೂ ಇದೇ 'ವಾಪಸು ಕರೆಸುವ' ಜನಮತ ಸಂಗ್ರಹಕ್ಕೆ ಸಿದ್ಧರಿದ್ದರೆ ನಾನೂ ಸಿದ್ಧ ಎಂದರು ಈ ರಾಜಕೀಯ ಸವಾಲು ಸ್ವೀಕರಿಸಿದ ಮೊರಲೆಸ್. ಸವಾಲು ಹಾಕಿದ ಕೊಚಬಾಂಬದ ಗವರ್ನರ್ ಸೇರಿದಂತೆ ಇಬ್ಬರು ಜನಮತ ಸಂಗ್ರಹದಲ್ಲಿ ಸೋತಿದ್ದಾರೆ. ನಾಲ್ವರು ಗೆದ್ದಿದ್ದಾರೆ.

ಆದರೆ ದೇಶದಾದ್ಯಂತ ಶೇ.64 ಕ್ಕೂ ಹೆಚ್ಚು ಮತಗಳಿಕೆಯಿಂದ ಮೊರಲೆಸ್ ತಮ್ಮ ನೀತಿಗಳನ್ನು ಮುಂದುವರೆಸಬಹುದು. ಕೆಲವು ಸಣ್ಣ ರಾಜ್ಯಗಳಿಂದ ಬರುವ ಪ್ರತಿರೋಧವನ್ನು ಧೃಢವಾಗಿ ಎದುರಿಸಲು ಮೊರಲೆಸ್‌ಗೆ ಸಾಧ್ಯವಾಗಬಹುದು. ಇನ್ನೂ ರಾಜಕೀಯ ಪ್ರತಿರೋಧ ಮುಂದುವರೆದರೆ ಅಗತ್ಯ ಸಂವೈಧಾನಿಕ ಬದಲಾವಣೆಗಳಿಗೆ ಮೊರಲೆಸ್ ಮುಂದೊತ್ತಬಹುದು ಎನ್ನಲಾಗಿದೆ. ದೇಶದ ಬಡವರಲ್ಲಿ ಮತ್ತು ಆದಿವಾಸಿಗಳಲ್ಲಿ ತೀವ್ರ ರಾಜಕೀಯ ಪ್ರಜ್ಞೆ ಮತ್ತು ಬೆಂಬಲ ಗಟ್ಟಿಯಾಗಿದೆ ಎಂಬುದೇ ಈ ಮುಂದಿನ ಕ್ರಮಗಳಿಗೆ ಹಾದಿ ಸುಗಮಗೊಳಿಸಬಹುದು.



ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ್ (ಮಾವೋವಾದಿ), ಸಿಪಿಎನ್(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಚಂಡ ಅವರು ನೇಪಾಳ ಗಣತಂತ್ರದ ಪ್ರಥಮ ಪ್ರಧಾನಿಯಾಗಿ ಚುನಾಯಿತರಾಗಿದ್ದಾರೆ.

ಪಡಿತರ, ನಿವೇಶನ, ಬದುಕುವ ಹಕ್ಕಿಗಾಗಿ ಮುಖ್ಯಮಂತ್ರಿ ಮನೆ ಚಲೋ

ಸಮರ್ಪಕ ಪಡಿತರ ವ್ಯವಸ್ಥೆ, ನಿವೇಶನರಹಿತರಿಗೆ ನಿವೇಶನ, ಸರ್ಕಾರಿ ಭೂಮಿ ಹರಾಜು ನೀತಿ ರದ್ಧತಿ ಇತ್ಯಾದಿಗಳಿಗಾಗಿ ನಡೆದ 'ಸಿ.ಎಂ. ಮನೆ ಚಲೋ ' ವರದಿ

ನನಗೆ ಮದುವೆಯಾಗಲಿಕ್ಕೆ ಭಯ ಆಗ್ತಿದೆ ಸಾರ್...! ಯಾಕಂದ್ರೆ, ಮದುವೆಯಾಗಬೇಕೆಂದ್ರೆ, ಮನೆ ಮಾಡ್ಬೇಕು, ಲೀಸ್ ಹಾಕ್ಕೊಂಡ್ರೆ 3 ಲಕ್ಷ ಬೇಕು ಅಥವಾ ಬಾಡಿಗೆ ಅಂದ್ರೆ ಅಡ್ವಾನ್ಸ್ ಸೇರಿ ಕನಿಷ್ಠ 50 ಸಾವಿರ ರೂ.ಬೇಕು ನನ್ಗೆ ಬರೋ ಸಂಬಳದಲ್ಲಿ ಇದನ್ನೆಲ್ಲಾ ಹೇಗೆ ಹೊಂದಿಸೋಕೆ ಹೇಗ್ ತಾನೆ ಆಗ್ಬೇಕು ಸಾರ್...?" ಇದು ಬೆಂಗಳೂರಿನ ಅವಿವಾಹಿತ ಯುವಕನೊಬ್ಬನ ಭವಿಷ್ಯದ ಬಗೆಗಿನ ಭಯ. ನಿಜ. ಬೆಂಗಳೂರು ದುಬಾರಿಯಾಗಿದೆ.

ಸಂಬಳದ ಬಹುಪಾಲು ಬಾಡಿಗೆಗೆ ಎಂಬಂತಾಗಿದೆ. ಬೆಲೆ ಏರಿಕೆಯ ಬಿಸಿಯಲ್ಲಿ ಜನಸಾಮಾನ್ಯರ ಬದುಕು ಅತಂತ್ರವಾಗುತ್ತಿರುವ ಮಧ್ಯೆ ಬೆಂಗಳೂರಿನಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿ ಖಾಸಗೀಯವರ ಪಾಲಾಗುತ್ತಿರುವ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಇಂತಹ ಒಂದು ಚರ್ಚೆಯನ್ನು ಹುಟ್ಟು ಹಾಕಿದ್ದು ಸಿಪಿಐ(ಎಂ)ನ ಕಳೆದ ವಿಧಾನಸಭಾ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವಿಧಾನಸಭೆಯಲ್ಲಿ ಅವರು ಎತ್ತಿದ ಪ್ರಶ್ನೆಯ ಕುರಿತು ಇಡೀ ಬೆಂಗಳೂರೇ

ಮೆರವಣಿಗೆ ಹೊರಡುವ ಮುನ್ನ ಟೌನ್‌ಹಾಲ್ ಬಳಿ



ಮಾತನಾಡುತ್ತಿದೆ.

ಬೆಂಗಳೂರು ನಗರದಲ್ಲಿರುವ ಸುಮಾರು 41 ಸಾವಿರ ಎಕರೆ ಸರ್ಕಾರಿ ಜಮೀನು ಖಾಸಗಿಯವರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ತನಿಖಾ ಸಮಿತಿ ಹೊರಗಿಟ್ಟಾಗ ಬೆಂಗಳೂರಿನ ಭೂ ಮಾಫಿಯಾದ ತೊಡೆ ನಡುಗಿದ್ದು ಸಹಜವೇ

ಅಂದು ಸಿಪಿಐ(ಎಂ) ನೇತೃತ್ವದಲ್ಲಿ ಈ 41 ಸಾವಿರ ಎಕರೆ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಈ ಭೂಮಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಹಾಗೂ ಬಡವರಿಗೆ ಉಚಿತ ನಿವೇಶನ ಮಾಡಬೇಕೆಂದು ಒತ್ತಾಯಿಸಿ ಸಾವಿರಾರು ಜನರ ಬೃಹತ್ ಪ್ರತಿಭಟನೆ ನಡೆಸಲಾಗಿತ್ತು. ಅಂದು ಸಿ.ಎಂ. ಕುಮಾರಸ್ವಾಮಿಯವರು ಒಂದು ಸಾವಿರ ಎಕರೆ ಭೂಮಿ ನೀಡುವುದಾಗಿ ಭರವಸೆ ನೀಡಿದ್ದರೂ ಕೂಡ.

ಸದ್ಯ ಬಂದಿರುವ ಬಿಜೆಪಿ ನೇತೃತ್ವದ ಸರ್ಕಾರ ಈ ಸರ್ಕಾರಿ ಜಮೀನನ್ನು ಖಾಸಗಿಯವರಿಗೆ ಮಾರಲು ಒಂದು ಆಯೋಗವನ್ನೇ ರಚನೆ ಮಾಡಿದೆ. ಈ ಆಯೋಗದ ಕೆಲಸವೇನೆಂದರೆ ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ ಅಥವಾ ಸರ್ಕಾರಿ ಜಮೀನು ಒತ್ತುವರಿಯಾಗಿದೆಯೋ ಆ ಎಲ್ಲಾ ಭೂಮಿಯನ್ನು ಮತ್ತೆ ಇದೇ ಕಳ್ಳರಿಗೆ ಮೂರು ಕಾಸಿಗೆ ಮಾರುವ ಭಾರಿ ಮಹತ್ವಾಕಾಂಕ್ಷೆ ಯೋಜನೆ...!

ಕೋಟಿಗಟ್ಟಲೆ ಅಕ್ರಮ ಆಸ್ತಿ ಹೊಂದಿರುವ ಬಹುಪಾಲು ಖದೀಮರೇ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ತನಿಖಾ ಸಮಿತಿ ಬೆಳಕು ಚೆಲ್ಲಿದೆ. ಆದರೆ ಆ ಜಮೀನನ್ನು ಇದೇ ಖದೀಮರ ಕೈಗೆಡುವ ಯಡಿಯೂರಪ್ಪನವರ ಉದ್ದೇಶ ಏನು ಎಂಬುದು ಇಲ್ಲಿ ಪ್ರಶ್ನೆಯಾಗಿದೆ.



ಪ್ರತಿಭಟನಾ ಸಭೆ

ಬೆಂಗಳೂರಿನ ಶೇ.70ರಷ್ಟು ಜನ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಸ್ವಂತ ನಿವೇಶನವಾಗಲೀ, ಮನೆಯಾಗಲಿ ಇಲ್ಲ. ಬಹುತೇಕ ಬಡಾವಣೆ ಗಳಾಗಲಿ, ಸರ್ಕಾರಿ ಶಾಲೆಗಳಾಗಲಿ, ಸರ್ಕಾರಿ ಆಸ್ಪತ್ರೆಗಳಾಗಲಿ, ಆಟದ ಮೈದಾನಗಳಾಗಲಿ ಇಲ್ಲ. ಕಲ್ಯಾಣ ಮಂಟಪಗಳಿಗಾಗಿ ಲಕ್ಷಗಟ್ಟಲೆ ಹಣ ಮದುವೆಗೆ ಖರ್ಚು ಮಾಡಬೇಕಾದ ಪರಿಸ್ಥಿತಿಯಲ್ಲಿ ಸರ್ಕಾರಿ ಸಮುದಾಯ ಭವನ ಬೆಂಗಳೂರಿನಲ್ಲಿ ಹುಡುಕಿದರೆ ಕನಿಷ್ಟ ಒಂದೂ ಕೂಡ ಸಿಗುವುದು. ಜೊತೆಗೆ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ಇರುವ ಸರ್ಕಾರಿ ಜಮೀನನ್ನು ಖಾಸಗಿಯವರಿಗೆ ಮಾರುವುದು ಎಷ್ಟು ಸರಿ?

ಸರ್ಕಾರದ ಈ ಬಡಜನ ವಿರೋಧಿ ನೀತಿಯ ವಿರುದ್ಧ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ನಗರದ ಟೌನ್‌ಹಾಲ್‌ನಿಂದ ಮೆರವಣಿಗೆ ನಡೆಸಿತು. ಮುಖ್ಯಮಂತ್ರಿ ಮನೆಯವರೆಗೆ ತೆರಳಬೇಕೆಂದಿದ್ದ ಪ್ರತಿಭಟನಾಕಾರರನ್ನು ಹಳೇ ಸೆಂಟ್ರಲ್ ಜೈಲ್ ಬಳಿಯೇ ತಡೆದು ನಿಲ್ಲಿಸಿದ ಪೋಲೀಸರು ಸಿ.ಎಂ. ಮನೆಗೆ ತೆರಳಲು ಅವಕಾಶ ನೀಡಲಿಲ್ಲ.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡುತ್ತಿರುವ ಜಿ.ಸಿ.ಬಯ್ಯಾರೆಡ್ಡಿ



ಬೆಂಗಳೂರಿನಲ್ಲಿ ಒತ್ತುವರಿಯಾಗಿರುವ 41 ಸಾವಿರ ಎಕರೆ ಸರ್ಕಾರಿ ಜಮೀನನ್ನು ಕೂಡಲೇ ಸರ್ಕಾರ ವಶಪಡಿಸಿಕೊಳ್ಳಬೇಕು ಹಾಗೂ ಈ ವಶಪಡಿಸಿಕೊಂಡ ಜಮೀನನ್ನು ಖಾಸಗಿಯವರಿಗೆ ಹರಾಜು ಮೂಲಕ ಮಾರುವ ಕ್ರಮವನ್ನು ಕೈಬಿಡಬೇಕು. ಈ ಭೂಮಿಯಲ್ಲಿ ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ನಿವೇಶನ ರಹಿತರಿಗೆ ನಿವೇಶನಗಳಾಗಿ ನೀಡಬೇಕು. ಆಗಸ್ಟ್ 27 ರಿಂದ ಸರ್ಕಾರಿ ಜಮೀನು ಹರಾಜು ಹಾಕಲು ನಿರ್ಧರಿಸಿದ್ದು, ಈ ಆದೇಶವನ್ನು ಕೈಬಿಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಯಡಿಯೂರಪ್ಪ ನೇತೃತ್ವದ ಸರ್ಕಾರ ಸರ್ಕಾರಿ ಭೂಮಿಯನ್ನು ಭೂಗಳ್ಳರಿಗೆ ಕ್ರಯ ಮಾಡುವ ಕೆಲಸಕ್ಕೆ ಇಳಿದಿದೆ. 60 ಸಾವಿರ ಉಚಿತ ನಿವೇಶಗಳನ್ನು ನೀಡುವುದಾಗಿ ಹೇಳಿದ್ದ ಸರ್ಕಾರ ಈ ಬಗ್ಗೆ ಚಕಾರವೆತ್ತುತ್ತಿಲ್ಲ. ಈ ಮೂಲಕ ಸರ್ಕಾರ ಜನರನ್ನು ನೇರವಾಗಿ ವಂಚಿಸುತ್ತಿದೆ ಎಂದು ಆರೋಪಿಸಿದರು.

ರೇಷನ್‌ಕಾರ್ಡ್ ವಿಚಾರದಲ್ಲಿ ಎಪಿಎಲ್ -ಬಿಪಿಎಲ್ ಎಂದು ಬಣ್ಣ ಬದಲಾಯಿಸಿ ವಿನಾಕಾರಣ ವಿತರಣೆಯಲ್ಲಿ ವಿಳಂಬ ಮಾಡುತ್ತಿರುವ ಸರ್ಕಾರ 3 ಲಕ್ಷ ಕಾರ್ಡುದಾರರನ್ನು ಕೇವಲ 70 ಸಾವಿರಕ್ಕೆ ಇಳಿಸಲು ಹೊರಟಿದೆ. ಈ ಮೂಲಕ ಬಡಜನರನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ದೂರ ಮಾಡುವ ವ್ಯವಸ್ಥಿತ ಹುನ್ನಾರವಾಗಿದೆ. ಈ ಜನವಿರೋಧಿ ನೀತಿಗಳನ್ನು ಕೈಬಿಡಬೇಕು. ಸರ್ಕಾರಿ ಜಮೀನನ್ನು ಬಡವರಿಗೆ ಹಂಚಲು ಕ್ರಮ ವಹಿಸಬೇಕು. ಈ ತಿಂಗಳ 27 ರಂದು ಹರಾಜು ಹಾಕುವ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಪ್ರಸನ್ನಕುಮಾರ್, ಜಿಲ್ಲಾ ಮುಖಂಡರಾದ ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಗೌರಮ್ಮ, ಹೆಚ್.ಎನ್.ಗೋಪಾಲ ಗೌಡ, ಮುಂತಾದವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಹರಾಜು ಪ್ರಕ್ರಿಯೆಯನ್ನು ಕೈಬಿಡದಿದ್ದಲ್ಲಿ 27 ರಂದು ಹರಾಜನ್ನು ತಡೆಯಲಾಗುವುದು ಎಂದು ಎಚ್ಚರಿಸಲಾಯಿತು.

ಸಿಪಿಐ(ಎಂ) ಮುಂದಿಟ್ಟ ಸಲಹೆಗಳು :

1. ಮಹಾರಾಷ್ಟ್ರದ ಸೊಲ್ಲಾಪುರ ಮಾದರಿಯಲ್ಲಿ ಬೀಡಿ, ಅಗರಬತ್ತಿ ಕಾರ್ಮಿಕರಿಗೆ ಹಾಗೂ ಆಟೋ ಚಾಲಕರಿಗೆ ಪ್ರತ್ಯೇಕ ಕಾಲೋನಿಗಳನ್ನು ಮಾಡಿ, ಕೇಂದ್ರ/ರಾಜ್ಯ ಸರ್ಕಾರದಿಂದ ಬರುವ ವಿವಿಧ ಸ್ಕೀಂಗಳ ಅಡಿಯಲ್ಲಿ ಮನೆ ನಿರ್ಮಿಸಿಕೊಡಬೇಕು.
2. ಸರ್ಕಾರಿ ಭೂಮಿ ಹರಾಜು ಪ್ರಕ್ರಿಯೆ ನಿಲ್ಲಿಸಬೇಕು, ಬದಲಾಗಿ ಸರ್ಕಾರಿ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸಬೇಕು.
3. 41 ಸಾವಿರ ಎಕರೆ ಭೂಮಿಯಲ್ಲಿ ಕನಿಷ್ಠ 2 ಸಾವಿರ ಎಕರೆ ಭೂಮಿಯನ್ನು ಬಡಜನರಿಗೆ ನಿವೇಶಗಳಾಗಿ ನೀಡಬೇಕು. ಈ ಮೂಲಕ ಹಂತ ಹಂತವಾಗಿ ಪ್ರತಿಯೊಬ್ಬರಿಗೂ ಸ್ವಂತ ನಿವೇಶನ ಒದಗಿಸಬಹುದು.

- ಲಿಂಗರಾಜು

ಮಂಗಳೂರು : ನ್ಯಾಯಕ್ಕಾಗಿ ನಿಲ್ಲದ ಹೋರಾಟ

ಪುಟ 6 ರಿಂದ

ಕಾರ್ಯದರ್ಶಿ ಪ್ರದೀಪ್ ಸೇರಿದಂತೆ 12 ಮಂದಿಯನ್ನು ಪೊಲೀಸರು ಬಂಧಿಸಿದರು. ಮರುದಿನ ಎಸ್‌ಎಫ್‌ಐ ನೇತೃತ್ವದಲ್ಲಿ ಮನಪಾ ಕಚೇರಿಯೆದುರು ಪ್ರತಿಭಟನೆ ನಡೆಯುತ್ತಿದ್ದಾಗ ಎಸ್‌ಎಫ್‌ಐ ಜಿಲ್ಲಾ ನಾಯಕರಾದ ಮನೋಜ್ ವಾಮಂಜೂರು ಹಾಗೂ ಬಜಾಲ್‌ನ ಡಿವೈಎಫ್‌ಐ ಕಾರ್ಯಕರ್ತರಾದ ರಾಕೇಶ್ ರವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಯಿತು.

ರಾಜ್ಯಾದ್ಯಂತ ಭಾರೀ ಸುದ್ದಿಯಾಗಿ ಘಟನೆ ನಡೆದ ಮರುದಿನವೇ ಪ್ರತಿಭಟನೆಗಳೂ ನಡೆದವು. ಅಲ್ಲದೇ ಮರುದಿನವೇ ಸಿಪಿಐ(ಎಂ) ಹಾಗೂ ಡಿವೈಎಫ್‌ಐನ ರಾಜ್ಯ ಮುಖಂಡರು ಮಂಗಳೂರಿಗೆ ಆಗಮಿಸಿದರು. ಅಂದು ಸಂಜೆ ಸಿಪಿಐ(ಎಂ) ಪಕ್ಷದ ಕಚೇರಿಯಲ್ಲಿ ಕಿಕ್ಕಿರಿದ ಕಾರ್ಯಕರ್ತರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ನಾಯಕರೂ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎನ್.ಎಲ್.ಭರತ್ ರಾಜ್‌ರವರು ಮಾತನಾಡಿದರು. 2 ದಿನಗಳ ಕಾಲ ಜೈಲುವಾಸ ಅನುಭವಿಸಿ ಹೋಗ .... 14 ಮಂದಿ ಸಂಗಾತಿಗಳನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವರವರು ಹೂಮಾಲೆ ಹಾಕಿ ಸ್ವಾಗತಿಸಿದರು. ಆಡಳಿತದಲ್ಲಿರುವ ಬಿಜೆಪಿ ಪೊಲೀಸ್ ಯಂತ್ರವನ್ನು ದುರ್ಬಳಕೆ ಮಾಡಿ ಜನಪರ ಹೋರಾಟವನ್ನು ಬಗ್ಗುಬಡಿಯುವ ಉದ್ದೇಶ ದಿಂದಲೇ ಸುಮಾರು 45 ಮಂದಿಯ ಮೇಲೆ ಕೇಸ್ ದಾಖಲಿಸಿದ್ದಾರೆ.


ಬೀಜಿಂಗ್ ಒಲಂಪಿಕ್ಸ್:
ಅಂತೂ ಇಂತೂ ಬಂತು ಭಾರತಕ್ಕೊಂದು ಚಿನ್ನ




ಶೂಟಿಂಗ್‌ನಲ್ಲಿ ಬಂಗಾರದ ಪದಕ ಪಡೆದು ನೂತನ ದಾಖಲೆ ಬರೆದ ಭಾರತದ ಅಭಿನವ ಬಿಂದ್ರಾ. ಹಾಕಿ ಯಂತಹ ಸಾಮೂಹಿಕ ಕ್ರೀಡೆಗಳಲ್ಲಿ ಭಾರತ ಬಂಗಾರ ಪದಕ ಪಡೆದಿತ್ತೆ ವಿನಃ ವೈಯಕ್ತಿಕ ವಿಭಾಗದಲ್ಲಿ ಭಾರತ ದೇಶವು ಬಂಗಾರದ ಪದಕ ಪಡೆದಿರುವುದು ಒಲಂಪಿಕ್ಸ್ ಇತಿಹಾಸದಲ್ಲೇ ಇದು ಮೊದಲು'



100 ಮೀ. ಮಹಿಳೆಯರ ಓಟದಲ್ಲಿ ಚಿನ್ನದ ಪದಕ ಗೆದ್ದ ಜಮೈಕಾದ ಶೆಲ್ಲಿ ಆ್ಯನ್ ಫ್ರೇಸರ್ 10.78 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಅವರು ಪದಕ ಗಳಿಸಿದರು.



'ಒಂದೇ ಒಲಂಪಿಕ್ಸ್ ಸ್ಪರ್ಧೆಯಲ್ಲಿ, ಅದೂ ಈಜು ವಿಭಾಗದಲ್ಲಿ 8 ಚಿನ್ನದ ಪದಕ ಪಡೆಯುವ ಮೂಲಕ ಅತಿ ಹೆಚ್ಚು ಪದಕ ಗೆದ್ದ ವಿಶ್ವ ದಾಖಲೆ ಸ್ಥಾಪಿಸಿದ ಅಮೇರಿಕಾದ ಮೈಕಲ್ ಫೆಲ್ಪ್ಸ್. ಅಮೇರಿಕಾದವರೇ ಆದ ಮಾರ್ಕ್ಸ್ ಸ್ಪಿಟ್ಜ್ ಅವರ 7 ಚಿನ್ನದ ಪದಕಗಳ ದಾಖಲೆಯನ್ನು ಫೆಲ್ಪ್ಸ್ ಮುರಿದಿದ್ದಾರೆ.



100 ಮೀ. ಪುರುಷರ ಓಟದಲ್ಲಿ 9.69 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ನೂತನ ವಿಶ್ವ ದಾಖಲೆ ಸ್ಥಾಪಿಸಿದ ಜಮೈಕಾದ ಉಸೇನ್ ಬೋಲ್ಟ್

ಕಾಮ್ರೇಡ್ ಸೂರಿ



ಕವನ

ಸದಾ ಸನ್ನದ್ಧ

ಒಡಲೊಳಗೆ ಸದಾ ಗುಡುಗುಡುಗುವ
ಅಗ್ನಿಪರ್ವತ ಭೋರ್ಗರೆದು ಅಪ್ಪಳಿಸುವ
ತೋಯ್ದು ತೊನೆಯುವ ಕಡಲು-
ಅಲೆಗಳ ಮಧ್ಯೆ ಎದೆಯೆತ್ತಿ ನಿಂತು
ಕತ್ತಲಲ್ಲೂ ಬೆಳಕು ಚಿಮ್ಮುವ ದೀಪಸ್ತಂಭ

ಯಾವತ್ತೂ ಘೋಷಣೆ, ಮೆರವಣಿಗೆ, ಭಾಷಣಗಳ ನಿರತ
ಆದರೂ ಕೇರಿಗಳ, ಕಾಲೋನಿಗಳ
ಹಸಿದ ಮನಸುಗಳ ಗದ್ಗದಿತ ಸ್ವಾಗತ
ಮರ್ಮರಗಳ ಕಿವಿಯಾನಿಸಿ ಆಲಿಸಿದ
ಪ್ರಿಯ ಸಂಗಾತಿ ಈತ

ಯುದ್ಧಕ್ಕೆ ಸದಾ ಸನ್ನದ್ಧ
ನಿವೃತ್ತಿಯೇ ಗೊತ್ತಿಲ್ಲದ ಯೋಧ
ಕಳಚಲಿಲ್ಲ ಸಮವಸ್ತ್ರ ಕೊನೆಯತನಕ
ನಡೆಯುತ್ತಲೇ ಹೋದ
ಕೆಂಬಾವುಟವ ಮೇಲೆತ್ತಿ ಹಿಡಿದು
ಅಪಾರ ಜನಸ್ತೋಮದ ತುಕಡಿಯನ್ನ ಮುನ್ನಡೆಸುತ್ತಾ
ಮುಂಚೂಣಿಯಲ್ಲಿದ್ದ ಈ ದಂಡನಾಯಕನ
ಜೀವನವೇ ಒಂದು ಬೃಹತ್ ಜಾಥಾ

- ಐ.ಆರ್.ಪ್ರಮೋದ್
ವಕೀಲರು, ವಿರಾಜಪೇಟೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST
PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and
Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor : S.Y.GURUSHANTH